ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಜನವರಿ 20, 2010 ರೂ. 12/-



ಗೀತ ಗಾಥೆ

ವಿಷ್ಣು ಹೆಣ ಏನಾಯ್ತು?





IAS ರಂಗಸ್ವಾಮಿಯ ಯಾಮಿನಿ ಪ್ರಕರಣ



ರೈತರಿಗೆ ಹಿಟ್ಲರ್ ಯಡ್ಡಿಯ ಕೈಕೋಳ


BBMP ವಾರ್ಡ್‌ವಾರ್

ಜಯನಗರ ರಾಮು ಸೋಮು ಎಂಬ ಹಕ್ಕಬುಕ್ಕರಿಗಾಗಿ?

ವಿಜಯನಗರವೋ? ಮುಘಲರಾಳ್ವಿಕೆಯೋ?.. ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ!

"ಇತ್ತೀಚೆಗೆ ತಾನೆ ಬಂದ ನೆರೆಯಿಂದ ಸಂತ್ರಸ್ತರಾಗಿ ಹಂಪಿಯ ಆಸುಪಾಸಿನಲ್ಲೇ ಜನ ಆಸರೆಗಾಗಿ ಹಾತೊರೆಯುತ್ತಿರುವಾಗ ಕೃಷ್ಣದೇವ ರಾಯನ ಪಟ್ಟಾಭಿಷೇಕದ 500ನೇ ವರ್ಷವನ್ನು ಬಿಜೆಪಿ ಸರ್ಕಾರ 30 ಕೋಟಿಗೂ ಹೆಚ್ಚು ವೆಚ್ಚದಲ್ಲಿ ವೈಭವದಿಂದ ಆಚರಿಸುವ ತಯಾರಿಯಲ್ಲಿ ತೊಡಗಿದೆ. ಇದೇ ಜನವರಿ 27, 28, 29ರಂದು ಹಂಪಿಯಲ್ಲಿ ಈ ವಿಜಯನಗರ ಸಾಮ್ರಾಜ್ಯದ ದೊರೆಯ ಮಹೋತ್ಸವ ವೈಭವೋಪೇತವಾಗಿ ನಡೆಯಲಿದೆ.

ಮಿಕ್ಕ ವಿಷಯಗಳಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ರೆಡ್ಡಿ ಬ್ರದರ್ಸ್‌ಗಳ ಈ ಅಜೆಂಡಾಗೆ ಮಾತ್ರ ಬಿಜೆಪಿ ಸರ್ಕಾರದ ಯೋಜಿತ ಬೆಂಬಲ ಮತ್ತು ಸಕಲ ಉತ್ತೇಜನ ಸಿಗುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ವಿಜಯನಗರ ಸಾಮ್ರಾಜ್ಯವನ್ನು 'ಕರ್ನಾಟಕದ ಸುವರ್ಣಯುಗ'ವೆಂದು ಮೊದಲಿಂದಲೂ ಪ್ರಚಾರ ಮಾಡುತ್ತಾ ಬಂದವರೇ ಹಿಂದೂತ್ವವಾದಿ ಇತಿಹಾಸಕಾರರು. ಅವರ ಪ್ರಕಾರ ಕೃಷ್ಣದೇವರಾಯ "ಮುಸ್ಲಿಂ ದುರಾಕ್ರಮಣದಿಂದ ಕಂಗೆಟ್ಟಿದ್ದ ಹಿಂದೂ ಸಂಸ್ಕೃತಿಯನ್ನು ಉದ್ಧಾರ ಮಾಡಿದವರು ಮತ್ತು ಅವರಿಗೆ ತಕ್ಕ ಪಾಠ" ಕಲಿಸಿದವರು. ಹೀಗಾಗಿ ವಿಜಯನಗರ ಸಾಮ್ರಾಜ್ಯವೆಂದರೆ ಅವರ ಪಾಲಿಗೆ ಹಿಂದೂ ಹಿರಿಮೆಯನ್ನು ಲೋಕಕ್ಕೇ ಸಾರಿದ ಹಿಂದೂ ಸಾಮ್ರಾಜ್ಯ. ಆದರೆ ಯಾವ ಇತಿಹಾಸಕಾರರೂ ನಿಜಕ್ಕೂ ಅಲ್ಲಿ ಯಾರನ್ನು ಹಿಂದೂಗಳೆಂದು ಕರೆಯಲಾಗುತ್ತಿತ್ತೋ ಆ ರೈತಾಪಿ, ವರ್ತಕ, ಕುಶಲಕರ್ಮಿ ಜನತೆಯ ಪಾಡೇನಿತ್ತು ಎಂದು ಅಧ್ಯಯನ ಮಾಡುವ ಪ್ರಯತ್ನವನ್ನೇ ಮಾಡಿಲ್ಲ. ಇಂದೂ ಕೂಡಾ ಅಷ್ಟೆ! ಹಿಂದೂಗಳೆಂದು ಕರೆಸಿಕೊಳ್ಳಲ್ಪಡುವ ರೈತರ ಪಾಡು ಏನೇ ಇದ್ದರೂ ಅವರಲ್ಲಿ ಹಿಂದೂ ಹಿರಿಮೆಯನ್ನು ಬಿತ್ತಲು ಸರ್ಕಾರ ಹಣಹೂಡುತ್ತದೆ. ಆದ್ದರಿಂದಲೇ "ರೈತರ ಸಾಲಾಮನ್ನಾ ಮಾಡುವುದಕ್ಕೆ, ನೆರೆ ಪರಿಹಾರಕ್ಕೆ ಬೊಕ್ಕಸದಲ್ಲಿ ದುಡ್ಡಿಲ್ಲ, ಹೊಸ ತೆರಿಗೆ ಹಾಕಬೇಕಾಗುತ್ತಿದೆ" ಎಂದು ಹೇಳುತ್ತಿರುವ ಇದೇ ಸರ್ಕಾರ ವಿಜಯನಗರ ಉತ್ಸವಕ್ಕೆ ಮಾತ್ರ 30 ಕೋಟಿ ರೂ. ಬಿಡುಗಡೆ ಮಾಡಿದೆ.



ಇತಿಹಾಸದಲ್ಲಿ ಸಾಧನೆ ಮತ್ತು ವೈಭವ ಎಂದು ಬಣ್ಣಿತವಾದದ್ದೆಲ್ಲಾ ಆ ಕಾಲದ ಆಳುವ ವರ್ಗಗಳ ವೈಭವವೇ ವಿನಃ ಸಾಮಾನ್ಯ ಜನರ ಬದುಕಿನ ವೈಭವವಲ್ಲ. ಇತಿಹಾಸದಲ್ಲಿ ಸಾಮಾನ್ಯ ಜನರ ಬದುಕೇನು ಎಂದು ಅರ್ಥಮಾಡಿಕೊಳ್ಳಬೇಕೆಂದರೆ ಇತಿಹಾಸವನ್ನು ನೋಡುವ ನಮ್ಮ ದೃಷ್ಟಿಕೋನವೇ ಬದಲಾಗಬೇಕು. ಆಗ ಮಾತ್ರ "ಪ್ರಭುವೇರಿದ ಪಲ್ಲಕ್ಕಿಯನ್ನಲ್ಲದೆ" ಅದನ್ನು "ಹೊತ್ತ ಭೋವಿಗಳ ಬದುಕನ್ನು" ನೋಡಲು ಸಾಧ್ಯವಾಗುತ್ತದೆ. ತಾಜ್‌ಮಹಲ್‌ನಲ್ಲದೆ "ಅದಕ್ಕೆ ಕಲ್ಲು ಹೊತ್ತ ಕೂಲಿಗಳ ಬದುಕನ್ನು" ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದಲೇ ಕುವೆಂಪುರವರು ಇತಿಹಾಸವನ್ನು "ರೈತ ದೃಷ್ಟಿ"ಯಿಂದ ನೋಡಿ


"ಕರಿಯರರದೋ? ಬಿಳಿಯರದೊ? ಯಾರಾದರೆ ಏನು?

ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!

ವಿಜಯನಗರವೋ?
ಮುಘಲರಾಳ್ವಿಕೆಯೋ?
ಇಂಗ್ಲಿಷರೋ?

ಎಲರೂ ಜಿಗಣೆಗಳೇ ನನ್ನ ನೆತ್ತರಿಗೆ!"





ಎಂಬ ಸಾರ್ವಕಾಲಿಕ ಸತ್ಯವನ್ನು ಸಾರಿದ್ದಾರೆ.

ಹೀಗಾಗಿಯೇ ಕನ್ನಡನಾಡಿನ ಈ ತಥಾಕಥಿತ ಸುವರ್ಣಯುಗವನ್ನು "ರೈತ ದೃಷ್ಟಿ"ಯಿಂದ ನೋಡುವ ಅಗತ್ಯವಿದೆ.

ಮೊಟ್ಟಮೊದಲನೆಯದಾಗಿ ಕೃಷ್ಣದೇವರಾಯನಾಗಲಿ, ವಿಜಯನಗರದ ಇನ್ನಿತರ ಸಾಮ್ರಾಟರ ಆಡಳಿತವನ್ನಾಗಲಿ ಇಂದಿನ ಅರ್ಥದಲ್ಲಿ ಹಿಂದೂಪರವೆಂದೂ ಅಥವಾ ಮುಸ್ಲಿಂ ವಿರೋಧಿಯೆಂದೂ ಹೇಳಲು ಸಾಧ್ಯವೇ ಇಲ್ಲ. ಅದೇರೀತಿ ವಿಜಯನಗರದ ಸಮಕಾಲೀನರಾಗಿದ್ದ ಬಿಜಾಪುರದ ಆದಿಲ್‌ಶಾಹಿ ಆಡಳಿತವನ್ನು ಮುಸ್ಲಿಂ ಸಾಮ್ರಾಜ್ಯವೆಂದೂ ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ ಎರಡನೇ ದೇವರಾಯನ ಸೇನೆಯಲ್ಲಿ 10,000 ಕ್ಕೂ ಹೆಚ್ಚು ರಾವುತರಿದ್ದರೆಂದು A.H. ಲಾಂಗ್‌ಹರ್ಸ್ಟ್ ಎಂಬ ಇತಿಹಾಸಕಾರ ದಾಖಲಿಸಿದ್ದಾನೆ. ಅದೇರೀತಿ ಕೃಷ್ಣದೇವರಾಯ ನಡೆಸಿದ ಬಹುಪಾಲು ಯುದ್ಧಗಳು ಹಿಂದೂಗಳ ಮೇಲೇ ಆಗಿತ್ತು, ಅವರು ಹಿಂದೂಗಳೆಂಬ ಕಾರಣಕ್ಕೆ ಅಲ್ಲ, ಬದಲಿಗೆ ರಾಜ್ಯ ವಿಸ್ತರಣೆಯ ಕಾರಣಕ್ಕೆ. ಹಾಗೆಯೇ ಬಿಜಾಪುರದ ಆದಿಲ್‌ಶಾಹಿಗಳು ಸ್ವಾತಂತ್ರ್ಯ ಘೋಷಿಸಿಕೊಂಡಿದ್ದು ಮುಸ್ಲಿಮ್ ಮುಘಲ್ ದೊರೆಗಳ ವಿರುದ್ಧವಾಗಿ. ಅವರ ಸೇನೆಯಲ್ಲೂ ಪ್ರಮುಖವಾಗಿ ಹಿಂದೂಗಳೇ ಇದ್ದರು. ಹೀಗಾಗಿ ಯುದ್ಧಾನಂತರ ನಡೆಯುತ್ತಿದ್ದ ಲೂಟಿ ಮತ್ತು ವಿನಾಶದಲ್ಲಿ ಮುಸ್ಲಿಂ ಸೈನಿಕರಷ್ಟೇ ಹಿಂದೂ ಸೈನಿಕರೂ ಪಾಲ್ಗೊಳ್ಳುತ್ತಿದ್ದರು. ಹಿಂದೂಗಳನ್ನು ಲೂಟಿ ಹೊಡೆಯಬೇಕು ಎನ್ನುವ ಕೋಮುವಾದಿ ಉದ್ದೇಶದಿಂದಲ್ಲ, ಬದಲಿಗೆ ಅಂದಿನ ಸೈನ್ಯವನ್ನು ಸೇರಲು ಅದು ಬಹುದೊಡ್ಡ ಆಕರ್ಷಣೆಯಾಗಿತ್ತು ಎಂಬ ಕಾರಣಕ್ಕೆ. ಇದು ಆದಿಲ್‌ಶಾಹಿ ಹಾಗೂ ಬಹಮನಿ ಸೇನೆಗಳಿಗೆ ಎಷ್ಟು ಅನ್ವಯವಾಗುತ್ತದೋ ಅಷ್ಟೇ ಮಟ್ಟಿಗೆ ವಿಜಯನಗರದ ಸೇನೆಗೂ ಅನ್ವಯವಾಗುತ್ತದೆ. ಅದು ಯಾರ ಕೋಮುವಾದೀ ಕಾರಸ್ಥಾನವೂ ಅಲ್ಲ, ಬದಲಿಗೆ ಆ ಕಾಲಘಟ್ಟದ ಬರ್ಬರ ಯುದ್ಧನೀತಿ.

ಬ್ರಹ್ಮಾದೇಯ, ದೇವಾದೇಯ ಪದ್ಧತಿಗಳನ್ನು ಪರಿಚಯಿಸಿ ಕೃಷ್ಣದೇವರಾಯ ಗ್ರಾಮೀಣ ಪದ್ಧತಿಯಲ್ಲಿ ಹಲವಾರು ಸುಧಾರಣೆಯನ್ನು ತಂದನೆಂದು ಬಣ್ಣಿಸಲಾಗುತ್ತದೆ. ಆದರೆ ಈ ಬ್ರಹ್ಮಾದೇಯ ಮತ್ತು ದೇವಾದೇಯ ಪದ್ಧತಿಗಳಿಂದಲೇ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ರೈತರನ್ನು ಸುಲಿಯುವ ಊಳಿಗಮಾನ್ಯ ಭೂಮಾಲೀಕ ಪದ್ಧತಿ ಜಾರಿಗೆ ಬಂತು. ಬ್ರಹ್ಮಾದೇಯವೆಂದರೆ ಬ್ರಾಹ್ಮಣರ ಪುರೋಹಿತಶಾಹಿ ಸೇವೆಯ ಬದಲಿಗೆ ರಾಜ ಅವರಿಗೆ ನೀಡುತ್ತಿದ್ದ ಹಳ್ಳಿಗಳ ಉಂಬಳಿಗಳು. ಈ ಹಳ್ಳಿಗಳಲ್ಲಿ ತೆರಿಗೆಯನ್ನು ವಸೂಲಿ ಮಾಡುವ ಪರಮಾಧಿಕಾರ ಈ ಬ್ರಾಹ್ಮಣ ಫಲಾನುಭವಿಗಳಿಗೇ ಸೇರುತ್ತಿತ್ತು, ಕೆಲವು ಬಾರಿ ಇಂತಿಷ್ಟೆಂದು ರಾಜನಿಗೆ ಕೊಟ್ಟು ಮಿಕ್ಕೆಲ್ಲವನು ಅವರೇ ಅನುಭವಿಸಬಹುದಿತ್ತು. ಅದರ ಮೇಲೆ ರಾಜನ ನಿಯಂತ್ರಣವೇನೂ ಇರಲಿಲ್ಲ. ಹೀಗೆ ಬ್ರಹ್ಮಾದೇಯವೆಂದರೆ ಒಂದು ರೀತಿಯ ಹಳೆಯ ಕಾಲದ ಎಸ್‌ಇಜೆಡ್‌ಗಳಿದ್ದಂತೆ. ಇದರಿಂದಾಗಿ ಈ ಬ್ರಾಹ್ಮಣ ಭೂಮಾಲಿಕರ ಕೆಳಗೆ ರೈತಾಪಿ ಸಾಕಷ್ಟು ಪಾಡು ಅನುಭವಿಸಬೇಕಿತ್ತು. ಇದೇ ರೀತಿಯ ಪದ್ಧತಿಯನ್ನು ಬಿಜಾಪುರದ ಆದಿಲ್‌ಶಾಹಿ ಸಂಸ್ಥಾನದಲ್ಲೂ ಅನುಸರಿಸಿ ದೇಸಾಯಿ ಮತ್ತು ದೇಶಮುಖರೆಂಬ ಹೊಸ ಶೋಷಕ ವರ್ಗದ ಹುಟ್ಟಿಗೆ ಕಾರಣರಾದರು.

ಹಾಗೆಯೇ ದೇವಾದೇಯವೆಂದರೆ ದೇವಸ್ಥಾನಗಳಿಗೆ ರಾಜ ಕೊಡುತ್ತಿದ್ದ ಉಂಬಳಿಗಳು. ಈ ಉಂಬಳಿಗೆ ಒಳಪಟ್ಟ ಹಳ್ಳಿಗಳ ಪರಮಾಧಿಕಾರ ಆ ದೇವಸ್ಥಾನಗಳಿಗೇ ಸೇರಿರುತ್ತಿತ್ತು. ಅದರ ಪಾರುಪತ್ತೆಗಾರರು ಬ್ರಾಹ್ಮಣರೇ ಆಗಿರುತ್ತಿದ್ದರೆಂದು ವಿಶೇಷವಾಗಿ ಹೇಳಬೇಕಿಲ್ಲ. ಈ ದೇವಸ್ಥಾನಗಳು ನಿಧಾನವಾಗಿ ದೊಡ್ಡ ಬಡ್ಡಿವ್ಯಾಪಾರದ ಕೇಂದ್ರವಾಗಿಯೂ ಬೆಳೆದವು. ಇತಿಹಾಸಕಾರರ ಪ್ರಕಾರ ಇಲ್ಲಿ ರೈತರಿಗೆ ಬೆಳೆ ಇನ್ನಿತ್ಯಾದಿಗಳಿಗೆ ಶೇ.20-30ರ ಬಡ್ಡಿದರದಲ್ಲಿ ಹಣವನ್ನು ನೀಡಲಾಗುತ್ತಿತ್ತು. ವಿಜಯನಗರದ ಬೃಹತ್ ಸಾಮ್ರಾಜ್ಯದ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿಯನ್ನು ಕೆಳಜಾತಿಗಳ "ನಾಯಕ"ರಿಗೆ ವಹಿಸಲಾಗುತ್ತಿತ್ತಾದರೂ ಅವರ ಮೇಲೆ ಬೇಹುಗಾರಿಕೆ ಮತ್ತು ಉಸ್ತುವಾರಿ ನೋಡಿಕೊಳ್ಳಲು ವಿಜಯನಗರದ ಸಾಮ್ರಾಟ ಬ್ರಾಹ್ಮಣ ರಾಜ್ಯಪಾಲರನ್ನು ನೇಮಿಸುತ್ತಿದ್ದನು.

ಹೀಗೆ ವಿಜಯನಗರದ ಕಾಲದಲ್ಲಿ ಬ್ರಾಹ್ಮಣ್ಯದ ಮತ್ತು ಬ್ರಾಹ್ಮಣರ ಅಧಿಪತ್ಯ ಹೊಸ ಹೊಟ್ಟು ಪಡೆದು ಅಬಾಧಿತವಾಗಿ ಮುಂದುವರೆಯಿತು. ಅದರ ಮೂಲ ಸೂತ್ರಧಾರಿ ಕೃಷ್ಣದೇವರಾಯನೇ!

ಕೃಷ್ಣದೇವರಾಯ ಬಹಳಷ್ಟು ಜನಾನುರಾಗಿಯೆಂದು ಬಣ್ಣಿಸಲು ಆತನ ಕಾಲದಲ್ಲಿ ಕಟ್ಟಿದ ಕೆರೆ-ಕಾಲುವೆಗಳ ಪಟ್ಟಿಯನ್ನು ಕೊಡಲಾಗುತ್ತದೆ. ಇದರಿಂದ ಉತ್ಪತ್ತಿ ಹೆಚ್ಚಿದ್ದು ನಿಜ. ಆದರೆ ಇದರಿಂದ ರೈತಾಪಿಯ ಬದುಕಿನಲ್ಲಿ ಯಾವ ಮೂಲಭೂತ ಬದಲಾವಣೆಯೂ ಬರಲಿಲ್ಲ. ಇತಿಹಾಸಕಾರರ ಪ್ರಕಾರ ಕನ್ನಡನಾಡಿನಲ್ಲಿ ಅವರೆಗೆ ಇಲ್ಲದಿದ್ದ ಹೊಸ ಬಗೆಯ ಆಡಳಿತ ಪದ್ಧತಿಯನ್ನು ವಿಜಯನಗರ ಪರಿಚಯಿಸಿತು. ಇದರಿಂದಾಗಿ ರೈತ ಮತ್ತು ರಾಜನ ಮಧ್ಯೆ ದೇವಸ್ಥಾನ, ಬ್ರಾಹ್ಮಣ ಅಗ್ರಹಾರ, ಮಠ, ನಾಯಕರೆಂಬ ಹತ್ತು ಹಲವು ಮಧ್ಯವರ್ತಿಗಳು ಹುಟ್ಟಿಕೊಂಡರು. ಇವರೆಲ್ಲರೂ ಅತ್ಯಂತ ಐಷಾರಾಮವಾಗಿ ಬದುಕುತ್ತಿದ್ದುದೇ ರೈತಾಪಿಯ ದುಡಿಮೆಯಿಂದ. ಹೀಗಾಗಿ ಇವರನ್ನೆಲ್ಲಾ ಸಾಕಬೇಕಾಗಿ ಬಂದ ರೈತಾಪಿ ಕನ್ನಡನಾಡಿನ "ಸುವರ್ಣ ಯುಗದಲ್ಲಿ" ಎಷ್ಟೊಂದು ಶೋಷಣೆಗೆ ಗುರಿಯಾಗಿರಬಹುದೆಂಬುದು ಯಾರಿಗಾದರೂ ಅರ್ಥವಾಗುತ್ತದೆ.

ಇಷ್ಟು ಮಾತ್ರವಲ್ಲ, ಪೋರ್ಚುಗೀಸರು ಗೋವಾದ ಮೂಲಕ ಭಾರತಕ್ಕೆ ಕಾಲಿಟ್ಟಾಗ ಅದು ಬಿಜಾಪುರದ ಆದಿಲ್‌ಶಾಹಿಗಳ ಆಳ್ವಿಕೆಗೆ ಒಳಪಟ್ಟಿತ್ತು. ಪೋರ್ಚುಗೀಸರು ಸಮುದ್ರ ವ್ಯಾಪಾರದ ಮೇಲೆ ಸಂಪೂರ್ಣ ಹತೋಟಿ

▶▶ 16

ನೋ ಕಾಮೆಂಟ್ಸ್



"ಸಾಮಾಜಿಕ ಬದಲಾವಣೆ ಬಯಸದ ಜಾತಿವಾದಿ ರಾಜಕಾರಣಿಗಳೇ ತುಂಬಿರುವ ಈ ದಿನದಲ್ಲಿ ಹಿಂದುಳಿದ ವರ್ಗದ ಜನರು ಅಧಿಕಾರ ಹಿಡಿಯಬೇಕಿರುವುದು ಅನಿವಾರ್ಯ. ಆದುದರಿಂದ ನಾನೂ ಮುಖ್ಯಮಂತ್ರಿ ಆಗುವ ಆಕಾಂಕ್ಷೆ ಹೊಂದಿದ್ದೇನೆ."

-ಸಿದ್ದರಾಮಯ್ಯ

"ಬಡವರಲ್ಲಿ ಮೂರು ಬಗೆಗಳಿವೆ. 1) ನಿಮ್ಮ ಶ್ರೀಮಂತಿಕೆಯ ವೃದ್ಧಿಯ ಜೊತೆಜೊತೆಗೇ ತಮ್ಮ ಅಭಿವೃದ್ಧಿಯೂ ಆಗುತ್ತದೆ ಎಂದು ನಂಬಿರುವ ನಿಮ್ಮ ಡ್ರೈವರ್, ಕೆಲಸದಾಳು ಇನ್ನಿತರರು. 2) ತಮಗೆ ಶ್ರೀಮಂತರಾಗುವ ಯೋಗ್ಯತೆ ಇಲ್ಲ ಎಂದು ತಿಳಿದುಕೊಂಡಿರುವವರು. 3) ತಮ್ಮ ಬಡತನಕ್ಕೆ ನಿಮ್ಮ ಶ್ರೀಮಂತಿಕೆಯೇ ಕಾರಣ ಎಂಬ ನಿಜ ಅರಿತಿರುವವರು. ಈ ಮೂರನೇ ಬಗೆಯ ಬಡವರನ್ನೇ ಸರ್ಕಾರ ನಕ್ಸಲೈಟ್ಸ್ ಎಂದು ಕರೆಯುತ್ತದೆ."

- ಗಾಂಧೀವಾದಿ ಹಿಮಾಂಶುಕುಮಾರ್

"ಅಧಿಕಾರದ ಕುರ್ಚಿಯನ್ನು ಉಳಿಸಿಕೊಳ್ಳಲು ಮಾಡಬಾರದ ತಪ್ಪುಗಳನ್ನು ಮಾಡಿದ್ದೇನೆ ಎನ್ನುತ್ತಾರೆ ಮುಖ್ಯಮಂತ್ರಿ ಯಡಿಯೂರಪ್ಪ. 'ನನ್ನದು ದಪ್ಪ ಚರ್ಮ. ಪತ್ರಿಕೆಗಳ ಟೀಕೆ ಟಿಪ್ಪಣಿಗಳಿಗೆ ನಾನು ಕೇರ್ ಮಾಡುವುದಿಲ್ಲ' ಎಂದು ಸಾರುತ್ತಾರೆ ರೇಣುಕಾಚಾರ್ಯ. 'ಪತ್ರಕರ್ತರೇ ನೀವು ಹಾಳಾಗಿದ್ದೀರಿ. ನೀವು ಬೇಕಾದ್ದು ಬರಕೊಳ್ಳಿರಿ. ನಾನಿರುವುದೇ ಹೀಗೆ' ಎಂದು ಸವಾಲು ಹಾಕುತ್ತಾರೆ ಪ್ರತಿಪಕ್ಷ ನಾಯಕ ಸಿದ್ಧರಾಮಯ್ಯ. ಇವರುಗಳ ಸತ್ಯವಾಣಿಯ ಬೆಳಕಿನಲ್ಲಿ ನನಗನಿಸಿದ್ದಿಷ್ಟು: ಯಡಿಯೂರಪ್ಪ, ರೇಣುಕಾಚಾರ್ಯ, ಸಿದ್ದರಾಮಯ್ಯ ಇವರು ಒಂದೇ ಪುಸ್ತಕದ ಮೂರು ಆವೃತ್ತಿಗಳು."

-ಚಂಪಾ

ನಂಬಿದ್ರೆನಂಬಿ ಬಿಟ್ರೆಬಿಡಿ

"ಎಂಟು ಊರಕ್ಕೂ ಹೆಚ್ಚಿನ ಸಂಚಿಕೆಗಳನ್ನು ಕಂಡ 'ಆದರ್ಶ ದಂಪತಿ' ಕಾರ್ಯಕ್ರಮಗಳನ್ನು ಒಟ್ಟಾಗಿ ಗಮನಿಸಿದರೆ ಅದು ಭಾರತೀಯ ದಾಂಪತ್ಯ ಕಲ್ಪನೆಗೆ ಸಂಶೋಧನಾರ್ಹವಾದ ಅತ್ಯುತ್ತಮ ಆಕರ. ಆದರೆ ಅಲ್ಲಿ ಸೇರಿರುತ್ತಿದ್ದ ಮಹಿಳೆಯರು ನನ್ನೊಡನೆ ಈ ನಿಟ್ಟಿನಲ್ಲಿ ಏನನ್ನೂ ಮಾತನಾಡದೆ ನಾನುಟ್ಟ ಸೀರೆಯ ಅಂದಚಂದದ ಬಗ್ಗೆಯೇ ಮಾತಿಗಿಳಿಯುತ್ತಿದ್ದರು: ಅವರ ಸೀಮಿತ ಜಗತ್ತು ನನಗೆ ವಿಷಾದ-ನಿರಾಶೆ ಮೂಡಿಸುತ್ತಿತ್ತು."

-ಶೈಲಜಾ, ಟಿವಿ ನಿರೂಪಕಿ

"ಪಂಜಾಬ ಮತ್ತು ಹರ್ಯಾಣ ರಾಜಧಾನಿ ಚಂಡೀಗಢದಲ್ಲಿ ವಯಸ್ಕ ಗಂಡು-ಹೆಣ್ಣು ತಿಂಗಳೊಂದಕ್ಕೆ ಸರಾಸರಿ 11 ಬಾಟಲುಗಳಷ್ಟು ಮದ್ಯ ಸೇವಿಸುತ್ತಾರೆ. 2008-09ರಲ್ಲಿ ಹರಿಯಾಣದಲ್ಲಿ 1.2 ಕೋಟಿ ಕುಡುಕರು 26.52 ಕೋಟಿ ಬಾಟಲು ಮದ್ಯವನ್ನು ಸೇವಿಸಿದ್ದಾರಂತೆ!"

- ಪತ್ರಿಕಾ ವರದಿ

"ಹೊನ್ನಾಳಿ ತಾಲ್ಲೂಕಿನ 35,000 ಮಹಿಳೆಯರೂ ಮಂತ್ರಿ ರೇಣುಕಾಚಾರ್ಯ ಪರವಾಗಿದ್ದಾರೆ. ನರ್ಸ್ ಜಯಲಕ್ಷ್ಮಿ ಏನಾದರೂ ಹೊನ್ನಾಳಿಗೆ ಬಂದರೆ ಅವಳ ಗ್ರಾಚಾರ ಬಿಡಿಸುತ್ತಾರೆ."

- ಬಿಜೆಪಿ ಮಹಿಳಾ ಮೋರ್ಚಾದ ಹೊನ್ನಾಳಿ ಘಟಕ

ದೇಶದ್ರೋಹಿ ಸರ್ಕಾರಗಳು- ದೇಶಪ್ರೇಮಿ ಆದಿವಾಸಿಗಳು!

"ಆ ಕಾಲದಲ್ಲಿ ಭಿಲಾಯಿ ಸ್ಟೀಲ್ ಪ್ಲಾಂಟ್ ಸಹ ಆದಿವಾಸಿಗಳ ಜಮೀನು ಮತ್ತು ನದಿಮೂಲಗಳನ್ನು ಕಿತ್ತುಕೊಂಡರೂ 96,000 ಜನರಿಗೆ ಕೆಲಸ ಕೊಟ್ಟಿತ್ತು. ಇವತ್ತಿನ ಛತ್ತೀಸ್‌ಗಢದ ಮಧ್ಯಮವರ್ಗದ ಹುಟ್ಟಿಗೆ ಈ ಸಾರ್ವಜನಿಕ ಉದ್ದಿಮೆಗಳೆ ಕಾರಣ. ಆದರೆ ಇಂದು ಇಲ್ಲಿ ತಲೆ ಎತ್ತುತ್ತಿರುವ ಖಾಸಗಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಉದ್ದಿಮೆಗಳು ಪರಿಹಾರವನ್ನೂ ಕೊಡುತ್ತಿಲ್ಲ, ಶಾಶ್ವತ ಉದ್ಯೋಗವನ್ನೂ ಕೊಡುತ್ತಿಲ್ಲ. ಕಳೆದ ವರ್ಷ ಸರ್ಕಾರಿ ಸ್ವಾಮ್ಯದ ಸ್ಪಾಂಜ್ ಐರನ್ ಘಟಕವು ಮುಚ್ಚಿಕೊಂಡಿತು. ಕಾರಣವೇನೆಂದರೆ ಅದು ಟನ್ನಿಗೆ 5,800 ರೂ. ತೆತ್ತು ಕಬ್ಬಿಣದ ಅದಿರನ್ನು ಕೊಳ್ಳಬೇಕಿತ್ತು. ಆದರೆ ಜಪಾನಿ ಕಂಪನಿಗೆ ಮಾತ್ರ ಬೈಲಾಡಿಲ್ಲಾ ಗಣಿಯಿಂದ ಟನ್ನಿಗೆ ಕೇವಲ 500 ರೂ. ದರದಲ್ಲಿ ಕಬ್ಬಿಣದ ಅದಿರು ಸರಬರಾಜು ಆಗುತ್ತದೆ. ಇದು ಸಾಮ್ರಾಜ್ಯಶಾಹಿತನವಲ್ಲದೇ ಮತ್ತೇನು? ಇಂಥಾ ಲೂಟಿಯಿಂದ ನಮ್ಮ ಸಂಪನ್ಮೂಲಗಳನ್ನು ರಕ್ಷಿಸುತ್ತಿರುವುದಕ್ಕೆ ನಾವು ಆದಿವಾಸಿಗಳಿಗೆ ಋಣಿಯಾಗಿರಬೇಕು."

- ಸುಧಾ ಭಾರದ್ವಾಜ್, ಛತ್ತೀಸ್‌ಗಢದ ಮಾನವ ಹಕ್ಕು ಕಾರ್ಯಕರ್ತೆ

ಇಷ್ಟನ್ನು ಕರ್ನಾಟಕದ ಎಳೆಮಗು ಕೂಡಾ ಹೇಳುತ್ತೆ!

"2010ರ ಆಂಗ್ಲ ಸಂವತ್ಸರ ಗ್ರಹಣದಿಂದಲೇ ಆರಂಭವಾಗಿದ್ದು ಪ್ರಕೃತಿ ವಿಕೋಪ, ರಾಜಕೀಯ ಅಸ್ಥಿರತೆ, ಅರಸೊತ್ತಿಗೆಗೆ ಆಪತ್ತು ಇವೆಲ್ಲವೂ ಸಂಭವಿಸಬಹುದು."

- ಕೋಡಿಮಠದ ಸ್ವಾಮಿ

ನೀವು ಕಮ್ಯುನಿಸಂಗೆ ಮಾಡಿದ್ದನ್ನೇ ಅವರು ಬೌದ್ಧಧರ್ಮಕ್ಕೆ ಮಾಡುತ್ತಿದ್ದಾರೆ!

"ಬೌದ್ಧಗುರು ದಲಾಯಿ ಲಾಮಾ ಧರ್ಮದ ಹೆಸರಿನಲ್ಲಿ ಶಾಂತಿಯನ್ನು ಕದಡುತ್ತಿದ್ದಾರೆ. ರಾಜಕೀಯ ಮಾಡುತ್ತಿದ್ದಾರೆ."

- ವಾಂಗ್‌ಡಾಂಗ್ ಹು ನಾ ಕಿ. ಚೀನಾ ದೂತಾವಾಸದ ಅಧಿಕಾರಿ

ಪುಸ್ತಕ ಪ್ರೀತಿಯ ನಂಟು...

ತುಂಬಾ ಕಡಿಮೆ ಸಮಯ ಇರುವುದರಿಂದ ನನ್ನ ನ ಬೇರೆಡೆಗೆ ಹರಿಯದಂತೆ, ಮುಂದೆ ಇರುವ ವನ್ನು ಆದಷ್ಟು ಬೇಗ ಮುಗಿಸುವಂತೆ ಗಟ್ಟಿ ನಿರ್ಧಾರ ಡಿಕೊಂಡು ಕೂರುತ್ತೇನೆ. ಟೇಬಲ್ ಮೇಲಿರುವ ಕವನ್ನು ತೆರೆದು ನೇರವಾಗಿ ನನಗೆ ಬೇಕಿರುವ ಪುಟವನ್ನೇ ಯುತ್ತೇನೆ. ನನ್ನ ಉದ್ದೇಶ ಅದರಲ್ಲಿರುವ ಚಿಕ್ಕ ವಣಿಗೆಗಳ ಮೇಲೆ ಕಣ್ಣು ಹಾಯಿಸಿ ಆದಷ್ಟು ಬೇಗ ವನ್ನು ಆಯ್ಕೆ ಮಾಡಿ ಮುಂದಕ್ಕೆ ಹೋಗುವುದು.

ಆದರೆ ಅದ್ಯಾವುದೋ ಒಂದು ಸಾಲು ನನ್ನನ್ನು ಗೊಳಿಸುತ್ತದೆ. ಕಣ್ಣು ಹಾಯಿಸಿ ಮುಂದಕ್ಕೆ ಹೋಗದೆ ಅಂಕಣವನ್ನು ಓದುತ್ತೇನೆ. ಅದೂ ಸಾಲದೆಂಬಂತೆ ಪುಟದಲ್ಲಿರುವ ಪದ್ಯವನ್ನೋ ಮತ್ತಿನ್ಯಾವುದೋ ನವನ್ನೋ ನನಗೆ ಗೊತ್ತಿಲ್ಲದಂತೆ ಓದಲಾರಂಭಿಸಿರುತ್ತೇನೆ. ಯು ಹೀಗೆ ಸಾಗಿ ಒಂದು ಪುಸ್ತಕವನ್ನು ಒಂದು ಯಲ್ಲಿ ತಿರುವು ಹಾಕಿ ಕೈಯಲ್ಲಿರುವ ಕೆಲಸವನ್ನು ಸಬೇಕೆಂದು ಮುಂಚಿತವಾಗಿ ಮಾಡಿಕೊಂಡಿದ್ದ ರವೆಲ್ಲ ಕೈಕೊಟ್ಟಿರುತ್ತೆ. ಎರಡು, ಮೂರು ಗಂಟೆಗಳು ದ್ದರೂ ಆ ಪುಸ್ತಕದ ಅರ್ಧ ಭಾಗವನ್ನೂ ಸಿರುವುದಿಲ್ಲ.

ೀವು ಈಗಾಗಲೇ ಊಹಿಸಿರುವಂತೆ ನನ್ನನ್ನು ಹಾಗೆ ಟ್ಟು, ನನ್ನ ಕೆಲಸ ಮುಗಿಯದಂತೆ ಮಾಡುವುದು ಅಪ್ಪನ ಬರಹಗಳು. ಬರುವ ಫೆಬ್ರವರಿಯಲ್ಲಿ ಕನ್ನಡ ತ್ಯ ಸಮ್ಮೇಳನ ನಡೆಯಲಿದೆ. ಅದಾದನಂತರ ಮಾರ್ಚ್ ಂದು ಅಪ್ಪನ 75 ನೇ ಹುಟ್ಟುಹಬ್ಬದ ರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ಎರಡೂ ರ್ಯಕ್ರಮಗಳಿಗಾಗಿ ಅಪ್ಪನ ಹಲವು ಪುಸ್ತಕಗಳನ್ನು ಟಿಸಬೇಕಿದೆ. ಒಂದೆಡೆ ಅಪ್ಪನ ಆತ್ಮಕತೆ 'ಹುಳಿಮಾವಿನ 'ಟೀಕೆ ಟಿಪ್ಪಣಿ'ಯ ಮೊದಲನೆ ಮತ್ತು ಎರಡನೇ ಹಗಳು, ಹಲವಾರು ನಾಟಕಗಳ ಪ್ರತಿಗಳು ಯಾಗುತ್ತಿವೆ. ಇನ್ನೊಂದೆಡೆ ಪುಸ್ತಕ ರೂಪದಲ್ಲಿ ಇನ್ನೂ ಗೊಂಡಿರದ ಅಪ್ಪನ ಹಲವಾರು ಲೇಖನ ಮತ್ತು ಳನ್ನು ಸಂಗ್ರಹಿಸಿ ರೆಡಿ ಮಾಡಬೇಕಿದೆ. ಇದೆಲ್ಲವನ್ನು 'ಲಂಕೇಶ್' ವಾರ ಪತ್ರಿಕೆ ಮತ್ತು 'ಗೈಡ್' ಪತ್ರಿಕೆಗಳ ಒತ್ತಡದ ಕೆಲಸಗಳ ನಡುವೆಯೇ ಬೇಕಿದೆ.

ೂತೆಗೆ ಬಂಜಗೆರೆ ಜಯಪ್ರಕಾಶರು ಅನುವಾದಿಸಿರುವ ಯಕಮ್ಮ ಅವರ 'ರಾಮಾಯಣ ವಿಷವೃಕ್ಷ', ನಗರಗೆರೆ ಶ್ ಅನುವಾದಿಸಿರುವ ಕಲ್ಯಾಣ ರಾವ್ ಅವರ ' ವಸಂತ', ಹಸನ್ ನಯೀಂ ಸುರಕೋಡು ಅವರು ದಿಸಿರುವ ರಾಮಮನೋಹರ ಲೋಹಿಯಾ ಅವರ ' ಪದ್ಧತಿ', ಸುಕನ್ಯಾ ಕನಾರಳ್ಳಿ ಅವರು ದಿಸುತ್ತಿರುವ ಅರುಂಧತಿ ರಾಯ್ ಅವರ ಹೊಸ ಕೆಲಸಗಳೂ ನಡೆಯುತ್ತಿವೆ. ಜೊತೆಗೆ 1994 ಲಂಕೇಶ್ ಪತ್ರಿಕೆ'ಯಲ್ಲಿ ಪ್ರಕಟಗೊಂಡಿದ್ದ ಕನ್ನಡದ ಸಾಹಿತಿಗಳ ಸಂದರ್ಶನ ಮಾಲೆಯನ್ನೂ ಪುಸ್ತಕ ದಲ್ಲಿ ತರುತ್ತಿದ್ದೇವೆ.



ಲಂಕೇಶ್
ಓದುಗರು
ಏಜೆಂಟರು
ಹಾಗೂ ಹಿತೈಷಿಗಳಿಗೆ
2010ರ
ಹೊಸ ವರ್ಷದ
ಶುಭಾಶಯಗಳು

ಯಾವ ಪುಸ್ತಕ ಯಾವ ಹಂತದಲ್ಲಿದೆ ಎಂದು ನೋಡಿಕೊಳ್ಳಲು ನಾನೊಂದು ಪಟ್ಟಿಯನ್ನೇ ಮಾಡಿಕೊಂಡಿದ್ದೇನೆ. ಆ ಪಟ್ಟಿಯಲ್ಲಿ ಸದ್ಯಕ್ಕೆ 25 ಪುಸ್ತಕಗಳಿದ್ದು, ಪುಸ್ತಕದ ಹೆಸರು, ಲೇಖಕ/ಅನುವಾದಕ/ ಸಂಗ್ರಹಾಗಾರ/ ಕಂಪೊಸರ್, ಲೇಔಟ್, ಮೊದಲನೆ/ ಎರಡನೆಯ/ಮೂರನೇ ಪ್ರೂಫ್ (ಈ ಪ್ರೂಫ್‌ರೀಡರ್ ನಾನೆ!), ಮುಖಪುಟ ವಿನ್ಯಾಸ ಎಂಬ ಹಲವಾರು ವಿಭಾಗಗಳನ್ನು ಮಾಡಿಕೊಂಡಿದ್ದೇನೆ. ಸದ್ಯಕ್ಕೆ ನಮ್ಮ ಪಾರ್ವತೀಶ ಕ್ರೀಡೆ ಮತ್ತು ಕ್ರೀಡಾಪಟುಗಳನ್ನು ಕುರಿತು ಅಪ್ಪ ಬರೆದಿದ್ದ ಲೇಖನಗಳನ್ನು ಸಂಗ್ರಹಿಸಿ ಪುಸ್ತಕವೊಂದನ್ನು ಸಿದ್ಧಪಡಿಸುತ್ತಿದ್ದಾರೆ. ಹಾಗೆಯೇ ಟಾಲ್‌ಸ್ಟಾಯ್, ಶೇಕ್ಸ್‌ಪಿಯರ್ ಸೇರಿದಂತೆ ಹಲವಾರು ಪಾಶ್ಚಿಮಾತ್ಯ ಲೇಖಕರ ಬದುಕು ಬರಹವನ್ನು ಕುರಿತು ಅಪ್ಪ ಬರೆದಿದ್ದ ಲೇಖನಗಳನ್ನು ನಾನು ಸಂಗ್ರಹಿಸುತ್ತಿದ್ದೇನೆ. ಜೊತೆಜೊತೆಗೆ 1991 ರಿಂದ 1995 ರ ತನಕ ಬರೆದಿದ್ದ 'ಮರೆಯುವ ಮುನ್ನ' ಅಂಕಣದಿಂದ ಆ ಕಾಲಕ್ಕೆ ಪ್ರಸ್ತುತ ಮಾತ್ರವಾಗಿದ್ದ ಹಲವನ್ನು ಕೈಬಿಟ್ಟು ಉಳಿದವುಗಳನ್ನು ಸಂಗ್ರಹಿಸುತ್ತಿದ್ದೇನೆ. ಇವೆರಡೂ ಸಾಲದೆಂಬಂತೆ 1990 ರಿಂದ 2000ದ ತನಕ ನೀಲು ಕಾವ್ಯನಾಮದಡಿ ಅಪ್ಪ ಬರೆದಿದ್ದ ಕವನಗಳನ್ನು ಒಂದೆಡೆ ಮಾಡಿ ಅವುಗಳ ಪ್ರೂಫ್ ನೋಡುತ್ತಿದ್ದೇನೆ.

ನನ್ನ ಈ ಪುಸ್ತಕದ ಕೆಲಸದ ಪಟ್ಟಿಯನ್ನು ಯಾರಾದರೂ ನೋಡಿದರೆ ದಂಗಾಗುತ್ತಾರೆ. ಆದರೆ ಸವಾಲುಗಳನ್ನು ಸ್ವೀಕರಿಸುವಲ್ಲಿ ಎಷ್ಟೇ ಕಷ್ಟ ಬಂದರೂ ತೋಳೇರಿಸಿಕೊಂಡು ಕೆಲಸಕ್ಕೆ ಧುಮುಕುವುದರಲ್ಲಿ ನಾನು ನನ್ನ ಅಪ್ಪನಂತೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

ಇಂಗ್ಲಿಷ್‌ನಲ್ಲಿ **'Burning the candle at both ends'** ಎಂಬ ವಾಕ್ಯವಿದೆ. ಅದರರ್ಥ ಹಗಲುರಾತ್ರಿ ಎನ್ನದೆ ಕೆಲಸ ಮಾಡುವುದು. ಸದ್ಯ ನಾನೂ ಕೂಡ ನನ್ನ ಬದುಕನ್ನು ಹಾಗೆಯೇ ಕಳೆಯುತ್ತಿದ್ದೇನೆ. ಇದೆಲ್ಲದರಿಂದ ನನಗೂ ಹಲವೊಮ್ಮೆ ಉಶ್ಯಪ್ಪ (ಅಪ್ಪನಿಗೆ ಎಂದೂ ಹಾಗನಿಸಿದ್ದಿಲ್ಲ ಎಂದು ಒಪ್ಪಿಕೊಳ್ಳುತ್ತಾ) ಎನಿಸುತ್ತದೆ. ಕೆಲ ಬೆಳಗ್ಗೆ ಎಚ್ಚರವಾದಾಗಲೇ ಸುಸ್ತು ನನ್ನನ್ನು ಆವರಿಸಿರುತ್ತದೆ. ಆದರೆ ಅಪ್ಪನ ನೆನಪು, ನನ್ನ ತಂಡದ ಉತ್ಸಾಹ, ನಮ್ಮ ಸಂಸ್ಥೆಯ ಭವಿಷ್ಯವನ್ನು ನೆನೆಸಿಕೊಂಡು ಮತ್ತೆ ಉತ್ತೇಜನ ಪಡೆಯುತ್ತೇನೆ.

ಬಹಳಷ್ಟು ಜನರಿಗೆ ಗೊತ್ತಿಲ್ಲ 'ಲಂಕೇಶ್' ಪ್ರಕಾಶನವನ್ನು ಸ್ಥಾಪಿಸಿ ಈಗ ಮೂರು ವರ್ಷಗಳಾಗಿವೆ. ಈ ಅವಧಿಯಲ್ಲಿ 60 ಪುಸ್ತಕಗಳನ್ನು ಪ್ರಕಟಿಸಿದ್ದೇವೆ. ಇನ್ನು ನಮ್ಮ 'ಗೈಡ್' ಪ್ರಕಾಶನ ಪ್ರಾರಂಭವಾಗಿ ಎರಡು ವರ್ಷಗಳಾಗಿದೆ. ಅದರಡಿ ಈಗಾಗಲೇ 20 ಪುಸ್ತಕಗಳನ್ನು ಪ್ರಕಟಿಸಿದ್ದೇವೆ. ಇವೆಲ್ಲ ಒಟ್ಟುಗೂಡಿದರೆ ಹದಿನೈದು ಸಾವಿರ ಪುಟಗಳನ್ನು ಮೀರುತ್ತವೆ.

'ಲಂಕೇಶ್', 'ಗೈಡ್', 'ಲಂಕೇಶ್ ಪ್ರಕಾಶನ' ಮತ್ತು 'ಗೈಡ್ ಪ್ರಕಾಶನ' ನಮ್ಮ ತಂಡದ ಜನಪರ ಕಾಳಜಿ, ಸಾಹಿತ್ಯಾಸಕ್ತಿ ವೈಚಾರಿಕತೆ ವ್ಯಾವಹಾರಿಕ ಜಾಣ್ಮೆ ಮತ್ತು ಪ್ರಾಮಾಣಿಕತೆಯ ಅಭಿವ್ಯಕ್ತಿ ಎಂಬುದು ನನಗೆ ಹೆಮ್ಮೆಯ ವಿಚಾರ. ನಮಗೆ ಹಣ ಮುಖ್ಯವಲ್ಲ, ಬದಲಾಗಿ ರಾಜಕೀಯ ಮತ್ತು ಸಾಮಾಜಿಕ ಬದಲಾವಣೆ ಮುಖ್ಯ. ಆದ್ದರಿಂದಲೇ ನಾವು ಆನಂದ್ ತೇಲ್‌ತುಂಬ್ಡೆ ಅವರ 'ಖೈರ್ಲಾಂಜಿ' ಮತ್ತು ನಾ. ದಿವಾಕರ್ ಅನುವಾದಿಸಿರುವ ರಾಮ್ ಪುನಿಯಾನಿ ಅವರ 'ಕೋಮುವಾದ- ಒಂದು ಸಚಿತ್ರದರ್ಶನ' ತರಹದ ಪುಸ್ತಕಗಳನ್ನು ಪ್ರಕಟಿಸಿದ್ದೇವೆ. ಅಂದಹಾಗೆ ನಮ್ಮ ತಂಡದ ಕುಮಾರ್ ಬುರಡಿಕಟ್ಟಿ ಅವರು ಬರೆದಿರುವ 'ಓ ಈಳಂ' ಪುಸ್ತಕದ ಬಗ್ಗೆ ತಮಿಳುನಾಡಿನಲ್ಲೂ ಪ್ರಶಂಸೆ ವ್ಯಕ್ತವಾಗಿದೆಯಲ್ಲದೆ ಅದರ ಬಗ್ಗೆ ಹಲವಾರು ಶ್ರೀಲಂಕಾದ ತಮಿಳರ ವೆಬ್‌ಸೈಟ್‌ಗಳಲ್ಲೂ ಪ್ರಕಟಗೊಂಡಿದೆ. ಬಹುತೇಕ ಕನ್ನಡಿಗರು ತಮಿಳರನ್ನು ತಮ್ಮ ಪಾರಂಪಾರಿಕ ವೈರಿಗಳೆಂದು ಭಾವಿಸಿರುವಾಗ ಕರ್ನಾಟಕದ ಪ್ರಕಾಶನ ಸಂಸ್ಥೆಯೊಂದು ತಮಿಳರ ಸ್ವಾಭಿಮಾನದ ಹೋರಾಟವಾದ ಈಳಂ ಬಗ್ಗೆ ವಸ್ತುನಿಷ್ಠವಾದ ಪುಸ್ತಕವನ್ನು ಪ್ರಕಟಿಸಿರುವುದನ್ನು ಪ್ರಶಂಸಿಸಿದ್ದಾರೆ. ಭಾಷೆ, ರಾಜ್ಯ, ದೇಶದಂತಹ ಗಡಿಗಳನ್ನು ಮೀರಿ ಮಾನವೀಯತೆಯನ್ನು ಬಿಂಬಿಸುವ ಪುಸ್ತಕವನ್ನು ನಮ್ಮ ತಂಡ ತಂದಿದೆ ಎಂಬುದು ನಮ್ಮೆಲ್ಲರಿಗೆ ಸಂತಸದ ಮತ್ತು ಹೆಮ್ಮೆಯ ವಿಚಾರವಾಗಿದೆ.

ನಮ್ಮ ಈ ಜನಪರ, ಪ್ರಗತಿಪರ ಕೆಲಸಗಳು ಹೀಗೇ ಮುಂದುವರಿಯಲಿದೆ. ಅವುಗಳ ಭಾಗವಾಗಿ ಸದ್ಯದಲ್ಲೇ ಕುಮಾರ್ ಬುರಡಿಕಟ್ಟಿ ಅವರು ಅನುವಾದಿಸುತ್ತಿರುವ ಸತ್ನಾಮ್‌ರ 'ಜಂಗಲ್‌ನಾಮಾ-ನಕ್ಸಲ್ ಪ್ರದೇಶದಲ್ಲಿ ಒಂದು ಪ್ರಯಾಣ' ಮತ್ತು ಪಾರ್ವತೀಶ ಅವರು ಆಧುನಿಕ ಕನ್ನಡಕ್ಕೆ ರೂಪಾಂತರಿಸುತ್ತಿರುವ ಹೈದರ್ ಅಲಿಯ ಆತ್ಮಕಥೆ 'ಹೈದರ್ ನಾಮಾ'ಗಳೂ ಪ್ರಕಟಗೊಳ್ಳಲಿವೆ.

ಇತ್ತೀಚೆಗೆ ಕೆಲವರು 'ಕನ್ನಡ ಪುಸ್ತಕಗಳನ್ನು ಜನ ಓದುತ್ತಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಆದರೆ ನಮ್ಮ ಪತ್ರಿಕೆಗಳು ಮತ್ತು ಪುಸ್ತಕಗಳು ಮಾರಾಟವಾಗುತ್ತಿರುವ ವೇಗ ನೋಡಿದರೆ ನಮಗೆ ಅನ್ನಿಸುವುದು ಇಷ್ಟೇ: ಜನರ ಆಸಕ್ತಿ ಮತ್ತು ಕಾಳಜಿಗಳನ್ನು ಬಿಂಬಿಸುವ, ಅವರ ಅರಿವನ್ನು ಹೆಚ್ಚಿಸುವ ಪುಸ್ತಕಗಳನ್ನು ನೀಡಿದರೆ ಅವರು ಖಂಡಿತವಾಗಿಯೂ ಹೊಸ ಪುಸ್ತಕಗಳನ್ನು ಓದುತ್ತಾರೆ.


ಇದೆಲ್ಲ ಸಾಧ್ಯವಾಗಿದ್ದು ನಮ್ಮ ತಂಡದ ಶ್ರಮ ಮತ್ತು ನಿಮ್ಮ ಬೆಂಬಲದಿಂದ. ನಮ್ಮ ನಡುವಿನ ಈ ನಂಟು ಬಹಳ ಕಾಲ ಮುಂದುವರೆಯುತ್ತದೆ, ನಮ್ಮೆಲ್ಲರ ಪುಸ್ತಕ ಪ್ರೀತಿ ಇನ್ನೂ ಹೆಚ್ಚುತ್ತದೆ ಎಂಬ ಆಶೆ ನಮ್ಮದು. ಹೊಸ ಪುಸ್ತಕಗಳೊಂದಿಗೆ ಮಾರ್ಚ್. 7 ಭಾನುವಾರದಂದು ಮುಖಾಮುಖಿ ಭೇಟಿ ಆಗೋಣ. ಅಲ್ಲಿಯತನಕ ನಮ್ಮ ಪ್ರತೀವಾರದ ಭೇಟಿ ಇದ್ದೇ ಇರುತ್ತದಲ್ಲ...



ಕಂಡಹಾಗೆ

ಗೌರಿ ಲಂಕೇಶ್

ಶಂಕರ್ ನಾಗ್ ಮಗಳ ಮದುವೆ




ಶಂಕರ್‌ನಾಗ್ ಕಾರ್ ಅಪಘಾತದಲ್ಲಿ ತೀರಿಕೊಂಡು ಇವತ್ತಿಗೆ ಇಪ್ಪತ್ತು ವರ್ಷಗಳಾಗಿದ್ದರೂ ಅವರ ಬಗೆಗಿನ ಮೆಚ್ಚುಗೆಯಾಗಲಿ, ಅಭಿಮಾನಿಗಳಲ್ಲಿನ ಜನಪ್ರಿಯತೆಯಾಗಲಿ ಇಂದಿಗೂ ಕುಗ್ಗಿಲ್ಲ. ಅವರು ಮಡಿದಾಗ ಅವರ ಏಕೈಕ ಪುತ್ರಿ ಕಾವ್ಯ ಐದು ವರ್ಷದ ಬಾಲಕಿ.

ಈಗ ಕಾವ್ಯ 25 ವರ್ಷದ ಯುವತಿಯಲ್ಲದೆ ಇದೇ ತಿಂಗಳು ೨೪ ರಂದು ಹಸೆಮಣೆಯನ್ನೇರಿ ಮದುವೆಯೂ ಆಗುತ್ತಿದ್ದಾಳೆ. ಆಕೆ ಮದುವೆಯಾಗುತ್ತಿರುವುದು ಚಿಕ್ಕವರಾಗಿದ್ದಾಗಲೇ ವ್ಯಾಲಿ ಸ್ಕೂಲಿನಲ್ಲಿ ಆಕೆಯೊಂದಿಗೆ ಓದುತ್ತಿದ್ದ, ಈಗ ವಕೀಲನಾಗಿರುವ ಸಲೀಲ್ ಎಂಬ ಯುವಕನನ್ನು.

ಕಾವ್ಯಾಳಿಗೆ ಚಿಕ್ಕವಳಾಗಿದ್ದಾಗಿನಿಂದಲೂ ಪ್ರಾಣಿ, ಪಕ್ಷಿ, ಪರಿಸರದ ಬಗ್ಗೆ ಅಪಾರ ಕುತೂಹಲ ಮತ್ತು . ಆ ನಿಟ್ಟಿನಲ್ಲಿ ಆಕೆ ಪಶುವೈದ್ಯೆ ಆಗಬೇಕೆಂದು ಬಯಸಿದ್ದಳು. ಪಿಯುಸಿಯಲ್ಲಿ ಕಾವ್ಯ ಶೇ. 98 ಮಾರ್ಕ್ಸ್ ಪಡೆದಿದ್ದರೂ ಆಕೆಗೆ ತ್‌ನಲ್ಲಿ ಕಾಲೇಜಿನಲ್ಲಿ ಸೀಟು ಸಿಕ್ಕಿರಲಿಲ್ಲ. ಆಗ ಆಕೆ ಆಯ್ಕೆ ಮಾಡಿಕೊಂಡಿದ್ದು ವನ್ಯಜೀವಿಕುಲಗಳ ರ (Wild Life Biology). ಆ ಕ್ಷೇತ್ರದಲ್ಲಿ ಎಂಎಸ್ಸಿ ಕೂಡ ಮಾಡಿಕೊಂಡಿರುವ ಕಾವ್ಯ ಈಗ ಕ ತಾಪಮಾನ ಏರುವಿಕೆಯ ವಿರುದ್ಧ ಕೆಲಸ ಮಾಡುತ್ತಿದ್ದಾಳೆ. ಅಷ್ಟೇ ಅಲ್ಲ, ಮೊನ್ನೆ ನ್‌ಹೇಗನ್‌ನಲ್ಲಿ ಕ್ಲೈಮೆಟ್‌ಚೇಂಜ್ ಕುರಿತು ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲೂ ಭಾಗವಹಿಸಿ ದ್ದಾಳೆ.

ಮ್ಮ ಮಗಳ ಮದುವೆಗೆ ಆಹ್ವಾನಪತ್ರ ಕಳುಹಿಸಿರುವ ಶಂಕರ್ ಮಡದಿ ಅರುಂಧತಿ ಅವರು ಲ್ಲಿ "ನಮ್ಮ ಮಗಳ ಮದುವೆಗೆ ಬಂದು ನವದಂಪತಿಗಳನ್ನು ಆಶೀರ್ವದಿಸಿ" ಎಂದು ಕೊಂಡಿದ್ದಾರಲ್ಲದೆ, ಆಹ್ವಾನ ಪತ್ರಿಕೆಯಲ್ಲಿ ಶಂಕರ್ ಅವರ ಹೆಸರನ್ನೂ ಪ್ರಕಟಿಸಿದ್ದಾರೆ. ಶಂಕರ್ ಅವರ ೂಮಿ ಆಸಕ್ತಿಯನ್ನು 'ರಂಗಶಂಕರ' ಮೂಲಕ ಜೀವಂತವಾಗಿ ಮುಂದುವರೆಸುತ್ತಿರುವ ಅರುಂಧತಿ ಗೆ ಮತ್ತು ಅಭಿಮಾನಿಗಳಿಗೆ ಶಂಕರ್ ಈಗಲೂ ಹಲವಾರು ರೀತಿಯಲ್ಲಿ ಬದುಕಿದ್ದಾರೆ. ದುಕಿನ ಹೊಸ ಹೊಸ್ತಿಲಲ್ಲಿ ನಿಂತಿರುವ ಶಂಕರ್ ಪುತ್ರಿ ಕಾವ್ಯಳಿಗೆ ಮತ್ತು ಆಕೆಯ ಯುತ್ತಿರುವ ಸಲೀಲನಿಗೆ ಕನ್ನಡಿಗರ ಪ್ರೀತಿ ಮತ್ತು ಆಶೀರ್ವಾದ ಇದ್ದೇ ಇರುತ್ತದೆ.





'ಲಂಕೇಶ್' ತಂಡದ ಪಾರ್ವತೀಶ ಬರೆದಿರುವ **'Some ಪದ'** ಹಾಗೂ 'ಚೆಕ್‌ಪೋಸ್ಟ್' ಪುಸ್ತಕಗಳು ಜನವರಿ 1 ರಂದು ಬಿಡುಗಡೆಯಾಗಿವೆ. **'Some ಪದ'** ಕನ್ನಡದಲ್ಲಿನ ಅನ್ಯಭಾಷಾ ಪದಗಳ ಪ್ರವಾಸದ ಕತೆ ಹೇಳಿದರೆ 'ಚೆಕ್‌ಪೋಸ್ಟ್' ಪುಸ್ತಕವು ಸಮಕಾಲೀನ ವ್ಯಕ್ತಿ-ವಿದ್ಯಮಾನಗಳನ್ನು ಕುರಿತ ಬರಹವಾಗಿದೆ.

'ಲಂಕೇಶ್' ತಂಡದ ಸೋದರ ಸಂಸ್ಥೆಯಾಗಿರುವ 'ಚಾರು ಪ್ರಕಾಶನ'ವು ಈ ಪುಸ್ತಕಗಳನ್ನು ಪ್ರಕಟಿಸಿದೆ. ಅಧಿಕೃತ ಮಾರಾಟವು ಲಂಕೇಶ್ ಪ್ರಕಾಶನದಿಂದ ನಡೆಯುತ್ತದೆ.

ಅದು ಮುಂಬೈ ಪೊಲೀಸ್!

ಮುಂಬೈ ಇಡೀ ದೇಶದಲ್ಲಿ ಮಾತ್ರವಲ್ಲ ವಿಶ್ವದಲ್ಲೇ ಹೆಸರು ಮಾಡಿರುವ ಬೃಹತ್ ನಗರ. ಹೆಚ್ಚೂಕಡಿಮೆ ಒಂದೂವರೆ ಕೋಟಿಯಷ್ಟು ಜನಸಂಖ್ಯೆಯನ್ನು ಹೊಂದಿರುವ ಮುಂಬೈ ಆ ದೃಷ್ಟಿಯಿಂದ ಹಲವಾರು ಚಿಕ್ಕಪುಟ್ಟ ದೇಶಗಳಿಗಿಂತ ಅನೇಕ ಪಟ್ಟು ದೊಡ್ಡದು! ಭಾರತದ ಮಟ್ಟಿಗಂತೂ ಅದು ಹಲವು ಕಾರಣಗಳಿಗಾಗಿ ಬಹುಮುಖ್ಯ ಸ್ಥಾನ ಪಡೆದುಕೊಂಡಿದೆ. ದೇಶದ ರಾಜಕೀಯ ರಾಜಧಾನಿ ದೆಹಲಿಯಾದರೆ, ಮುಂಬೈ ಅದರ ವಾಣಿಜ್ಯ ರಾಜಧಾನಿ. ಸ್ಟಾಕ್ ಎಕ್ಸ್‌ಚೇಂಜ್‌ನಿಂದ ಹಿಡಿದು ಚಿಕ್ಕಪುಟ್ಟ ವ್ಯಾಪಾರ ವಹಿವಾಟಿನ ಹಣೆಬರಹ ನಿರ್ಧಾರವಾಗುವುದೇ ಮುಂಬೈನಲ್ಲಿ. ಚಿಕ್ಕಪುಟ್ಟ ದೇಶಿ ಕಂಪನಿಗಳಿಂದ ಹಿಡಿದು ದೈತ್ಯ ಮಲ್ಟಿನ್ಯಾಷನಲ್ ಕಂಪನಿಗಳ ತನಕ ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುತೇಕ ವ್ಯಾಪಾರ-ವಹಿವಾಟು ಸಂಸ್ಥೆಗಳ ಕೇಂದ್ರ ಕಚೇರಿಗಳಿರುವುದೇ ಮುಂಬೈನಲ್ಲಿ. ಭಾರತ, ಪಾಕಿಸ್ತಾನ, ಬಾಂಗ್ಲಾ ಶ್ರೀಲಂಕಾ, ನೇಪಾಳ, ಮ್ಯಾನ್ಮಾರ್‌ಗಳಂಥ ಭಾರತದ ನೆರೆಹೊರೆಯ ರಾಷ್ಟ್ರಗಳಿಗೆ ಮಾತ್ರವಲ್ಲದೇ ಇಂಗ್ಲೆಂಡ್, ಕೆನಡಾಗಳಂಥ ಪಾಶ್ಚಾತ್ಯ ರಾಷ್ಟ್ರಗಳಿಗೂ ರಸದೌತಣ ಕೊಡುವ ಬಾಲಿವುಡ್ ನೆಲೆಯಿರುವುದು ಮುಂಬೈನಲ್ಲೇ. ಇಷ್ಟೆಲ್ಲಾ ಪ್ರಮುಖ ಸ್ಥಾನ ಹೊಂದಿರುವ, ಇಷ್ಟೊಂದು ಫಲವತ್ತಾಗಿರುವ ನಗರವೊಂದರಲ್ಲಿ ಅಂಡರ್‌ವರ್ಲ್ಡ್ ಚಟುವಟಿಕೆಗಳು ನಡೆಯದಿರುತ್ತವೆಯೆ? ಹಾಗೆ ನೋಡಿದರೆ ಇಡೀ ಭಾರತದಲ್ಲಿ ಭೂಗತ ಡಾನ್‌ಗಳ ಹಾವಳಿಗೆ ಬಹಳವಾಗಿ ನಲುಗಿರುವ ನಗರ ಎಂದರೆ ಮುಂಬೈ! ಭಾರತದ ಮೋಸ್ಟ್ ವಾಂಟೆಡ್ ವ್ಯಕ್ತಿಗಳಲ್ಲಿ ಮೊದಲ ಸ್ಥಾನದಲ್ಲಿರುವ ಅಂಡರ್‌ವರ್ಲ್ಡ್ ಡಾನ್ ದಾವೂದ್ ಇಬ್ರಾಹಿಂ, ಚೋಟಾ ರಾಜನ್‌ರ ಕಾರ್ಯಾಚರಣಾ ನೆಲೆಯಿರುವುದೇ ಅಲ್ಲಿ.



ಇಡೀ ದೇಶದಲ್ಲಿ ಯಾವ ನಗರದಲ್ಲೂ ಕಾಣದಷ್ಟು ಅಂಡರ್‌ವರ್ಲ್ಡ್ ಚಟುವಟಿಕೆಗಳು ಮುಂಬೈನಲ್ಲಿ ಕಾಣುತ್ತಿವೆ ಎಂದರೆ ಒಂದೋ ಅದನ್ನು ನಿಯಂತ್ರಿಸಬೇಕಿರುವ ಪೊಲೀಸ್ ವ್ಯವಸ್ಥೆ ಅಸಮರ್ಥವಾಗಿರಬೇಕು, ಇಲ್ಲವೇ ಅಂಡರ್‌ವರ್ಲ್ಡ್ ಡಾನ್‌ಗಳು ಬಹಳ ಸಮರ್ಥವಾಗಿರಬೇಕು, ಅಥವಾ ಪೊಲೀಸರು ಮತ್ತು ಅಂಡರ್‌ವರ್ಲ್ಡ್ ಡಾನ್‌ಗಳು ಕೈಮಿಲಾಯಿಸಿರಬೇಕು. ವಾಸ್ತವ ಏನೆಂದರೆ, ಮುಂಬೈ ವಿಚಾರದಲ್ಲಿ ಈ ಮೂರೂ ಅಂಶಗಳು ಸತ್ಯವಾಗಿವೆ! ಮೂರನೇ ಅಂಶಕ್ಕೆ ಒಂದು ತಾಜಾ ಉದಾಹರಣೆಯಾಗಬಲ್ಲ ಘಟನೆ ಮೊನ್ನೆ ನಡೆದಿದೆ.



ಕ್ರಿಸ್‌ಮಸ್ ಸಮಯದಲ್ಲಿ ಬಾಂಬೇ ಭೂಗತ ಲೋಕದ ಪಾತಕಿಗಳಲ್ಲೊಬ್ಬನಾದ ಚೋಟಾ ರಾಜನ್‌ನ ಸಹಚರರು, ಪತ್ನಿ ಎಲ್ಲಾ ಸೇರಿ ದೊಡ್ಡದೊಂದು ಅದ್ದೂರಿ ಪಾರ್ಟಿ ಏರ್ಪಡಿಸಿದ್ದರು. ಚೋಟಾ ರಾಜನ್ ವಿದೇಶದಲ್ಲಿದ್ದುಕೊಂಡೇ ಬಾಂಬೇ ಭೂಗತ ಲೋಕವನ್ನು ನಡುಗಿಸುವ ಪಾತಕಿ. ಅವನ ಪ್ಲಾನ್‌ಗಳನ್ನೆಲ್ಲಾ ಇಲ್ಲಿ ಕಾರ್ಯಗತ ಮಾಡುವುದಕ್ಕೆ ಆತನ ಹತ್ತಾರು ನುರಿತ ಪಾತಕಿಗಳು ಮುಂಬೈನಲ್ಲಿದ್ದಾರೆ. ಅಂಥವರಲ್ಲಿ ಪ್ರಮುಖನಾಗಿರುವವನೆಂದರೆ ಡಿ.ಕೆ.ರಾವ್. ಈತ ಕಳೆದ ಹದಿಮೂರು ವರ್ಷಗಳಿಂದ ಜೈಲಿನಲ್ಲಿದ್ದ. ಆದರೂ ಅಲ್ಲಿಂದಲೇ ಹೊರಗಿನ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದ್ದ. ಈತ ಕಳೆದ ಆಕ್ಟೋಬರ್‌ನಲ್ಲಿ ಜೈಲಿನಿಂದ ಬಿಡುಗಡೆಯಾಗಿ ಬಂದಿದ್ದು ಚೋಟಾ ರಾಜನ್‌ನ ಸಹಚರರು ಏರ್ಪಡಿಸಿದ್ದ ಪಾರ್ಟಿಗೆ ಬಹುದೊಡ್ಡ ಕಳೆತಂದುಕೊಟ್ಟಿತ್ತು. ಗೌಪ್ಯ ಸ್ಥಳದಲ್ಲಿ ಆಯೋಜಿಸಲಾಗಿದ್ದ ಈ ಔತಣಕೂಟಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳೂ ಬಂದಿದ್ದರು! ಮುಂಬೈ ಸ್ಪೆಷಲ್ ಬ್ರಾಂಚ್ ಪೊಲೀಸ್ ವಿಭಾಗದ ಡಿಸಿಪಿ ವಿ.ಎನ್.ಸಾಳ್ವೆ, ಅಸಿಸ್ಟೆಂಟ್ ಕಮೀಷನರ್ ಪ್ರಕಾಶ್ ವನ್ನಿ, ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್ ಆರ್.ಎಸ್.ಖಾಕಲೆ, ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಖೋಲಾಟ್ಕರ್ ಹಾಗೂ ಒಬ್ಬ ಕಾನ್ಸ್‌ಸ್ಟೇಬಲ್ ಈ ಗುಂಡು ಪಾರ್ಟಿಯಲ್ಲಿ ಭಾಗವಹಿಸಿದ್ದ ಮಹನೀಯರು. ಇವರ ದುರಾದೃಷ್ಟವೋ ಅಥವಾ ಮುಂಬೈ ಜನರ ಅದೃಷ್ಟವೋ ಗೊತ್ತಿಲ್ಲ, ಈ ಪೊಲೀಸ್ ಅಧಿಕಾರಿಗಳು ಡಿ.ಕೆ.ರಾವ್, ಫರೀದ್ ತಾನ್ಶಾ, ಸುನಿಲ್ ಘೊಡ್ಕಾರ್‌ರಂಥ ಚೋಟಾ ರಾಜನ್‌ನ ಸಹಚರ ಕೀಚಕರೊಂದಿಗೆ, ಚೋಟಾ ರಾಜನ್‌ನ ಪತ್ನಿ ಸುಜಾತಾ ನಿಖಾಲ್ಜೆಳ ಸಮ್ಮುಖದಲ್ಲಿ ಗುಂಡು ಹಾಕಿ, ಕುಣಿದು ಕುಪ್ಪಳಿಸುತ್ತಿದ್ದುದನ್ನು ಅದ್ಯಾರೋ ರಹಸ್ಯ ವಿಡಿಯೋ ಕ್ಯಾಮರಾದಲ್ಲಿ ಚಿತ್ರೀಕರಿಸಿಕೊಂಡು ಮುಂಬೈನ ಟೀವಿ ಚಾನೆಲ್‌ಗಳಿಗೆ ರವಾನಿಸಿಬಿಟ್ಟರು. ಇಂಥ ಸೆನ್ಸೇಷನಲ್ ಸುದ್ದಿಗಳಿಗಾಗಿಯೇ ಸದಾ ಕಾಯುತ್ತಿರುವ ಟೀವಿ ಚಾನೆಲ್‌ಗಳನ್ನು ಕೇಳಬೇಕೆ? ಬೆಳಗ್ಗೆಯಿಂದ ಸಂಜೆವರೆಗೆ ಒಂದೇಸಮನೆ ಪ್ರಸಾರ ಮಾಡಿ ಮುಂಬೈ ಪೊಲೀಸರನ್ನು ಮತ್ತೊಮ್ಮೆ ಬೆತ್ತಲೆ ನಿಲ್ಲಿಸಿದವು. ಬೇರೆ ದಾರಿಯಿಲ್ಲದೇ ಆ ಐವರು ಪೊಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವಂತೆ ಗೃಹ ಇಲಾಖೆಗೆ ಪೊಲೀಸ್ ಕಮೀಷನರ್ ಶಿಫಾರಸ್ಸು ಮಾಡಿದರು. ಅಂತೆಯೇ ಅವರನ್ನು ಈಗ ಅಮಾನತ್ತುಗೊಳಿಸಿ ಇಲಾಖಾ ತನಿಖೆಗೆ ಆದೇಶಿಸಲಾಗಿದೆ.

ಮುಂಬೈನಲ್ಲಿ ಅಂಡರ್‌ವರ್ಲ್ಡ್ ಮಾಫಿಯಾ ಲೋಕ ಯಾಕಿಷ್ಟು ಪ್ರಬಲವಾಗಿದೆ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ವಿವರಣೆ ಬೇಕೆ?

ಆಂಧ್ರದ ರಾಜ್ಯಪಾಲ, ಎಂಭತ್ತಾರರ ಮುದುಕ ಎನ್.ಡಿ.ತಿವಾರಿ ಮೂವರು ಹುಡುಗಿಯರೊಂದಿಗೆ ರಾಜಭವನದಲ್ಲೇ ರಾಸಲೀಲೆ ನಡೆಸಿದ ದೃಶ್ಯಗಳು ಆಂಧ್ರಜ್ಯೋತಿ ಟೀವಿಯಲ್ಲಿ ಭಿತ್ತರಗೊಂಡು ಅವರನ್ನು ಖುರ್ಚಿಯಿಂದಲೇ ಕೆಡವಿದವು. ಅದಿನ್ನೂ ಮಾಸುವ ಮುನ್ನವೇ ಈಗ ಮುಂಬೈನ ಪೊಲೀಸ್ ಮಿಕಗಳು ಹಿಡನ್ ಕ್ಯಾಮರಾಗಳ ಖೆಡ್ಡಾಕ್ಕೆ ಬಿದ್ದು ಒದ್ದಾಡುತ್ತಿವೆ. ●

ನ್ಯಾಯಾಂಗ ಸುಧಾರಣೆಯಾಗುವುದೆಂತು?

2009ರ ಉದ್ದಕ್ಕೂ ನ್ಯಾಯಾಂಗದ ಸುಧಾರಣೆಯ ಬಗ್ಗೆ ಭಾರಿ ಚರ್ಚೆಯಾಗಿತ್ತು. ನ್ಯಾಯಾಧೀಶರೂ ಪ್ರಜೆಗಳಿಗೆ, ದೇಶದ ಸಂವಿಧಾನಕ್ಕೆ ಉತ್ತರದಾಯಿಗಳಾಗಿರಬೇಕು, ತಪ್ಪಿತಸ್ಥ ನ್ಯಾಯಾಧೀಶರ ವಿರುದ್ಧ ಶಿಸ್ತುಕ್ರಮ ಜರುಗಿಸುವುದಕ್ಕೆ ಅವಕಾಶವಿರುವಂಥ ಕಾನೂನು ರೂಪಿಸಬೇಕು, ನ್ಯಾಯಾಧೀಶರೂ ತಮ್ಮ ಆಸ್ತಿಪಾಸ್ತಿಯನ್ನು ಬಹಿರಂಗ ಗೊಳಿಸಬೇಕು - ಹೀಗೆ ತರಹೇವಾರಿ ಪ್ರಶ್ನೆಗಳ ಸುತ್ತ ಚರ್ಚೆ ಗಿರಕಿ ಹೊಡೆಯುತ್ತಲೇ ಇತ್ತು. ನಾಗರಿಕ ಸಮಾಜದಿಂದ ಈ ವಿಚಾರಗಳ ಕುರಿತಂತೆ ನಿರಂತರವಾಗಿ ಒತ್ತಡ ಬರುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಕಾನೂನು ಮಂತ್ರಿ ವೀರಪ್ಪ ಮೊಯ್ಲಿ, ಕೇಂದ್ರ ಮಾಹಿತಿ ಇಲಾಖೆ ನ್ಯಾಯಾಂಗ ಸುಧಾರಣೆಯ ಪರವಾಗಿ ಮಾತನಾಡುತ್ತಿದ್ದರೆ ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಆದಿಯಾಗಿ ನ್ಯಾಯವ್ಯವಸ್ಥೆಯ ನೇತೃತ್ವ ವಹಿಸಿಕೊಂಡಿರುವ ಬಹುತೇಕರು ಅದಕ್ಕೆ ವಿರುದ್ಧವಾಗಿದ್ದರು. ಏಕೆಂದರೆ ಅದು ಅವರ ಬುಡಕ್ಕೇ ಬರುತ್ತದೆ! ಈ ಚರ್ಚೆ ಈಗಲೂ ಮುಂದುವರೆದಿದೆ. ಮೊನ್ನೆ ಜನವರಿ ಮೊದಲ ವಾರದಲ್ಲಿ ಸುಪ್ರೀಂಕೋರ್ಟ್ ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ನ್ಯಾಯಾಧೀಶರ ತೀರ್ಪನ್ನು ಪ್ರಶ್ನಿಸಬಾರದು ಎಂದು ನೀಡಿದ್ದ ತೀರ್ಪು ಈ ಚರ್ಚೆಯ ಮುಂದುವರಿದ ಭಾಗವೇ ಆಗಿದೆ.


ಆಂಧ್ರಪ್ರದೇಶದ ಕೃಷಿಕ ಕನ್ನಾಪುರಂ ಗಂಡಯ್ಯ ಎಂಬುವವರ ಎಂಟು ಎಕರೆ ಜಮೀನಿಗೆ ಸಂಬಂಧಪಟ್ಟ ವ್ಯಾಜ್ಯವೊಂದರಲ್ಲಿ ಪ್ರಾಥಮಿಕ ಜಿಲ್ಲಾ ನ್ಯಾಯಾಲಯವು ಅವರ ವಿರುದ್ಧ ತಡೆಯಾಜ್ಞೆ ನೀಡಿತ್ತು. ಈ ಮೂಲಕ ನ್ಯಾಯಾಧೀಶರು ನ್ಯಾಯಾಂಗ ಅಪ್ರಾಮಾಣಿಕತೆ ಮೆರೆದು ತಮಗೆ ಅನ್ಯಾಯವೆಸಗಿದ್ದಾರೆ ಎಂಬುದು ಅವರ ಅಳಲಾಗಿತ್ತು. ತನ್ನ ವಾದವನ್ನು ನ್ಯಾಯಾಧೀಶರು ಯಾಕೆ ಪರಿಗಣಿಸಿಲ್ಲ ಎಂಬುದರ ಬಗ್ಗೆ ವಿವರಣೆ ಕೊಡಬೇಕೆಂದು ಗಂಡಯ್ಯ ಅವರು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಅರ್ಜಿ ಸಲ್ಲಿಸಿದರು. ಅದನ್ನು ಪ್ರಾಥಮಿಕ ಜಿಲ್ಲಾ ನ್ಯಾಯಾಲಯ ವಜಾಗೊಳಿಸಿತು. ನಂತರ ಅವರು ಹೈಕೋರ್ಟಿಗೆ ಹೋದರು. ಅಲ್ಲೂ ಅವರ ಅರ್ಜಿಗೆ ಅದೇ ಆತಿಥ್ಯ ಸಿಕ್ಕಿತು. ಕೊನೆಗೆ ನೇರವಾಗಿ ಸುಪ್ರೀಂ ಕೋರ್ಟಿಗೆ ಹೋದರು. ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಮತ್ತು ನ್ಯಾಯಮೂರ್ತಿ ಬಿ.ಎಸ್. ಚೌಹಾಣ್ ಅವರನ್ನೊಳಗೊಂಡ ವಿಭಾಗೀಯ ಪೀಠ ಇದನ್ನು ವಿಚಾರಣೆ ನಡೆಸಿ ಮೊನ್ನೆ ಜನವರಿ ಮೊದಲ ವಾರದಲ್ಲಿ ತೀರ್ಪು ನೀಡಿದೆ. ಅದರ ಪ್ರಕಾರ ನ್ಯಾಯಾಧೀಶ ತೀರ್ಪಿನ ಮೂಲಕವೇ ತನ್ನ ಅಭಿಪ್ರಾಯ ಹೇಳಿರುತ್ತಾನಾದ್ದರಿಂದ ಅದಕ್ಕೆ ಸಂಬಂಧಪಟ್ಟಂತೆ ಯಾರೇ ಕೇಳುವ ಯಾವುದೇ ಪ್ರಶ್ನೆಗಳಿಗೆ ಉತ್ತರಿಸುವ ಅವಶ್ಯಕತೆಯಿಲ್ಲ. ಮಾಹಿತಿ ಕಾಯ್ದೆಯಡಿಯಲ್ಲೂ ಅದನ್ನು ಪ್ರಶ್ನಿಸುವಂತಿಲ್ಲ. ಹಾಗೇನಾದರೂ ಮಾಡಿದರೆ ಅದು ನ್ಯಾಯಾಂಗ ನಿಂದನೆಯಾಗುತ್ತದೆ!



ನಮ್ಮ ನ್ಯಾಯಾಂಗ ವ್ಯವಸ್ಥೆ ಜನರಿಗೆ ಎಷ್ಟೊಂದು ಉತ್ತರದಾಯಿಯಾಗಿದೆ ಎಂಬುದಕ್ಕೆ ಇದೊಂದು ಸಣ್ಣ ಉದಾಹರಣೆಯಷ್ಟೆ. ನಮ್ಮ ನ್ಯಾಯಾಧೀಶರು ಪ್ರಶ್ನಾತೀತರು ಎಂಬ ಭಾವನೆ ಗಾಢವಾಗಿದೆ. ಅವರು ಏನೇ ಮಾಡಿದರೂ, ಎಂಥ ತಪ್ಪು ತೀರ್ಪು ಕೊಟ್ಟರೂ ಅವರನ್ನು ಪ್ರಶ್ನಿಸುವಂತಿಲ್ಲ. ಹೆಚ್ಚೆಂದರೆ ಅದಕ್ಕಿಂತ ಉನ್ನತ ನ್ಯಾಯಾಲಯದಲ್ಲಿ ಅಪೀಲು ಹೋಗಬಹುದಷ್ಟೆ. ನಮ್ಮೆಲ್ಲರಿಗೂ ಗೊತ್ತಿರುವ ಹಾಗೆ ಪಾರ್ಲಿಮೆಂಟ್ ದಾಳಿಯ ಪ್ರಕರಣದಲ್ಲಿ ದೆಹಲಿ ಹೈಕೋರ್ಟು ದೆಹಲಿ ವಿಶ್ವವಿದ್ಯಾಲಯದ ಪ್ರೊ. ಎಸ್.ಎ.ಆರ್. ಗಿಲಾನಿಯವರನ್ನು ತಪ್ಪಿತಸ್ಥ ಎಂದು ಘೋಷಿಸಿ ಮರಣದಂಡನೆ ಶಿಕ್ಷೆ ವಿಧಿಸಿತ್ತು. ಆದರೆ ಸುಪ್ರೀಂಕೋರ್ಟು ಅದೇ ಗಿಲಾನಿಯವರನ್ನು ನಿರಪರಾಧಿ ಎಂದು ಘೋಷಿಸಿ ಪ್ರಕರಣವನ್ನು ಇತ್ಯರ್ಥಗೊಳಿಸಿತು! ದೆಹಲಿ ಹೈಕೋರ್ಟಿನ ನ್ಯಾಯಾಧೀಶರು ನಿರಪರಾಧಿಯೊಬ್ಬನನ್ನು ಅಪರಾಧಿ ಮಾಡಿ ಮರಣದಂಡನೆಯಂಥ ಘೋರ ಶಿಕ್ಷೆ ಯಾಕೆ ಕೊಟ್ಟರು ಎಂದು ಯಾರೂ ಪ್ರಶ್ನಿಸುವ ಹಾಗಿಲ್ಲ. ಪ್ರಶ್ನಿಸಿದರೆ 'ನ್ಯಾಯಾಂಗ ನಿಂದನೆ' ಆಗುತ್ತೆ. ಮಾತ್ರವಲ್ಲ ಪ್ರಶ್ನಿಸಿದವರನ್ನು ಜೈಲಿಗೂ ತಳ್ಳಬಹುದು!

'ನೂರು ಅಪರಾಧಿಗಳು ಬೇಕಾದರೆ ಕಾನೂನಿನ ಮುಷ್ಟಿಯಿಂದ ತಪ್ಪಿಸಿಕೊಂಡರೂ ಒಬ್ಬನೇ ನಿರಪರಾಧಿಗೆ ಶಿಕ್ಷೆಯಾಗಬಾರದು' ಎಂಬುದು ನಮ್ಮ ನ್ಯಾಯಾಂಗ ವ್ಯವಸ್ಥೆಯ ಮೂಲತತ್ವ. ಆದರೆ ಆಗುತ್ತಿರುವುದೆಲ್ಲಾ ಉಲ್ಟಾಪಲ್ಟಾ! ಕೊಲೆ, ಸುಲಿಗೆ, ಅತ್ಯಾಚಾರದಂಥ ಗಂಭೀರ ಅಪರಾಧ ಮಾಡಿದ ಹಣವಂತರಿಗೆ ಬೆಳಕು ಹರಿಯುವುದರೊಳಗಾಗಿ ಜಾಮೀನು ಸಿಗುತ್ತದೆ. ಆದರೆ ಚಿಕ್ಕಪುಟ್ಟ ಆರೋಪ ಎದುರಿಸುತ್ತಿರುವ ಬಡವರಿಗೆ ವರ್ಷಗಟ್ಟಲೇ ಜಾಮೀನು ಸಿಗುವುದಿಲ್ಲ. ವಿಚಾರಣೆ ನಡೆದು ಕೊನೆಗೆ ಅವರು ನಿರಪರಾಧಿಗಳು ಎಂದು ಘೋಷಣೆಯಾದ ಮೇಲೆ ಮಾತ್ರವೇ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಗುತ್ತದೆ. ಅಷ್ಟು ಹೊತ್ತಿಗಾಗಲೇ ಅವರು ಐದಾರು ವರ್ಷಗಳನ್ನು ಜೈಲಿನಲ್ಲಿ ಕಳೆದಿರುತ್ತಾರೆ. ನಿರಪರಾಧಿಯೊಬ್ಬನನ್ನು ಐದಾರು ವರ್ಷ ಜೈಲಿನಲ್ಲಿ ಅನ್ಯಾಯವಾಗಿ ಕೊಳೆಸಿದ್ದಕ್ಕೆ ಯಾರನ್ನು ದೂಷಿಸಬೇಕು? ಯಾರನ್ನು ಬೇಕಾದರೂ ದೂಷಿಸಿ, ಆದರೆ ಜಾಮೀನು ನಿರಾಕರಿಸುವ ಮೂಲಕ ನಿರಪರಾಧಿ ಜೈಲಿನಲ್ಲಿ ಕೊಳೆಯುವುದಕ್ಕೆ ನೇರವಾಗಿ ಕಾರಣವಾದ ನ್ಯಾಯಾಧೀಶನನ್ನು ಮಾತ್ರ ದೂರುವಂತಿಲ್ಲ! ದೂರಿದರೆ ಅದು ನ್ಯಾಯಾಂಗ ನಿಂದನೆಯ ಹೆಸರಿನಲ್ಲಿ ನಿಮ್ಮನ್ನೂ ಜೈಲಿಗೆ ತಳ್ಳಬಹುದು!

ಸಾರಾಂಶದಲ್ಲಿ ಹೇಳುವುದಾದರೆ, ಎಲ್ಲಿಯತನಕ ನ್ಯಾಯಾಧೀಶರಿಗೆ ಕಡಿವಾಣ ಹಾಕುವ, ಅವರನ್ನು ಉತ್ತರದಾಯಿಗಳನ್ನಾಗಿ ಮಾಡುವ ಕಠಿಣ ಕಾನೂನು ಜಾರಿಯಾಗುವುದಿಲ್ಲವೋ ಅಲ್ಲಿಯತನಕ ನಮ್ಮ ವ್ಯವಸ್ಥೆ ಸುಧಾರಿಸುವುದಿಲ್ಲ, ನ್ಯಾಯಾಂಗ ಸುಧಾರಣೆ ಎಂಬ ಮಾತು ಕೇವಲ ಬೊಗಳೆ ಮಾತ್ರವಾಗಿರುತ್ತದೆ. ಹಾಗಾಗಿ, ಅಂತಹ ಕಾನೂನು ರೂಪಣೆಯು ಇಂದಿನ ಜರೂರಾಗಿದೆ. ●



ಸುಮ್ಮನಿರಲಾರದೇ ಕೆರೆದುಕೊಳ್ಳುವುದೆಂದರೆ...

ಅಫಘಾನಿಸ್ತಾನದಲ್ಲಿದ್ದ ಅಮೆರಿಕದ ಗೂಢಚರ್ಯೆ ಸಿಐಎ ಸಂಸ್ಥೆಯ ಏಳು ಅಧಿಕಾರಿಗಳನ್ನು ಹಾಗೂ ಒಬ್ಬ ಜೋರ್ಡಾನ್ ಬೇಹುಗಾರನನ್ನು ಬರ್ಬರವಾಗಿ ಹತ್ಯೆ ಮಾಡುವುದರೊಂದಿಗೆ ತಾಲೀಬಾನ್ ಉಗ್ರರು 2009ರ ವರ್ಷವನ್ನು ಮುಗಿಸಿದ್ದಾರೆ. ಅಫಘಾನ್‌ನಲ್ಲಿ ತಾಲೀಬಾನ್ ಉಗ್ರರನ್ನು ಸದೆಬಡಿಯುವುದಕ್ಕಾಗಿ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮ ಐವತ್ತು ಸಾವಿರ ಸಶಸ್ತ್ರ ಪಡೆಗಳನ್ನು ಕಳಿಸುವುದಾಗಿ ಘೋಷಿಸಿದ್ದರು. ಅದಕ್ಕೆ ತಾಲೀಬಾನ್ ಈ ಹತ್ಯೆಯ ಮೂಲಕ ಪ್ರತ್ಯುತ್ತರ ಕೊಟ್ಟಿದೆ. ಪ್ರಸ್ತುತ ದಾಳಿಯ ಬಗ್ಗೆ ಪ್ರತಿಕ್ರಿಯಿಸುತ್ತಾ ಸಿಐಎನ ಮಾಜಿ ಅಧಿಕಾರಿ ರೇ ಮ್ಯಾಕ್‌ಗವರ್ನ್ 'ತಾಲಿಬಾನ್‌ನಿಂದ ಅಮೆರಿಕಕ್ಕೆ ಯಾವುದೇ ಭದ್ರತಾ ಅಪಾಯವಿಲ್ಲ, ಸಿಐಎ ಅಧಿಕಾರಿಗಳು ಅಲ್ಲಿಗೆ ಹೋಗಿದ್ದೇ ತಪ್ಪು' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದೇ ಮಾತನ್ನು ಬೇರೆ ಯಾರಾದರೂ ಹೇಳಿದ್ದರೆ ಕಡೆಗಣಿಸಬಹುದಿತ್ತು. ಆದರೆ ದಶಕಗಳ ಕಾಲ ಅಮೆರಿಕದ ಗೂಢಚರ್ಯೆ ಸಂಸ್ಥೆಯಲ್ಲಿ ನಿಷ್ಠಾವಂತನಾಗಿ ದುಡಿದು ನಿವೃತ್ತನಾದ ಒಬ್ಬ ಅಧಿಕಾರಿ ಈ ಮಾತನ್ನು ಹೇಳುತ್ತಾನೆಂದರೆ ಅದರಲ್ಲಿ ಸತ್ಯಾಂಶವಿರಬೇಕಲ್ಲವೆ?

ತನಗೆ ಭದ್ರತಾ ಅಪಾಯವಿರಲಿ, ಇಲ್ಲದಿರಲಿ, ತಾಲೀಬಾನ್ ಉಗ್ರರನ್ನು ಸಂಪೂರ್ಣವಾಗಿ ದಮನ ಮಾಡುವುದಕ್ಕೆ ಅಮೆರಿಕ ಪಣತೊಟ್ಟಿದೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಅಮೆರಿಕ ವಿಶ್ವದೆದುರು ತನ್ನ ಮಾನ-ಮರ್ಯಾದೆ ಉಳಿಸಿಕೊಳ್ಳಬೇಕಿದೆ. ಭಯೋತ್ಪಾದನೆಯ ವಿರುದ್ಧ ಜಾಗತಿಕ ಸಮರ ಎಂದು ಘೋಷಿಸಿ ಭಾರಿ ಉತ್ಸಾಹದಿಂದ ಅಫಘಾನಿಸ್ತಾನದ ಮೇಲೆ ಯುದ್ಧ ಪ್ರಾರಂಭಿಸಿದ ಅಮೆರಿಕಕ್ಕೆ ಈಗ ಎಂಟು ವರ್ಷಗಳಾದರೂ ತಾಲೀಬಾನ್ ಉಗ್ರರನ್ನು ಸಂಪೂರ್ಣವಾಗಿ ಸದೆಬಡಿಯಲಾಗಲಿಲ್ಲ. ಅಫಘಾನಿಸ್ತಾನದಲ್ಲಿನ್ನೂ ಯುದ್ಧ ನಡೆಯುತ್ತಿದ್ದಾಗಲೇ ಇರಾಕ್ ಮೇಲೂ ಯುದ್ಧ ಸಾರಿತು. ಮೇಲ್ನೋಟಕ್ಕೆ ಅವೆರಡೂ ಯುದ್ಧಗಳಲ್ಲಿ ಅಮೆರಿಕ ಗೆದ್ದಿದ್ದು ನಿಜವಾದರೂ ಅದು ಸಂಪೂರ್ಣ ಗೆಲುವಾಗಿರಲಿಲ್ಲ. ಏಕೆಂದರೆ ಅಮೆರಿಕ ಸೈನ್ಯ ಅಕ್ಷರಶಃ ಆ ದೇಶಗಳಲ್ಲಿ 'ಹೊರಬರಲಾಗದಂತೆ' ಸಿಕ್ಕಿಹಾಕಿಕೊಂಡುಬಿಟ್ಟಿತು. ಆ ಎರಡು ದೇಶಗಳಲ್ಲಿ ಇಸ್ಲಾಮಿಕ್ ಮಿಲಿಟೆಂಟ್‌ಗಳು ಪಾರಂಪರಿಕ ಪೊಜಿಷನಲ್ ವಾರ್‌ಗೆ ಬದಲಾಗಿ ಹೊಂಚಿದ್ದು ಮಿಂಚಿನ ದಾಳಿ ಮಾಡಿ ಕಣ್ಮರೆಯಾಗುವ ಗೆರಿಲ್ಲಾ ದಾಳಿಯ ಮೂಲಕ ನಿತ್ಯವೂ ಅಮೆರಿಕನ್ ಸೇನೆಗೆ ದುಃಸ್ವಪ್ನವಾಗಿ ಕಾಡುತ್ತಿದ್ದಾರೆ. ನಿತ್ಯವೂ ಅಮೆರಿಕನ್ ಸೈನಿಕರ ಹೆಣಗಳುರುಳುತ್ತಿವೆ. ಏನೋ ಒಂದೆರಡು ವರ್ಷಗಳಲ್ಲಿ ಇಸ್ಲಾಮಿಕ್ ಭಯೋತ್ಪಾದಕರನ್ನು ಸದೆಬಡಿಯುತ್ತೇನೆಂದು ಬಂದ ವಿಶ್ವದ ಅತಿದೊಡ್ಡ ಸೈನ್ಯ ನಿಜಕ್ಕೂ ಆ ಎರಡು ದೇಶಗಳಲ್ಲಿ ಮಂಡಿಯೂರಿ ಕುಳಿತಿದೆ. ಇಂಥ ಪರಿಸ್ಥಿತಿಯಲ್ಲಿ ಸೇನೆಯನ್ನು ವಾಪಸ್ ಕರೆಸಿಕೊಳ್ಳಬೇಕೋ ಅಥವ ಅಲ್ಲೇ ಯುದ್ಧವನ್ನು ಮುಂದುವರೆಸಬೇಕೋ ಎಂಬುದು ಅಮೆರಿಕಕ್ಕಿರುವ ಚಿಂತೆ. ವಾಪಸ್ ಬಂದರೆ ವಿಶ್ವದ ಬಲಿಷ್ಠ ಸೇನೆ ಯೊಂದು ಇಸ್ಲಾಮಿಕ್ ಬಂಡುಕೋರರನ್ನು ಬಗ್ಗುಬಡಿಯಲಾಗದೇ ಸೋತು ಹಿಂತಿರುಗಿತು ಎಂಬ ಜಗತ್ತಿನೆದುರು ತಲೆತಗ್ಗಿಸಬೇಕಾದ ಪರಿಸ್ಥಿತಿ; ಅಲ್ಲೇ ಯುದ್ಧ ಮುಂದುವರೆಸಿದರೆ ನಿತ್ಯ ಗೆರಿಲ್ಲಾ ದಾಳಿಗೆ ಬಲಿಯಾಗಬೇಕಾದ ದುಸ್ಥಿತಿ. ಒಬಾಮ ಎರಡನೆಯದನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ತಾತ್ಕಾಲಿಕವಾಗಿ ಇರಾಕ್‌ನಿಂದ ಸೇನೆಯನ್ನು ವಾಪಸ್ ಕರೆಸಿಕೊಂಡು ತನ್ನೆಲ್ಲಾ ಶಕ್ತಿಯನ್ನು ಒಗ್ಗೂಡಿಸಿಕೊಂಡು ಅಫಘಾನಿಸ್ತಾನದ ಮೇಲೆರಗಲು ಕಳಿಸಿದ್ದಾರೆ. ಬೃಹತ್ ಸಂಖ್ಯೆಯ ಸೈನ್ಯವಿಲ್ಲದೇ ತಾಲೀಬಾನ್ ಅನ್ನು ಸಂಪೂರ್ಣವಾಗಿ ಸದೆಬಡಿಯಲು ಸಾಧ್ಯವಿಲ್ಲ ಎಂಬುದು ಅಮೆರಿಕನ್ ಸೇನೆಗೆ ಮನವರಿಕೆಯಾಗಿರುವುದರಿಂದ ಒಬಾಮಾ ಕೂಡ ಕನಿಷ್ಠ ಒಂದು ಲಕ್ಷ ಸೈನಿಕರನ್ನು ಅಫಘಾನಿಸ್ತಾನದಲ್ಲಿ ನಿಯೋಜಿಸಲು ಮುಂದಾಗಿದ್ದಾರೆ. ಈಗಾಗಲೇ ಅಲ್ಲಿ ಸುಮಾರು 60,000 ಅಮೆರಿಕನ್ ಸೈನಿಕರು ತಾಲೀಬಾನ್‌ನೊಂದಿಗೆ ಕಾದಾಡುತ್ತಿದ್ದು ಉಳಿದವರನ್ನು ಹಂತಹಂತವಾಗಿ ಕಳಿಸಲಾಗುತ್ತಿದೆ. ತಾಲಿಬಾನ್ ಉಗ್ರರು ಅಡಗಿರುವ ಸ್ವಾತ್ ಕಣಿವೆ ಪ್ರದೇಶ ಅಮೆರಿಕನ್ ದಾಳಿ-ತಾಲೀಬಾನ್ ಪ್ರತಿದಾಳಿಗೆ ಸಿಕ್ಕು ಅಕ್ಷರ ರಣರಂಗವಾಗಿ ನಲುಗುತ್ತಿದೆ. ಇಡೀ ಕಣಿವೆಯಾದ್ಯಂತ ಇರುವ ಬುಡಕಟ್ಟು ಜನರು ತಾಲೀಬಾನ್ ಜೊತೆಗೂಡಿರುವುದರಿಂದ ಯುದ್ಧ ಸದ್ಯಕ್ಕೆ ಮುಗಿಯುವ ಲಕ್ಷಣಗಳು ಕಾಣುತ್ತಿಲ್ಲ. ಅಂದರೆ ಸದ್ಯ ಅಮೆರಿಕನ್ ಸೈನ್ಯ ಅಲ್ಲಿಂದ ಮರಳುವುದು ಸಾಧ್ಯವಿಲ್ಲ.


ಸುಮ್ಮನಿರಲಾರದೆ ಕೆರೆದುಕೊಳ್ಳುವುದೆಂದರೆ ಇದೇ ಅಲ್ಲವೆ? ●



ರಾಮು-ಸೋಮು ಎಂಬ ಹಕ್ಕಬುಕ್ಕರಿಗಾಗಿ?


ವಾರ್ಡ್ ವಾರ್ 5 BBMP
ಜಯನಗರ

ಬಿಜೆಪಿಯ ಹಳೇ ತಲೆ ವಿಜಯ್‌ಕುಮಾರ್ ಯನಗರಕ್ಕೆ ಶಾಸಕರಾಗಿ ಗೆದ್ದು ಯಾರಿಗೇನು ಸುಖ ತೋ ಗೊತ್ತಿಲ್ಲ. ಒಬ್ಬ ರಾಮು ಮತ್ತೊಬ್ಬ ಸೋಮು ಬ ಇಬ್ಬರು ಪ್ರಚಂಡ ಮಾಜಿ ಕೌನ್ಸಿಲರ್‌ಗಳಿರುವತನಕ ವ್ಮೆಲ್ಲೇ ವಿಜಯ್‌ಕುಮಾರ್ ಸಾಹೇಬರಿಗಾಗಲಿ ಯನಗರದ ಬಿಜೆಪಿಗಾಗಲಿ ತಲೆಬಿಸಿ ತಪ್ಪುವುದೂ ಲ್ಲ!


ರಾಮಮೂರ್ತಿ

ಜಯನಗರದ ಬಿಜೆಪಿ ಳೆಯದಲ್ಲಿ ಕ್ಕಬುಕ್ಕರೆಂದೇ ಖ್ಯಾತರಾದ ಜಿ ಕೌನ್ಸಿಲರ್ ಮಮೂರ್ತಿಗೆ ಈ ಬಾರಿ ಟ್ಟಾಭಿರಾಮನಗರ ರ್ಡಿನಿಂದ ಗೆದ್ದು ಬರುವ ಯಾದರೆ ಆತನ ಪಕ್ಕಾ ಸೋಮಶೇಖರ್‌ಗೆ ಶಾಕಂಬರಿ ನಗರದ ಟ್ಟೇ ಬೇಕೆಂದು ಹಠಕ್ಕೆ ದ್ದಿದ್ದಾನೆ. ಈ ಪೈಕಿ ರನ್ನೇ ತುಳಿಯಲು ಹೊರಟರೂ ಎಮ್ಮೆಲ್ಲೇ ಜಯ್‌ಕುಮಾರ್ ಬುಡಕ್ಕೆ ಬೆಂಕಿ ಬೀಳುವುದಂತೂ ರಂಟಿ. ಹೀಗಾಗಿ ಜೊತೆಗಿದ್ದೇ ಒಬ್ಬರನ್ನೊಬ್ಬರು ಮುಗಿಸಲು ಣಿಸುವ ರಾಮು-ಸೋಮು ಜೋಡಿಗೆ ಗೆದ್ದು ಾಗಿಹೋಗಿ ಎಂದೇ ಶಾಪ ಹಾಕಿ ಶಾಸಕ ವಿಜಯ್ ಮಾರ್ ಕ್ಯಾಟಗರಿ ರೂಪಿಸಿಕೊಟ್ಟಿದ್ದಾರೆ.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಸುರೇಶ್ ವಿರುದ್ಧ ಷ್ಟು ಅಂತರದಲ್ಲೇ ಗೆದ್ದವರು ಬಿಜೆಪಿಯ ಜಯ್‌ಕುಮಾರ್. ಜಯನಗರದ ಏಳು ವಾರ್ಡುಗಳ ಪಟ್ಟಾಭಿರಾಮನಗರ ಮತ್ತು ಸಾರಕ್ಕಿ ಜನರಲ್ ರ್ಡುಗಳಾದರೆ, ಭೈರಸಂದ್ರ, ಗುರಪ್ಪನಪಾಳ್ಯ, ಶಾಕಂಬರಿ



ನಾಗರಾಜು


ಮೊಹಮ್ಮದ್


ಚಂದ್ರಶೇಖರ್


ಗೋವಿಂದರಾಜು


ಅರುಣ್‌ಕುಮಾರ್


ಶ್ರೀಧರ್

ಮತ್ತು ಜೆಪಿ ನಗರಗಳು ಬಿಸಿಎಂ-ಎ ಮೀಸಲಾತಿ ಳಪಟ್ಟು ಜೆ.ಪಿ. ನಗರ ಪೂರ್ವ ವಾರ್ಡ್ ಮಾತ್ರ ಶಿಷ್ಟ ಕ್ಯಾಟಗರಿಗೊಳಪಟ್ಟಿದ್ದಕ್ಕೂ ಕಾರಣಗಳಿವೆ. ಂದೋ ಅಥವಾ ಎರಡೋ ವಾರ್ಡುಗಳ ಹೊರತಾಗಿ ಲ್ಲದರಲ್ಲೂ ಬಿಜೆಪಿಯೇ ಗೆಲ್ಲಬೇಕೆಂಬ ಲೆಕ್ಕಾಚಾರವಿಟ್ಟೇ ರ್ಡುಗಳನ್ನೂ ಕ್ಯಾಟಗರಿಯನ್ನೂ ರೂಪಿಸಿದ್ದಾರೆ ಶಾಸಕ ಯ್‌ಕುಮಾರ್.

ರಾಮು-ಸೋಮು

ವಿಜಯ್‌ಕುಮಾರ್ ಬ್ರಹ್ಮಚಾರಿಯೆಂಬ ಕಾರಣಕ್ಕೋ ವಾ ಹೆಣ್ಣೆಂದರೇನೇ ಅಲರ್ಜಿಯೋ ಗೊತ್ತಿಲ್ಲ, ಏಳು ರ್ಡುಗಳ ಪೈಕಿ ಒಂದೇಒಂದು ಮಹಿಳಾ ವಾರ್ಡಿಲ್ಲ. ಜಯನಗರಕ್ಕೆ ವಿಜಯ್‌ಕುಮಾರ್ ಎಮ್ಮೆಲ್ಲೇಯಾದರೂ ಚಿತ ಸೂತ್ರ, ಪಾರ್ಟಿ ಹಿಡಿತ, ಪ್ರಭಾವಗಳೆಲ್ಲವೂ ಜಿ ಕೌನ್ಸಿಲರ್ ರಾಮಮೂರ್ತಿಯ ಕೈಯಲ್ಲಿದೆ. ಕೇಳಿ ಅನಂತ್‌ಕುಮಾರ್ ಪಕ್ಕಾ ಬಂಟ. ವಿಜಯ್ ಮಾರ್ ಯಾಮಾರಿದ್ದರೆ ತಾನೇ ಬಿಜೆಪಿ ಟಿಕೆಟ್ ಗಿಟ್ಟಿಸಿ ಮಮೂರ್ತಿ ಎಮ್ಮೆಲ್ಲೇಯಾಗಿರುತ್ತಿದ್ದರು.

ಂಥವನನ್ನು ಹಾಗೇ ಬಿಟ್ಟರೆ ಎಲ್ಲಿ ತನ್ನ ಕುರ್ಚಿಗೇ ಕನಾಗುತ್ತಾನೋ ಎಂದು ಭಯಕ್ಕೆ ಬಿದ್ದೇ ಯ್‌ಕುಮಾರ್ ಪಟ್ಟಾಭಿರಾಮನಗರ ವಾರ್ಡನ್ನು ಲ್ ಕ್ಯಾಟಗರಿ ಮಾಡಿಕೊಟ್ಟಿದ್ದಾರೆ. 24 ಸಾವಿರದಷ್ಟು ದಾರರಿರುವ ಪಟ್ಟಾಭಿರಾಮನಗರ ವಾರ್ಡಿನ ಮಟ್ಟಿಗೆ ರಾಮಮೂರ್ತಿಗೆ ಕಾಂಗ್ರೆಸ್ಸಿನಲ್ಲಾಗಲಿ ಜೆಡಿಎಸ್ ಗಲಿ ತಕ್ಕ ಎದುರಾಳಿಗಳಿಲ್ಲ ನಿಜ. ರೌಡಿಜಮ್ಮು, ಹೆಂಡ, ರಿಗ್ಗಿಂಗ್ ಎಲ್ಲದರಲ್ಲೂ ಪಳಗಿದ ಕೈಯಾದ ಮಮೂರ್ತಿಯನ್ನು ಹಣಿಯಬೇಕೆಂದರೆ ಅದು ಗ್ರೆಸ್ಸಿನ ಚಂದ್ರಶೇಖರ ರಾಜು ಮಾತ್ರ ಎಂಬುದು ಗಳೇ ಬಸವಳಿದ ಕಾಂಗ್ರೆಸ್ಸಿಗರ ಲೆಕ್ಕಾಚಾರ. ಜಾತಿಯಲ್ಲಿ ನಾದರೂ ನಾಗರಿಕ ಹಿತರಕ್ಷಣಾ ವೇದಿಕೆ ಸಂಘಟಿಸಿ ಶೇಖರ ರಾಜು ಮಾಡಿದ ಜನಸೇವೆಯ ಪಟ್ಟಿ ದಿದೆ. ಆದರಲ್ಲೂ ಮಸೀದಿಯ ಗಲಾಟೆಯಲ್ಲಿ ತ್ತು ಜಾತಿ ಮೀರಿ ನಿಂತು ಕೋಮು ಸೌಹಾರ್ದತೆ ರಾಜು ಹೋರಾಡಿದ್ದರಿಂದಲೇ ನಡೆಯಲಿದ್ದ ಘರ್ಷಣೆ . ರಾಮಲಿಂಗಾರೆಡ್ಡಿಯವರು ಜಯನಗರಕ್ಕೆ

ಶಾಸಕರಾಗಿದ್ದಷ್ಟೂ ಕಾಲ ಇಲ್ಲಿನ ಕಾಂಗ್ರೆಸ್ಸಿಗರಿಗೆ ಚಿಂತೆಯಿರಲಿಲ್ಲ. ಅವರು ಪಕ್ಕದ ಬಿಟಿಎಂ ಲೇಔಟಿಗೆ ವಲಸೆಹೋದ ನಂತರ ಬಿಜೆಪಿ ಅಟ್ಟಹಾಸದೆದುರು ಅಷ್ಟಿಷ್ಟು ಹೋರಾಟ ಕೊಟ್ಟಿದ್ದು ಚಂದ್ರಶೇಖರ ರಾಜುವೇ. ಸದ್ಯ ಜಯನಗರದ ಕಾಂಗ್ರೆಸ್ಸಿಗೆ ರಾಜುವೇ ಆಪದ್ಬಾಂಧವ

ಚಂದ್ರಶೇಖರ ರಾಜು


ಹೀಗಾಗಿ ಬಲಾಢ್ಯ ರಾಮಮೂರ್ತಿಯ ವಿರುದ್ಧ ಚಂದ್ರಶೇಖರ ರಾಜುವನ್ನು ನಿಲ್ಲಿಸಿದರಷ್ಟೇ ಜಯನಗರದಲ್ಲಿ ಕಾಂಗ್ರೆಸ್ಸಿಗೆ ಉಳಿಗಾಲವೆಂಬ ನಿರೀಕ್ಷೆ ಕಾಂಗ್ರೆಸ್ಸಿಗರಿಗಿದೆ. ಆದರೆ ಚಂದ್ರಶೇಖರರಾಜು ಮನೆಯಿರುವುದು ಪಕ್ಕದ ಶಾಕಾಂಬರಿನಗರ ವಾರ್ಡಿನಲ್ಲಿ. 22 ಸಾವಿರ ಮತದಾರರಿರುವ ಶಾಕಾಂಬರಿ ನಗರ ಸದ್ಯ ಬಿಸಿಎಂ-ಎ ಕ್ಯಾಟಗರಿಗೊಳಪಟ್ಟಿದ್ದು ಕೂಡ ರಾಮಮೂರ್ತಿಯ ಹಳೇ ಶಿಷ್ಯ ಮಾಜಿ ಕೌನ್ಸಿಲರ್ ಸೋಮಶೇಖರ್ ಅನುಕೂಲಕ್ಕಾಗಿಯೇ.

ಪಕ್ಕದ ಪಟ್ಟಾಭಿರಾಮನಗರ ವಾರ್ಡಿಗಿಂತಲೂ ಶಾಕಾಂಬರಿ ನಗರದಲ್ಲೇ ಚಂದ್ರಶೇಖರ ರಾಜುಗೆ ಹೆಚ್ಚು ವರ್ಚಸ್ಸಿದೆ. ಬಲಾಢ್ಯ ರಾಮಮೂರ್ತಿಯ ವಿರುದ್ಧ ನಿಂತು ರಿಸ್ಕಿಗೆ ಕೈ ಹಾಕುವುದಕ್ಕಿಂತಲೂ ಈಜಿಯಾದ ಶಾಕಾಂಬರಿನಗರವನ್ನೇ ಆಯ್ದುಕೊಳ್ಳುವ ಉಮೇದೂ ರಾಜುಗಿದೆ. ರಾಮು-ಸೋಮು ಇಬ್ಬರ ಪೈಕಿ ರಾಜು ಯಾರ ವಿರುದ್ಧ ನಿಂತರೂ ಜಿದ್ದಾಜಿದ್ದಿ ಶತಸಿದ್ಧ.

ಸಾರಕ್ಕಿ ವಾರ್ಡಿನಲ್ಲೂ ಕಾಂಗ್ರೆಸ್ಸಿನದ್ದು ಇದೇ ಸ್ಥಿತಿ. 27 ಸಾವಿರದಷ್ಟು ಮತದಾರರಿರುವ ಸಾರಕ್ಕಿ ಈ ಹಿಂದೆ ಜೆ.ಪಿ. ನಗರದಲ್ಲಿತ್ತು. ಅಲ್ಲಿಗೆ ಒಂದಲ್ಲ ಎರಡು ಬಾರಿ ಬಿಜೆಪಿಯಿಂದ ಗೆದ್ದು ಕೌನ್ಸಿಲರ್ ಆದವನು ಎಸ್.ಕೆ. ನಟರಾಜ್. ಹುಟ್ಟಾ ನೆಲಗಳ್ಳ. ಉತ್ತರಹಳ್ಳಿ ಬಗರ್‌ಹುಕುಮ್ ಭೂಕಬಳಿಕೆಯಲ್ಲಿ ನಕಲಿ ದಾಖಲೆ ಸೃಷ್ಟಿಸಿ ಎಕರೆಗಟ್ಟಲೇ ಸರ್ಕಾರಿ ಭೂಮಿ ಮುಂಡಾಮೋಚಿದ ನಟರಾಜ್ ಬನಶಂಕರಿ ದೇವಸ್ಥಾನದ ಎದುರಿಗಿದ್ದ ತಾರಾಮಂಡಲ ಹೌಸಿಂಗ್ ಸೊಸೈಟಿಯ ಭೂಕಬಳಿಕೆಗೂ ಪಾಲುದಾರನಾದ. ಐದಾರು ಎಕರೆಗಳಷ್ಟು ಭೂಮಿ ನುಂಗಿ ಹಾಕಿದ ತಾರಾ ಮಂಡಲ ಹೌಸಿಂಗ್ ಸೊಸೈಟಿಯ ಖದೀಮರು ಮಂತ್ರಿ ಅಶೋಕ್ ಮೂಲಕ ಕೆಲಸ ಮಾಡಿಸಿಕೊಟ್ಟ ನಟರಾಜ್‌ಗೆ ಭಕ್ಷೀಸಾಗಿ ಭರ್ಜರಿ ಸೈಟನ್ನೇ ಕೊಟ್ಟರು. ಇದೊಂದೇ ಡೀಲಿನಿಂದಾಗಿ ನಟರಾಜ್ ಒಂದೇ ಏಟಿಗೆ ಎರಡು ಕೋಟಿ ಹೊಡೆದ.


ಭೂದಾಹಿ ಎಸ್.ಕೆ. ನಟರಾಜ್

ಜೆ.ಪಿ. ನಗರದಿಂದ ಗೆದ್ದ ನಟರಾಜ್ ಕೌನ್ಸಿಲರ್ ಆಗಿ ಲ್ಯಾಂಡು ದೋಚಿದ್ದು ಬಿಟ್ಟರೆ ಮಾಡಿದ ಮತ್ತೊಂದು ಘನಕಾರ್ಯವೆಂದರೆ ಬೋಗಸ್ ಕಾಮಗಾರಿಯ ಕಳ್ಳಬಿಲ್ಲು ದಂಧೆಯೊಂದೇ. ಹೀಗಾಗಿ ನಟರಾಜ್ ವಿರುದ್ಧ ಕಾಂಗ್ರೆಸ್ ಕ್ಯಾಂಡಿಡೇಟಾದ ಅರುಣ್‌ಕುಮಾರ್ ಇಲ್ಲಿನ ನೆಚ್ಚಿನ ಅಭ್ಯರ್ಥಿ. ಈತ ಕೂಡ ನಟರಾಜ್‌ನಂತೆ ರೆಡ್ಡಿಯೇ. ತಂದೆ ರಾಮಕೃಷ್ಣ ರೆಡ್ಡಿ ಯಾವುದೋ ಕಾಲಕ್ಕೆ ಕಂಟ್ರಾಕ್ಟರ್ ಆಗಿದ್ದರು. ಕಳೆದ 20 ವರ್ಷದಿಂದ ರಾಜಕೀಯದಲ್ಲಿರುವ ಅರುಣ್‌ಕುಮಾರ್


ನಟರಾಜು

ತನ್ನದೇ ಮಾಡರ್ನ್ ಸ್ಕೂಲಿನಲ್ಲಿ ಬಡಮಕ್ಕಳಿಗೆ ಕೊಟ್ಟ ವಿದ್ಯಾದಾನ, ಫೀಜು ರಿಯಾಯಿತಿ, ಎಸ್ಸೆಲ್ಸಿ ಪಾಸಾದವರಿಗೆ ಕೊಟ್ಟ ಪ್ರೋತ್ಸಾಹ ಧನ ಮತ್ತು ಜೆ.ಪಿ. ನಗರ ಕ್ರೀಡಾಕ್ಲಬ್ ಅಧ್ಯಕ್ಷನಾಗಿ, ಸೇವಕ್ ಸಂಸ್ಥೆ ವತಿಯಿಂದ ನಡೆಸುವ ಉಚಿತ ಬ್ಲಡ್ ಬ್ಯಾಂಕ್‌ನಿಂದಾಗಿ ಈ ಭಾಗದಲ್ಲಿ ಸಾಕಷ್ಟು ಜನಪ್ರಿಯತೆ ಗಳಿಸಿರುವುದಂತೂ ಸತ್ಯ. ನಟರಾಜ್ ಕುಖ್ಯಾತಿಯಿಂದಾಗಿ ರೋಸತ್ತ ಜೆ.ಪಿ. ನಗರದ ಜನಕ್ಕೆ ಅರುಣ್‌ಕುಮಾರ್ ಬಿಟ್ಟರೆ ಬೇರೆ ಆಯ್ಕೆಯಾದರೂ ಎಲ್ಲಿದೆ?

ಸದ್ಯ ಬಿಜೆಪಿಯಲ್ಲಿರುವ ಮೇಲ್ಕಂಡ ಮೂವರು ಮಾಜಿ ಕೌನ್ಸಿಲರ್‌ಗಳ್ಯಾರೂ ಶಾಸಕ ವಿಜಯ್‌ಕುಮಾರ್‌ರನ್ನು ಗೌರವಿಸುತ್ತಿಲ್ಲ. ಹೀಗಾಗಿ ಎಮ್ಮೆಲ್ಲೇಗೂ ಇವರನ್ನು ಕಂಡರೆ ಅಷ್ಟಕ್ಕಷ್ಟೆ. ಆದರೆ ಭೈರಸಂದ್ರ ವಾರ್ಡಿದೆಯಲ್ಲ; ಅಲ್ಲಿಗೆ ಬಿಜೆಪಿ ಅಭ್ಯರ್ಥಿಯಾಗಲಿರುವ ನಾಗರಾಜು ಮಾತ್ರ ವಿಜಯ್‌ಕುಮಾರ್ ಸಾಹೇಬರ ನೆಚ್ಚಿನ ಬಂಟ. ನಿನ್ನೆಮೊನ್ನೆ ತನಕ ಕಾಂಗ್ರೆಸ್ಸಿನಲ್ಲಿದ್ದು ರಾಮಲಿಂಗಾರೆಡ್ಡಿಗೆ ಪರಮಾಪ್ತರಾಗಿದ್ದ ನಾಗರಾಜು ಬಹುಶಃ ಬಿಜೆಪಿಗೆ ಬರದೇಹೋಗಿದ್ದರೆ ವಾರ್ಡ್ ವಿಂಗಡಣೆಯಿಂದ ಹಿಡಿದು ಮೀಸಲಾತಿಯತನಕ ಉಲ್ಟಾ ಪಲ್ಟಾಯಿಸಿ ಚುನಾವಣೆಗೆ ನಿಲ್ಲದ ಹಾಗೇ ಮಾಡಿ ತುಳಿಯುವ ಎಲ್ಲಾ ಕಾರಸ್ಥಾನಗಳೂ ರೆಡಿಯಾಗೇ ಇತ್ತು. ಇದನ್ನೆಲ್ಲ ಲೆಕ್ಕ ಹಾಕಿಯೇ ಗುರು ರಾಮಲಿಂಗಾರೆಡ್ಡಿಯ ಆಶೀರ್ವಾದ ಪಡೆದೇ ನಾಗರಾಜು ಬಿಜೆಪಿಗೆ ಕಾಲಿಟ್ಟಿದ್ದಾರೆ.


ವಿಜಯಕುಮಾರ್


ಸೋಮಶೇಖರ್

ಪಾರ್ಕ್ ನಾಗರಾಜು ವಿರುದ್ಧ?

ಬೆಂಗಳೂರಿನಲ್ಲಿ ಎಲ್ಲೂ ಇಲ್ಲದಷ್ಟು ಪಾರ್ಕುಗಳನ್ನು ನಿರ್ಮಿಸಿದ್ದರಿಂದಲೇ ನಾಗರಾಜುಗೆ ಪಾರ್ಕ್ ನಾಗರಾಜು ಎಂಬ ಹೆಸರು ಬಂತು. ಈ ಹಿಂದೆ ಪಟ್ಟಾಭಿರಾಮನಗರಕ್ಕೆ ಕಾಂಗ್ರೆಸ್ ಕೌನ್ಸಿಲರ್ ಆಗಿದ್ದ ನಾಗರಾಜು ಸರಳ ವ್ಯಕ್ತಿ. ಕಿತ್ತೂರು ಚೆನ್ನಮ್ಮ ಕ್ರಿಡಾಂಗಣ ಕಟ್ಟಿಸಿದ್ದು, ಎಂಟಂತಸ್ತಿನ ತರಕಾರಿ ಮಾರುಕಟ್ಟೆ ನಿರ್ಮಿಸಿದ್ದು, ಇಡೀ ವಾರ್ಡಿನ ತುಂಬ ಒಂದೇ ಒಂದು ಟ್ಯೂಬ್‌ಲೈಟ್ ಕಾಣಿಸದ ಹಾಗೇ ಮರ್ಕ್ಯುರಿ ಲ್ಯಾಂಪ್ ಅಳವಡಿಸಿದ್ದು, ಎಲ್ಲೆಂದರಲ್ಲಿ ಪಾರ್ಕ್ ನಿರ್ಮಿಸಿದ್ದು ಇತ್ಯಾದಿ ಸಾಧನೆಗಳ ದೊಡ್ಡ ಪಟ್ಟಿಯೇ ನಾಗರಾಜ್ ಬೆನ್ನಿಗಿದೆ. ಸರಿಸುಮಾರು ಐದು ಸಾವಿರ ಮತದಾರರಿರುವ ಎಲ್‌ಐಸಿ ಕಾಲೋನಿ ಪೂರ್ತಿ ನಾಗರಾಜ್ ಬೆನ್ನಿಗಿದೆ. ವಿಚಿತ್ರವೆಂದರೆ ಹಿಂದೊಮ್ಮೆ ಇದೇ ನಾಗರಾಜ್‌ರ ಮನೆ ಕೆಲಸದ ಹುಡುಗನಂತಿದ್ದ ಜೋಸೆಫ್ ಎಂಬಾತನನ್ನು ಬಿಟ್ಟರೆ ಬೈರಸಂದ್ರ ವಾರ್ಡಿಗೆ ಬೇರೆ ಕಾಂಗ್ರೆಸ್ ಅಭ್ಯರ್ಥಿಗಳೇ ಗತಿಯಿಲ್ಲ; ಅದು ಕಾಂಗ್ರೆಸ್ ನಾಯಕ ರಾ.ಲಿಂ. ರೆಡ್ಡಿ ತಮ್ಮ ಹಳೇ ಶಿಷ್ಯನಿಗೆ ಮಾಡುತ್ತಿರುವ ತೆರೆಮರೆಯ ಉಪಕಾರವೆ?

ಬೈರಸಂದ್ರದಂತೆ ಬಿಸಿಎಂ-ಎ ಕ್ಯಾಟಗರಿಯ ಮತ್ತೊಂದು ವಾರ್ಡೆಂದರೆ ಅದು ಜೆ.ಪಿ. ನಗರ. ಇಲ್ಲಿ ಚಂದ್ರಶೇಖರ್ ರಾಜು ಹೆಸರಿನ ಮತ್ತೊಬ್ಬ ಆಸಾಮಿ ಬಿಜೆಪಿ ಅಭ್ಯರ್ಥಿಯಂತೆ. ಈ ಹಿಂದೆ ಜೇಪಿನಗರಕ್ಕೆ ಬಿಜೆಪಿ ಕೌನ್ಸಿಲರ್ ಆಗಿದ್ದ ಎಸ್.ಕೆ. ನಟರಾಜನ ಶಿಷ್ಯನೀತ. ಈತನನ್ನು ಕೌನ್ಸಿಲರ್ ಮಾಡುವ ಗುರಿಹೊತ್ತೇ ವಾರ್ಡನ್ನೂ ಕ್ಯಾಟಗರಿಯನ್ನೂ ರೂಪಿಸಿಕೊಟ್ಟ ನಟರಾಜ್ ಕುಖ್ಯಾತಿಯ ಜೊತೆಗೆ ನಂದಿನಿ ಹೋಟೆಲ್‌ನವರ ಬಿಲ್ಡಿಂಗಿಗೆ ಕೈಹಾಕಿ ರೋಲ್‌ಕಾಲ್ ಮಾಡಿದ ಕಳಂಕವೂ ಚಂದ್ರಶೇಖರ್ ರಾಜು ಬೆನ್ನಿಗಿದೆ. ಈತನ ವಿರುದ್ಧ ಗೆಲ್ಲುವ ತಾಕತ್ತಿರುವುದು ಜೆ.ಪಿ. ನಗರ ಸಿಟಿಜನ್ ಫೋರಮ್‌ನ ಅಧ್ಯಕ್ಷ ಪ್ರಭುರಾಜ್ ಎಂಬ ರಾಮಲಿಂಗಾ ರೆಡ್ಡಿ ಶಿಷ್ಯನಿಗೆ ಮಾತ್ರ. ಸ್ವಂತ ಮಾರೇನಹಳ್ಳಿಯಲ್ಲೇ ಹೆಸರು ಕೆಡಿಸಿಕೊಂಡ ಚಂದ್ರಶೇಖರ್ ರಾಜು ವಿರುದ್ಧ ಪ್ರಭುರಾಜ್‌ಗೆ ಕಾಂಗ್ರೆಸ್ ಟಿಕೆಟ್ ಕೊಡುವವರು ಬೇಕಲ್ಲ?

ಬಿಜೆಪಿಯ ದಲಿತ?

ಉಳಿದಂತೆ ಜಯನಗರದ ಏಕೈಕ ಪರಿಶಿಷ್ಟ ಮೀಸಲು ಕ್ಷೇತ್ರವಾದ ಜಯನಗರ ಪೂರ್ವಕ್ಕೆ ಕಾಂಗ್ರೆಸ್ಸಿನ ಗೋವಿಂದರಾಜು, ಪೊಲೀಸ್ ವೆಂಕಟೇಶ್, ಮಾಜಿ ಮೇಯರ್ ಕೆ.ಸಿ. ವಿಜಯಕುಮಾರ್ ಪುತ್ರ ಗೌತಮ್, ಗುರಪ್ಪನಪಾಳ್ಯದ ಹಳೇ ರೌಡಿ ರಿಜ್ವಾನ್ ಶಿಷ್ಯ ಅಶೋಕ್ ಮುಂತಾದವರ ಹೆಸರೇನೋ ಓಡುತ್ತಿದೆ. ಆದರೆ ಈ ಪೈಕಿ ಯಾರೊಬ್ಬರೂ ಸ್ಥಳೀಕರಲ್ಲ. ಕಳೆದ ಹತ್ತಾರು ವರ್ಷಗಳಿಂದ ಬೋವಿ ಸಂಘಟನೆಗಳಲ್ಲಿ ಸಕ್ರಿಯನಾಗಿದ್ದು ಕೊಳಗೇರಿ ವಾಸಿಗಳಿಗೆ ಹಕ್ಕುಪತ್ರ, ಮನೆ ಕಟ್ಟಿಸಿ ಕೊಡುವುದು ಈ ಕಾಯಕಗಳನ್ನೇ ಮಾಡಿಕೊಂಡೇ ಬಂದ ವಿ. ಶ್ರೀಧರ್ ಇಲ್ಲಿನ ಬಿಜೆಪಿ ಅಭ್ಯರ್ಥಿ. ಶ್ರೀಧರ್ ದುರಹಂಕಾರಿಯಲ್ಲ. ಬಿಜೆಪಿಯಲ್ಲಿದ್ದೂ ತನ್ನ ಜನಪರ ಕಾಳಜಿ ಬಿಡಲಿಲ್ಲ.

ಕಾಂಗ್ರೆಸ್ಸಿನಿಂದ ಶ್ರೀಧರ್ ವಿರುದ್ಧ ಯಾರೇ ನಿಂತರೂ ಕ್ಷೇತ್ರಕ್ಕವರು ಅಪರಿಚಿತರೇ ಹೊರತು ಹತ್ತಾರು ವರ್ಷಗಳಿಂದ ಬೇರುಬಿಟ್ಟ ಶ್ರೀಧರ್ ಹೊರತಾಗಿ ಜಯನಗರ ಪೂರ್ವದ ಮತದಾರರಿಗೆ ಬೇರೆ ಆಯ್ಕೆಯೇ ಇಲ್ಲ!


ಅಷ್ಟಕ್ಕೂ 'ಸರ್ವಂ ಬಿಜೆಪಿ ಮಯಂ' ಆಗಿರುವಾಗ ಶಾಸಕ ವಿಜಯ್‌ಕುಮಾರ್ ನೆಮ್ಮದಿಗೆ ಭಂಗವುಂಟುಮಾಡಲು ಕಾಂಗ್ರೆಸ್-ಜೆಡಿಎಸ್‌ಗಳಲ್ಲಿ ರಾಮಲಿಂಗಾರೆಡ್ಡಿಯಂಥ ತಾಕತ್ತುದಾರರಾದರೂ ಯಾರಿದ್ದಾರೆ?

● ರಾ. ಸೋಮನಾಥ್

ಗುರಪ್ಪನಪಾಳ್ಯದ ಕಿರಾತಕರು

ಇಬ್ಬರು ಕಿರಾತಕರ ಮಧ್ಯೆ ಕಮ್ಮಿ ಅಪಾಯಕಾರಿ ಯಾರೆಂದು ಲೆಕ್ಕ ಹಾಕಬೇಕಾದ ದೌರ್ಭಾಗ್ಯ ಗುರಪ್ಪನಪಾಳ್ಯದ ಮುಸ್ಲಿಮರದು. ಮೊದಲು ಶಹತಾಜ್‌ಖಾನಮ್ ಎಂಬ ಬಿಂಕದ ವೈಯ್ಯಾರಿಯನ್ನು ಗೆಲ್ಲಿಸಿದ ಇಲ್ಲಿನ ಜನ ಕಂಡಿದ್ದು ಆಕೆಯ 'ಮೆಹಂದಿ' ಪುರಾಣಗಳನ್ನಷ್ಟೇ. ಆನಂತರ ಕೌನ್ಸಿಲರ್ ಆದ ಸಮೀವುಲ್ಲಾ ತನ್ನ ಶಬನಮ್ ಡೆವಲಪರ್ಸ್ ಅಡ್ಡೆಯ ಮೇಲೆ ರವಿಪೂಜಾರಿ ಗ್ಯಾಂಗ್ ದಾಳಿ ನಡೆಸಿ ರಿಸೆಪ್ಷನಿಸ್ಟ್‌ಳನ್ನು ಗುಂಡಿಟ್ಟು ಕೊಂದ ನಂತರವಾದರೂ ಬುದ್ಧಿ ಕಲಿಯಬೇಕಿತ್ತು. ಬದಲಾಗಿ ಗುಲ್ಬರ್ಗಾದ ಮುಗ್ಧ ಯುವತಿಯೊಬ್ಬಳ ಕಿಡ್ನಾಪ್ ಮತ್ತು ರೇಪ್ ಕೇಸಿನಲ್ಲಿ ಸಿಕ್ಕಿಬಿದ್ದು ಮತ್ತಷ್ಟು ಕುಖ್ಯಾತನಾದ.

ಈಗ ಮತ್ತದೇ ಸಮೀವುಲ್ಲಾನ ಕೀಚಕ ಮುಖವನ್ನು ಗುರಪ್ಪನಪಾಳ್ಯದ ಮುಸ್ಲಿಮರು ಸಹಿಸಬೇಕಿದೆ. ಕಳೆದ ಚುನಾವಣೆಯಲ್ಲಿ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬಿಜೆಪಿಯ ವಿಜಯ್‌ಕುಮಾರ್ ಗೆಲುವಿಗೆ ಕಾರಣಕರ್ತನಾದ ಇದೇ ಸಮೀವುಲ್ಲ ಈಗ ಲಜ್ಜೆಗೆಟ್ಟು ಮತ್ತೆ ಕಾಂಗ್ರೆಸ್ ಟಿಕೆಟ್ ಕೇಳುತ್ತಿದ್ದಾನೆ. ಈತನ ವಿರುದ್ಧ ಸೆಡ್ಡು ಹೊಡೆದು ತನಗೇ ಕಾಂಗ್ರೆಸ್ ಟಿಕೆಟ್ ಕೊಡಿ ಎಂದು ಹಠಕ್ಕೆ ಬಿದ್ದವನು ನಿನ್ನೆ ಮೊನ್ನೆಯ ತನಕ ಜೆಡಿಎಸ್‌ನಲ್ಲಿದ್ದು ಈಗ ಕಾಂಗ್ರೆಸ್ ಕದ ತಟ್ಟುತ್ತಿರುವ ಕ್ರಿಮಿನಲ್ ರಿಜ್ವಾನ್!


ಸಮೀವುಲ್ಲಾ

ಮಾಜಿ ಕೌನ್ಸಿಲರ್ ಸಮೀವುಲ್ಲಾ ಭೂಡಕಾಯಿತ ಮತ್ತು ಸ್ತ್ರೀಕಂಟಕನಾದರೆ ರೌಡಿ ರಿಜ್ವಾನ್ ಭೂಕಬಳಿಕೆಗೆಂದೇ ವಿವಿಧ ಹಂತಕ ಪಡೆಗಳನ್ನು ಸಾಕುತ್ತಿರುವಾತ. ಬೈರಸಂದ್ರದ ಪಾತಕಿ ಅಜಗರ್, ಬಿಸ್ಮಿಲ್ಲಾನಗರದ ಕಿರಾತಕರಾದ ಸಮೀರ್, ನವಾಜ್, ಮತ್ತೊಬ್ಬ ಪಾತಕಿ ಬೈಲ್ ರಿಯಾ ಮತ್ತು ಕಲಾಸಿಪಾಳ್ಯದ ಡಾನ್ ಮಾಹಿಮಾ ಮಾತ್ರವಲ್ಲದೇ ಸೈಲೆಂಟ್ ಸುನೀಲ, ಮಾರ್ಕೆಟ್ ವೇದಿ, ಮಡಿವಾಳದ ಕಿಲ್ಲರ್ ಕವಳ, ಎಲೆಕ್ಟ್ರಾನಿಕ್ ಸಿಟಿಯ ಸುಪಾರಿ ದೊರೆ ಜೆಸಿಬಿ ನಾರಾಯಣ ಇತ್ಯಾದಿ ಬೆಂಗಳೂರಿನ ಬಹುತೇಕ ಪಾತಕಿಗಳಿಗೆ ಇವತ್ತಿಗೂ ಅನ್ನದಾತ. ರಿಜ್ವಾನ್ ತಮ್ಮ ರೇಹಾನ್ ಕೂಡ ನಟೋರಿಸ್ ರೌಡಿಯೇ.

ಈ ಪೈಕಿ ಯಾರಿಗೇ ಕಾಂಗ್ರೆಸ್ ಟಿಕೆಟ್ ಸಿಕ್ಕರೂ ಗುರಪ್ಪನಪಾಳ್ಯಕ್ಕಷ್ಟೇ ಅಲ್ಲ; ಅದು ಬೆಂಗಳೂರಿಗೇ ಕಂಟಕ. ಹೀಗಾಗಿ ಮಹಮ್ಮದ್ ಫಯಾಜ್ ಎಂಬಾತ ಇಲ್ಲಿಗೆ ನೆಚ್ಚಿನ ಕಾಂಗ್ರೆಸ್ ಅಭ್ಯರ್ಥಿ. ವೃತ್ತಿಯಲ್ಲಿ ಮೆಕಾನಿಕಲ್ ಇಂಜಿನಿಯರ್. ವಿದ್ಯಾವಂತ. ಕಳೆದ 20 ವರ್ಷಗಳಿಂದ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ರಾಜ್ಯ ಸಂಚಾಲಕನಾಗಿ ಬಿಸ್ಮಿಲ್ಲಾನಗರ ಮತ್ತು ಗುರಪ್ಪನಪಾಳ್ಯದ ಬಡ ಮುಸ್ಲಿಮರ ಸೇವೆಗೈಯುತ್ತಲೇ ಬಂದ ಮಹಮ್ಮದ್ ಫಯಾಜ್ ಬೆನ್ನಿಗೆ ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಮಾತ್ರವಲ್ಲದೇ ಸೋತ ಎಮ್ಮೆಲ್ಲೇ ಕ್ಯಾಂಡಿಡೇಟ್ ಎಂ. ಸುರೇಶ್ ಕೂಡ ನಿಂತಿದ್ದಾರೆ. ಮಹಮ್ಮದ್ ಫಯಾಜ್ ಹೊರತಾಗಿ ಸಮೀವುಲ್ಲನಿಗೋ ಪಾತಕಿ ರಿಜ್ವಾನ್‌ಗೋ ಕಾಂಗ್ರೆಸ್ ಟಿಕೆಟ್ಟೇನಾದರೂ ಸಿಕ್ಕಿತೆಂದರೆ ಅದು ಗುರಪ್ಪನಪಾಳ್ಯದ ದುರಂತವಲ್ಲದೇ ಮತ್ತೇನಲ್ಲ. ●

ನೋವು, ಸಂಘರ್ಷದ ಬದುಕು

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷೆಯಾಗಿ ಆಯ್ಕೆ ಆಗಿರುವ ಹಿರಿಯ ಸಾಹಿತಿ ಗೀತಾ ನಾಗಭೂಷಣ ಅವರ ಬದುಕಿನ ಹಲವು ಚಿತ್ರಗಳನ್ನು ಇಲ್ಲಿ ನೀಡಿದ್ದೇವೆ. ಇದನ್ನು ಕರ್ನಾಟಕ ಲೇಖಕಿಯರ ಸಂಘ ಪ್ರಕಟಿಸಿರುವ 'ಲೇಖ-ಲೋಕ 4' ಪುಸ್ತಕದಿಂದ ಆಯ್ದುಕೊಂಡಿದ್ದೇವೆ. ನಮ್ಮ ಸಮಾಜದಲ್ಲಿ - ಅದರಲ್ಲೂ ಹಿಂದುಳಿದ ವರ್ಗದ - ಮಹಿಳೆಯರ ಬದುಕು ಮತ್ತು ಬವಣೆಗಳು ಇಲ್ಲಿ ವ್ಯಕ್ತವಾಗಿದ್ದು ಇದು ಹೊಸ ಪೀಳಿಗೆಯಲ್ಲಿ ಅರಿವು ಮೂಡಿಸಲಿ ಎಂಬುದು ನಮ್ಮ ಆಶಯ..



ಸಿಟ್ಟು, ಸಿಡುಕು, ತಿರಸ್ಕಾರ, ಅಪಮಾನಗಳು ಶೂದ್ರವರ್ಗದಲ್ಲಿ ಹುಟ್ಟಿ ಬಂದ ನನಗೆ, ನನ್ನಂಥವರಿಗೆ ಹೊಸದೇನೂ ಅಲ್ಲ. ನಾನು ಸಣ್ಣವಳಿದ್ದಾಗ, ಶಾಲೆಗೆ ಹೋಗುವಾಗ ಅನುಭವಿಸಿದ ಹಾರುವರ ಹೆಂಗಸರ ಕೋಪತಾಪ ಆಗಾಗ ಬಂದು ನನ್ನ ನೆನಪಿನಂಗಳದಲ್ಲಿ ನಿಂತು ಕಳ್ಳಾ ಮುಳ್ಳಾ ಆಡುತ್ತಿರುವಾಗ ಅಂದಿನಂತೆ ಇಂದು ನನಗೆ ನೋವಾಗುವುದಿಲ್ಲ. ಆಗಿನಂತೆ ಅಬ್ಬರಿಸಿ ಅಳುವಂತಾಗುವುದಿಲ್ಲ. ಬದಲಾಗಿ ಒಂದು ಕಹಿ ನಗುವಿನ ಎಸಳು ನನ್ನ ತುಟಿಗಳ ಮೇಲೆ ಮೈಮುರಿಯುತ್ತದೆ. ಹಾಗೆಯೇ ಹಿಂದಿನ ಆ ದಿನಗಳು ಒಂದೊಂದಾಗಿ ಮುಂದೆ ಬರಲಾರಂಭಿಸುತ್ತವೆ......

"ಏs ಶೂದ್ರ ಮುಂಡೇದೇ.... ದೂರ ಕೂಡು ಅಕಾಡಿ... ನಮ್ಮ ಹುಡ್ರ ಸರಿಜೋಡಿ ಕುಂತು ಓದ್ತಿಯೇನೇ... ಥೂ.... ಸಲಿಗಿ ಕೊಟ್ರೆ ನಾಯಿ ತೆಲೆಮೂಸಿ ನೋಡಿತಂತೆ.... ಈ ಕೆಳಮಂದೀಗೆಲ್ಲಾ ಸಮೀಪ ಕರ್‍ಕೋಬ್ಯಾಡ್ರೋ ಅಂದ್ರ ನನ್ನ ಮಾತೆಲ್ಲಿ ಕೇಳ್ತಾನ ನನ್ನ ಮಗಾ... ನಮ್ಮ ಪಾರುಗೋಳ ಜತಿ ಅಕಿನೂ ಓದ್ಲ್ಯೋಲಿ ಪಾಪ.... ಅಂತಾನ....ಹಿಟ್ಟೊ ಬೂದಿ ಸಮಾಯೇನು?" ಅಂತ ಬೈಯ್ಯುತ್ತಿದ್ದಳು. ಆ ಹಾರುವ ಮಡಿಹೆಂಗಸು.

ಆ ಮಹಾತಾಯಿ ಹೀಗೆಯೇ ಯಾವಾಗಲೂ ನನ್ನ ಮುಖ ಕಂಡರೆ ಸಾಕು ಅವಳ ಮುಖದ ತುಂಬ ಮುನಿಸು ಏರುತ್ತಿತ್ತು. ಮೊದಲೇ ಮಿರಿಮಿರಿ ಮಿಂಚುವ ಮಾರಿಯ ಹೆಂಗಸು. ಸಿಡುಕಿದ್ರೆ ಅವಳ ಮಾರಿಯೆಲ್ಲ ಕೆಂಪಗಾಗುತ್ತಿತ್ತು. ಅಂಚು ಸೆರಗಿಲ್ಲದ ಕೆಂಪು ಸೀರೆಯ ಸೆರಗನ್ನು ತನ್ನ ಬೋಳು ನೆತ್ತಿಯ ಮೇಲೆ ಎಳೆದುಕೊಳ್ಳುತ್ತ ಅವಳು ಸಟಕ್ಕನೆ ಸಿಡುಕಿದರೆ ನನ್ನೆದೆ ನಡಗುತ್ತಿತ್ತು. ನಾನು ನನ್ನ ಪಾಟಿಚೀಲ ತಗೊಂಡು ಆಟು ದೂರ ಸರಿದು ಕೂಡುತ್ತಿದ್ದೆ. ಬಾಕಿ ಹುಡುಗರು ಮಿಟಿ ಮಿಟಿ ಅವಳ ಮುಖ ನೋಡುತ್ತಿದ್ದರು. ನನ್ನ ಕಣ್ಣಂಚು ನೆನೆಯುತ್ತಿತ್ತು.

ಅವಳ ಹೆಸರು ಸುಂದ್ರಾಬಾಯಿ. ಆ ಎದುರು ಮನೆಯ ಬಾಂಬ್ರ ಅಜ್ಜಿ. ಅಜ್ಜಿ ಅಂದರೆ ಮುದುಕಿಯೇನೂ ಆಗಿರಲಿಲ್ಲ. ಐವತ್ತರ ಆಸುಪಾಸಿನ ವಯಸ್ಸಿನ ಸೊಲುಪ ಸ್ಥೂಲಮೈಯ ಹೆಂಗಸು. ಮಗ, ಸೊಸೆ, ಮೊಮ್ಮಕ್ಕಳ ತುಂಬಿದ ಮನೆ. ಮಗ ಬಾಳಾಚಾರಿ ಭಡಜಿ ಮಾತ್ರ ತುಂಬ ಒಳ್ಳೆಯವನು. ನನ್ನನ್ನು ಕಂಡಾಗಲೆಲ್ಲ ಪ್ರೀತಿಯಿಂದ "ದಿನಾ ಸಾಲಿಗಿ ಹೋಗಲಕತ್ತಿದ್ಯಾಯಿಲ್ಲ? ಸಂಜಿ ಮುಂದ ನಮ್ಮ ಅಂಗಳ ದಾಗ ಬಂದು ನಮ್ಮ ಹುಡ್ರ ಜತಿ ಓದ್ಕೋತ ಕೂಡು....." ಅನ್ನುತ್ತಿದ್ದ.

ಸಂಜೆಯಾದರೆ ಮುಗಿಯಿತು. ನಮ್ಮ ಮನೆಯಲ್ಲಿ ಫಾಸ್‌ಲೆಟ ಎಣ್ಣೆಯ ತಗಡಿನ ಚಿಮಣಿ ಹಚ್ಚಿಡುತ್ತಿದ್ದಳು ನಮ್ಮವ್ವ. ಒಲೆ ತೋಳಿನ ಮ್ಯಾಲೋ ಮಾಡದೊಳಗೋ ಕುಂತು ಉರಿಯುತ್ತ ಗಾಳಿಗೆ ಹೊಯ್ದಾಡುತ್ತ ಹೊಗೆ ಕಾರುತ್ತಿದ್ದ ಚಿಮಣಿಯ ಬೆಳಕಿನಲ್ಲಿ ನನಗೆ ಓದೋದು ಬರೆಯೋದು ಆಗುತ್ತಿರಲಿಲ್ಲ. ನಮ್ಮಲ್ಲಿ ಕಂದೀಲಿರಲಿಲ್ಲ. ಹಾಂಗಾಗಿ ನಾನು ಕತ್ತಲಾದರೆ ಆ ಬಾಂಬ್ರ ಮನೆಯ ಕಡೆಗೆ ನೋಡುತ್ತಿದ್ದೆ. ನಮ್ಮ ಎದುರಿನ ಆಟು ದೂರದ ಮನೆಯೇ ಭಟ್ಟರ ಬಾಳಾಚಾರಿಯದು. ಕಲಬುರ್ಗಿಯಲ್ಲಿಯ ಬಾಂಬ್ರ ಗಲ್ಲಿ ಅದು. ಮನಸಬದಾರರ ದೊಡ್ಡ ವಾಡೆಯಿದ್ದ ದ್ದರಿಂದ ಮತ್ತು ಅವೆಲ್ಲ ವಠಾರದ ಮನೆಗಳನ್ನು ಅವರೆ ಬೇರೆ ಬೇರೆ ಮಂದಿಗೆ ಬಾಡಿಗೆ ಕೊಟ್ಟಿದ್ದರಿಂದ ಅದನ್ನು 'ಮನಸಬದಾರ ಗಲ್ಲಿ' ಅಂತಲೇ ಕರೆಯುತ್ತಿದ್ದರು. ಮನಸಬದಾರರೂ ಬಾಂಬ್ರೇ ಆದ್ದರಿಂದ ಬಹಳಷ್ಟು ಮನೆಗಳನ್ನು ಬ್ರಾಹ್ಮಣರಿಗೇ ಬಾಡಿಗೆಗೆ ಕೊಟ್ಟಿದ್ದರಾದರೂ ಆ ಕೊನೆಯ ಮೂಲೆಯ ನಾಲ್ಕಾರು ಖೊಲ್ಲಿಗಳನ್ನು ಅವರಲ್ಲಿ ಕೆಲಸ ಮಾಡುವ ಆಳುಗಳಿಗೂ, ಮನೆಯ ಟಾಂಗಾವಾಲಾ ಶಾಮಣ್ಣನಿಗೂ, ನಮ್ಮಪ್ಪನಿಗೂ ಮತ್ತು ತರಕಾರಿ ಮಾರುವ ಸಾಳೇರ ಮಾರುತಿಗೂ, ದರ್ಜಿ ತುಕಾರಾಮನಂಥ ಶೂದ್ರರಿಗೂ ಕೊಟ್ಟಿದ್ದರು.

ಬದುಕು ಸಿಹಿಕಹಿಗಳ ಮಿಶ್ರಣ ಅನ್ನುವ ಮಾತೊಂದಿದೆ. ಆದರೆ ನನ್ನ ಪಾಲಿಗೆ ಬಂದದ್ದು ಮಾತ್ರ ಕಹಿಯೇ. ಬೇವುಬೆಲ್ಲಗಳ ಮಿಶ್ರಣದಲ್ಲಿ ನನಗೆ ದಕ್ಕಿದ್ದು ಬಹುಪಾಲು ಬೇವೇ. ಅಲ್ಲಲ್ಲಿ ಅಷ್ಟಿಷ್ಟು ಬೆಲ್ಲ ದೊರೆತರೂ ಅದರ ಸಿಹಿ, ಬೇವಿನ ದಟ್ಟ ಕಹಿಯಲ್ಲಿ ಕರಗಿಯೇ ಹೋದಂತಾಗಿದೆ. ನನ್ನ ಈ ಐವತ್ತೊಂಬತ್ತು ವರ್ಷದವರೆಗೆ ಬದುಕು ನನಗೆ ಕಲಿಸಿದ ಪಾಠ ಎಂದೆಂದಿಗೂ ಮರೆಯು ವಂಥದ್ದಲ್ಲ. ಆಗಾಗ ಮೆಲುಕಾಡಿಸುವಂಥದ್ದು. ಮೆಲುಕಾಡಿಸುತ್ತಲೇ ಮಕ್ಕಳಿಗೆ, ಮೊಮ್ಮಕ್ಕಳಿಗೆ ವಿವರಿಸು ವಂಥದ್ದು, ಎಚ್ಚರಿಸುವಂಥದ್ದು!

ಈ ಬದುಕು ಎಂಬುದೇ ಬಹುರೂಪಿ. ಒಬ್ಬೊಬ್ಬರ ಕಣ್ಣಿಗೆ ಒಂದೊಂದು ಬಗೆಯಾಗಿ ಗೋಚರಿಸುತ್ತ ಮಾಯಾ ಮೃಗದಂತೆ ಮುಂದೆ ಮುಂದೆ ಜಿಗಿಯುತ್ತಲೇ ಇರುತ್ತದೆ. ಇದೊಂದು ಚಂದದ ಕನಸು ಅನ್ನುತ್ತಿರುವಾಗಲೇ ಏಕದಂ ಕೆಟ್ಟದ್ದು ಕುರೂಪವಾದದ್ದು ಎದುರಾಗುತ್ತದೆ. ಇದೊಂದು ಸುಖದ ಸುಪ್ಪತ್ತಿಗೆ ಅಂತ ಮೈ ಹೊರಳಿಸುತ್ತಿರುವಾಗಲೇ ದಢಕ್ಕನೆ ಪ್ರಪಾತಕ್ಕೆ ತಳ್ಳಿ ಬಿಡುತ್ತದೆ. ಇನ್ನೊಂದು ಸುಂದರವಾದ ಕೇದಿಗೆಯ ಬನವೆಂದು ಕೈಯಾಡಿಸುತ್ತ ಪರಿಮಳ ಹೀರಿಕೊಳ್ಳುತ್ತಿರುವಾಗಲೇ ಕೈಗೆ ಮಿಡಿನಾಗರಗಳ ಸ್ಪರ್ಶ ಎದೆ ನಡುಗಿಸುತ್ತದೆ. ಹೀಗೆ ಬೆಳದಿಂಗಳಾಗಿ, ಬಿಸಿಲಾಗಿ ಕನಸಾಗಿ, ಅಳುವಾಗಿ, ನಗುವಾಗಿ, ಮನುಷ್ಯನಿಗೆ ಪಾಠ ಕಲಿಸುತ್ತದೆ. ಈ ಬದುಕಿನ ಮುಂದೆ ನೀವು ಆಟದ ಗೊಂಬೆಗಳಿದ್ದಂತೆ. ಒಮ್ಮೆ ಕಂಕುಳಲ್ಲಿ ಕಚುಗುಳಿಯಿಟ್ಟು ನಗಿಸಿದರೆ ಮತ್ತೊಮ್ಮೆ ಕಪಾಳಕ್ಕೆ ಹೊಡೆದು ಅಳಿಸುತ್ತದೆ.

ಹಾರುವರ ಓಣಿಯಲ್ಲಿದ್ದ ನಾನು, ಅವರ ಹೆಣ್ಣುಮಕ್ಕಳಂತೆ ಶಾಲೆಗೆ ಹೋಗುವುದು ಮಾತ್ರ ಅದೇ ಗಲ್ಲಿಯ ಸುಂದ್ರಾಬಾಯಿಯಂಥ ಕೆಲ ಮಡಿವಂತ ಮನಸ್ಸು ಗಳಿಗೆ ಪಸಂದಿರಲಿಲ್ಲ! ಓದುವುದರಲ್ಲಿ ಅವರ ಮಕ್ಕಳಿಗಿಂತ ತುಸು ಮುಂದಿದ್ದ ನನ್ನ ಬಗ್ಗೆ ಅವರಿಗೆ ಒಳಗೊಳಗೇ ಹೊಟ್ಟೆಕಿಚ್ಚಿತ್ತೋ ಏನೋ. ನನ್ನಂಥ ಬಡ, ನಿರ್ಗತಿಕ ಕುಟುಂಬದವರಿಗೆ ಅದರಲ್ಲಿಯೂ ತಳವಾರ, ವಾಲೀಕಾರ, ನಾಟೀಕಾರರಂಥ ತೀರ ಹಿಂದುಳಿದ ಜಾತಿಯ ಹೆಣ್ಣು ಮಕ್ಕಳಿಗೆ ಓದುವುದೇ ಒಂದು ಸಂಘರ್ಷವಾಗಿದ್ದ ದಿನಗಳವು. ಪುಸ್ತಕ, ಪಾಟಿ, ಕಾಪಿಗಳು ಸಾಕಾಗುವಷ್ಟಿರಲಿಲ್ಲ. ಮೀರಾ ಅನ್ನುವ ನನಗಿಂತಲೂ ಒಂದು ತರಗತಿ ಮುಂದಿದ್ದ ಕೋಮಟಿಗರ ನನ್ನ ಗೆಳತಿ ಓದಿಬಿಟ್ಟ ಹಳೆಯ ಪುಸ್ತಕಗಳನ್ನೇ ನಾನು ಕೇಳಿ ಪಡೆದು ಓದುತ್ತಿದ್ದೆ. ಹೊಸ ಪುಸ್ತಕ ಖರೀದಿಸಿ ಓದುವುದು ನನ್ನಂಥ ಬಡವಳಿಗೆ ಸಾಧ್ಯವಿರುತ್ತಿರಲಿಲ್ಲ. ರಾತ್ರಿ ಓದಲು ಮನೆಯಲ್ಲಿ ಕಂದೀಲಿನ ಬೆಳಕಿಗೂ ಗತಿಯಿರಲಿಲ್ಲ. ಹಾರುವವರ ಮಕ್ಕಳು ಓದಲು ಕುಳಿತಾಗ ನಾನೂ ಅಲ್ಲಿ ಹೋಗಿ ಅವರಿಗೆ ತುಸು ದೂರದಲ್ಲಿ ಕಂದೀಲಿನ ಬೆಳಕಿನಲ್ಲಿ ಓದಿಕೊಳ್ಳುತ್ತಿದ್ದೆ. ಎಷ್ಟೇ ದೂರ ಕುಂತರೂ ಬತ್ತಿ ಹೊಸೆಯುತ್ತ ನಮ್ಮ ಮುಂದೆ ಕೂಡುತ್ತಿದ್ದ ಸುಂದ್ರಾಬಾಯಿ ಸಿಡುಕುವುದು ಮಾತ್ರ ತಪ್ಪುತ್ತಿರಲಿಲ್ಲ. ಇಂಥ ಈ ನೆನಪುಗಳು ಸಾಯುವುದಿಲ್ಲ. ಆಗಾಗ ಎದ್ದು ಬಂದು ಚುಚ್ಚುತ್ತಿರುತ್ತವೆ.

ನಾನು ಹುಟ್ಟಿದ್ದು ತಳವಾರದಂಥ ತೀರ ಕೆಳಜಾತಿಯ ಅನಕ್ಷರಸ್ಥ ಬಡಕುಟುಂಬದಲ್ಲಿ. ನನ್ನ ಅವ್ವ ಹಳ್ಳಿಯ ಹೆಣ್ಣುಮಗಳು. ಅಪ್ಪ ಕಲಬುರ್ಗಿಯ ಬಟ್ಟೆ ಗಿರಣಿಯಲ್ಲಿ ಕಾರ್ಮಿಕನಾಗಿದ್ದು ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಜೈಲು ಸೇರಿ ಬಂದವನು. ಹೀಗಾಗಿ ಬಡತನ, ಅನಕ್ಷರತೆಯ ಕೆಳವರ್ಗದ ಕುಟುಂಬದಲ್ಲಿ ಹುಟ್ಟಿದ್ದರೂ ನನ್ನ ಅಪ್ಪ ನನ್ನನ್ನು ಶಾಲೆಗೆ ಕಳಿಸಿದ್ದು ನನ್ನ ಸುದೈವ!

ಎಲ್ಲರಂತಲ್ಲದಿದ್ದರೂ ಸಾಧಾರಣವಾಗಿ ನನ್ನ ಬಾಲ್ಯ ಅಷ್ಟಿಷ್ಟು ಸುಖಕರವಾಗೇ ಇತ್ತು. ಅದು ಮುಗಿದು ತಾರುಣ್ಯದ ಹೊಸ್ತಿಲಿಗೆ ಕಾಲಿಟ್ಟಾಗ ಶುರುವಾಗುತ್ತದೆ ಬದುಕಿನ ಕಾಠಿಣ್ಯ. ಆಗಿನಿಂದಲೇ ಇದು ಹಂತಹಂತವಾಗಿ ಮನುಷ್ಯನಿಗೆ ಸವಾಲುಗಳನ್ನೊಡ್ಡಲು ಸಜ್ಜಾಗುತ್ತದೆ. ನನಗೂ ಇದು ಹೊರತಾಗಲಿಲ್ಲ. ಪುಸ್ತಕದ ಪ್ರೀತಿ, ಓದುವ ಅದಮ್ಯ ಆಸೆಯಿಂದಾಗಿ, ನಾನು ಮ್ಯಾಟ್ರಿಕ್ ಪಾಸಾದನಂತರ ಕಾಲೇಜಿಗೆ ಹೋಗುವ ಹಟ ಹಿಡಿದಾಗ, ನನ್ನನ್ನು ಗಂಡಸರ ನಡುವೆ ಕಲಬುರ್ಗಿಯ ಕಲೆಕ್ಟರ್ ಕಚೇರಿಯಲ್ಲಿ ನೌಕರಿಗೆ ದೂಡಿತು ಈ ಬದುಕು. 1960 ರ ದಶಕದಲ್ಲಿ ಗುಲ್ಬರ್ಗಾ ನಗರದ ಯಾವ ಕಚೇರಿಯಲ್ಲಿಯೂ ಹೆಣ್ಣುಮಕ್ಕಳು ಕ್ಲರ್ಕ್ ಆಗಿ ಕೆಲಸ ಮಾಡುತ್ತಿರಲಿಲ್ಲ. ಆಜೂಬಾಜು ಮಂದಿಯ ಕಟುನುಡಿ, ಬಂಧು ಬಳಗದವರ ವಿರೋಧ, ಅವ್ವನ ಅಳು, ಬೈಗುಳ ಗಳನ್ನು ದೂರತಳ್ಳಿ ಅಪ್ಪನ ಪ್ರೋತ್ಸಾಹದಿಂದಾಗಿ ನಾನು ಕೆಲಸಕ್ಕೆ ಸೇರಿದೆ. ಆಫೀಸಿನಲ್ಲಿಯ ಗಂಡಸರೆಲ್ಲ ಹುಬ್ಬೇರಿಸಿದರು. ಕೆಲವರು ಕುಹಕ ನಗೆ ನಕ್ಕರು. ಆದರೆ ನನ್ನ ಸೆಕ್ಷನ್ ಹೆಡ್ ಬಸಲಿಂಗಪ್ಪ ಅನ್ನುವ ಹಿರಿಯರು ಮಾತ್ರ ನನ್ನನ್ನು ಸೌಜನ್ಯದಿಂದಲೇ ನಡೆಸಿಕೊಂಡರು. ಇಂಗ್ಲಿಷ್ ಆಗ ಆಡಳಿತ ಭಾಷೆಯಾಗಿತ್ತು. ಅವರು ನನಗೆ ಇಂಗ್ಲಿಷಿನಲ್ಲಿ ಪತ್ರರಚನೆ, ನೆನಪೋಲೆ, ಆದೇಶ, ಜ್ಞಾಪನ, ವೇತನ ಬಿಲ್ಲು ಮೊದಲಾದವುಗಳನ್ನು ಕಲಿಸಿಕೊಟ್ಟರು.

ನಾನು ಬೆಳಿಗ್ಗೆ ಏಳು ಗಂಟೆಗೇ ಮನೆಬಿಟ್ಟು ಶ್ರೀ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯಕ್ಕೆ ನನ್ನ ಗೆಳತಿಯರಿಬ್ಬರೊಂದಿಗೆ ನಡದೇಹೋಗುತ್ತಿದ್ದೆ. ಇಲ್ಲಿಂದಲೇ ಶುರುವಾಯಿತು ಪ್ರವಾಹದ ವಿರುದ್ಧ ಈಜುವ ನನ್ನ ಜೀವನ. ಬಹುಶಃ ಅಂದಿನಿಂದಲೇ ಬದುಕು ನನಗೆ ಕಲಿಸುವ ಪಾಠಗಳೂ ಪ್ರಾರಂಭ ವಾದುವು ಎನ್ನಬಹುದು.

ಆಗ ಶರಣಬಸವೇಶ್ವರ ಕಾಲೇಜಿನ ಕಟ್ಟಡ ಪೂರ್ಣಗೊಂಡಿರಲಿಲ್ಲ. ಗುಡ್ಡದ ಮೇಲಿನ ಕಾಲೇಜಿಗೆ ಹತ್ತಿ ಹೋಗಲು ಮೆಟ್ಟಲುಗಳಿರಲಿಲ್ಲ. ನಾವು ಮೂವರೂ ಗೆಳತಿಯರು ಮುಂಜಾನೆ ಏಳು ಗಂಟೆಗೆ ಹರದಾರಿ ದೂರದ ಈ ಕಾಲೇಜಿಗೆ ನಡೆದುಕೊಂಡೇ ಬರುತ್ತಿದ್ದೆವು. ಗುಡ್ಡ ಹತ್ತಿ ಕಾಲೇಜಿನ ಲೇಡಿಸ್‌ರೂಮ್ ಸೇರುವ ಹೊತ್ತಿಗೆ ಸಾಕುಸಾಕಾಗುತ್ತಿತ್ತು. ಮತ್ತೆ ತರಗತಿಗಳಿಗೆ ಹಾಜರಾಗಿ ಮೂರನೇ ಪೀರಿಯಡ್ ಮುಗಿದ ತಕ್ಷಣ ಉಳಿದ ಕ್ಲಾಸುಗಳನ್ನು ಬಿಟ್ಟು ಆಫೀಸಿಗೆ ಸಮಯವಾಯಿತೆಂದು ಅಲ್ಲಿಂದ ಕೆರೆದಂಡೆಯ ಜಗತ್ ಸರ್ಕಲ್‌ನಲ್ಲಿದ್ದ ಡೆಪ್ಯೂಟಿ ಕಮೀಷನರ್ ಕಚೇರಿಗೆ ಓಡು ನಡಿಗೆಯಲ್ಲೆ ಧಾವಿಸುತ್ತಿದ್ದೆ. ಆಫೀಸಿರುವುದು ಹೊಡ್ಡಿನ ಮೇಲೆ. ರಸ್ತೆ ದಾಟಿ ಬಂದು ಮತ್ತೆ ಗುಡ್ಡದಂಥ ಒಡ್ಡು ಏರಿ ಕಚೇರಿಯ ನನ್ನ ಕುರ್ಚಿಯಲ್ಲಿ ಕುಸಿದಾಗ ಏದುಸಿರಿನಿಂದ ಜೀವ ಹೋದಂತಾಗುತ್ತಿತ್ತು. ಅಷ್ಟರಲ್ಲಿ ಹಾಜರಿ ಪುಸ್ತಕ ನಮ್ಮ ಬಾಸ್ ಹತ್ತಿರ ಹೋಗದಿದ್ದರೆ ನನ್ನ ಪುಣ್ಯ. ಹೋಗಿದ್ದರೆ ಅವರ ಬಳಿ ಹೋಗಿ, ತಡವಾದುದಕ್ಕೆ ಕಾರಣ ಹೇಳಿ, ಕ್ಷಮೆ ಕೇಳಿ, ಹಾಜರಿಪುಸ್ತಕದಲ್ಲಿ ಸಹಿ ಮಾಡಿ, ಮುಖದ ಮೇಲಿನ ಬೆವರೊರೆಸಿಕೊಳ್ಳುತ್ತ ವಾಪಸ್ಸು ನನ್ನ ಸೀಟಿಗೆ ಬರಬೇಕಾದರೆ ಕಚೇರಿಯ ಎಲ್ಲ ಗಂಡಸರ ಕಣ್ಣು ನನ್ನ ಮೇಲೆಯೇ. ನನ್ನ ಜೀವ ತಳಮಳಿಸುತ್ತಿತ್ತು. ಕಚೇರಿಯಲ್ಲಿ ಹಿರಿವಯಸ್ಸಿನ ಒಬ್ಬ ಮುಸಲ್ಮಾನ ಚಪರಾಸಿ ಇದ್ದ. ನಾನು ಬರುವ ಸಮಯಕ್ಕೆ ಸರಿಯಾಗಿ ಹೋಟೆಲಿನಿಂದ ಚಹ ತಂದಿಡುತ್ತಿದ್ದ. ಚಹ ಕುಡಿದಾಗ ದಣಿವು ದೂರಾದಂಗಾಗಿ ನಾನು ಅವನಿಗೆ 'ಶುಕ್ರಿಯಾ ಬಾಬಾ....' ಅಂತ್ಹೇಳಿ ಫೈಲುಗಳ ಕಟ್ಟು ಬಿಚ್ಚುತ್ತಿದ್ದೆ.

ಹೀಗೆ ನಾನು ಕಚೇರಿ ಕೆಲಸ, ಕಾಲೇಜಿನ ಓದುಗಳನ್ನು ಏಕಕಾಲಕ್ಕೆ ಕಲಿಯುತ್ತ ನಡೆದೆ. ಇಲ್ಲಿಂದಲೇ ಬದುಕಿ ನೊಂದಿಗಿನ ನನ್ನ ಹೋರಾಟ ಶುರುವಾಯಿತು.

ಬಾಲ್ಯದಂತೆ ಹರೆಯ ಸರಳ ಸುಂದರವಾಗಿ ನಿರಾತಂಕವಾಗಿ ಮುನ್ನಡೆಯುವುದಿಲ್ಲ. ಅವರಲ್ಲಿನ ಮುಗ್ಧತೆ, ಸರಳತೆ, ಆಪ್ಯಾಯತೆಗಳ ಚಂದದ ಲೇಪ ಹರೆಯಕ್ಕೆ ಇರುವುದಿಲ್ಲ ನಿಜ. ಆದರೆ ಹರೆಯಕ್ಕೆ ತನ್ನದೇ ಆದ ಲೋಹಚುಂಬಕ ಆಕರ್ಷಣೆಯಿದೆ. ಹೆಣ್ಣಿಗೆ ಗಂಡು, ಗಂಡಿಗೆ ಹೆಣ್ಣನ್ನು ಧಡಕ್ಕನೆ ಹಿಡಿದು ಒಂದೆಡೆ ನಿಲ್ಲಿಸುವ ಸಮ್ಮೋಹಕ ಚಾಂಚಲ್ಯತೆಯಿದೆ. ಮುಂದೆ ನಿಂತವರನ್ನು ಮೋಡಿ ಮಾಡಿ ತನ್ನ ಗುಲಾಮನನ್ನಾಗಿಸುವ ಮೋಹಕ ಗಾರುಡಿಯಿದೆ. ಹರೆಯದ ಮನೆ ಹೊಕ್ಕರೆ ಸಾಕು, ವ್ಯಕ್ತಿಯ ಸುತ್ತಮುತ್ತ ಕನಸುಗಳು ಚಿಗುರುತ್ತವೆ. ಅವುಗಳ ಮಗ್ಗುಲಲ್ಲಿ ಬೆಚ್ಚಗೆ ಮಲಗಿಕೊಂಡ ಹೂವುಗಳು ಬಾಯಿತೆರೆದು ಬಣ್ಣ ಉಗುಳುತ್ತವೆ. ಬಣ್ಣದ ಕನ್ನಡಕ ಹಾಕಿಕೊಂಡೇ ಹರೆಯ ತನ್ನ ಸುತ್ತಮುತ್ತಲಿನ ಸಮಾಜವನ್ನು ನೋಡುತ್ತದೆ. ಅಂತೆಯೇ ಅದಕ್ಕೆ ಜಗತ್ತೆಲ್ಲ ಸುಂದರ! ಆದರೆ ಆ ಸಮಾಜಕ್ಕೆ ಈ ಹರೆಯವವರೆಡೆಗೆ ಯಾವಾಗಲೂ ಸಂಶಯದ, ಗುಮಾನಿಯ ನೋಟ. ಹಂತ ಹಂತವಾಗಿ ಅದು ಹರೆಯದ ಗಂಡುಹೆಣ್ಣುಗಳ ಕಾಲುಗಳಿಗೆ ಬೇಡಿ ಹಾಕತೊಡಗುತ್ತದೆ. ನೀಲಾಕಾಶದಲ್ಲಿ ಲೀಲಾಜಾಲವಾಗಿ ಸಂತಸದಿಂದ ಸುಯ್ಯುತ್ತ ಹಾರುವ ಹಕ್ಕಿಗಳ ರೆಕ್ಕೆಗಳಿಗೆ ಕತ್ತರಿ ಹಾಕುವ ಹುನ್ನಾರ ಶುರುಮಾಡುತ್ತದೆ. ಅವರ ಚೆಲುವಿನ ಕನಸುಗಳ, ಬಣ್ಣದ ಚಿತ್ತಾರಕ್ಕೆ ಮಸಿ ಬಳಿಯುವ ತಾಲೀಮು ನಡೆಸುತ್ತದೆ. ಆಗ ಹುಟ್ಟುತ್ತವೆ ಸಮಸ್ಯೆಗಳು, ಸವಾಲುಗಳು, ಸಂಕಟಗಳು, ಹಟಗಳು. ಅಸಲಿಗೆ ಈ 'ಹರೆಯ'ವೇ ಬದುಕಿನ ಒಂದು ಸಮಸ್ಯೆಯಾಗಿ ಕಾಡುತ್ತದೆ! ಕಥೆಯಾಗದ, ಇತಿಹಾಸ ಸೃಷ್ಟಿಸದ ಹರೆಯ, ಅದೆಂಥ ಹರೆಯ?

ಆದರೂ ಸಮಾಜಕ್ಕೆ ಸೆಡ್ಡು ಹೊಡೆದು ನಿಂತು ತನ್ನ ಬದುಕನ್ನು ತಾನು ತನಗೆ ತೋಚಿದಂತೆ ರೂಪಿಸಿಕೊಳ್ಳುವ ಛಲ ಕೆಲ ಹೆಣ್ಣು ಗಂಡುಗಳಲ್ಲಿರುತ್ತದೆ; ಅಥವಾ ಬರುತ್ತದೆ. ಅಂಥವರು ಯಾವುದಕ್ಕೂ ರಾಜಿ ಮಾಡಿಕೊಳ್ಳುವುದೇ ಇಲ್ಲ. ಆಗ ಅವರು ಎತ್ತಿಡುವ ಹೆಜ್ಜೆಗಳು ಹೊಸಹಾದಿಯನ್ನೇ ಹುಟ್ಟಿಸುತ್ತವೆ. ನನ್ನ ಸ್ವಭಾವವೂ ಅಷ್ಟೇ. ಎಲ್ಲರಂತೆ ಸಾಮಾನ್ಯ ಹೆಣ್ಣುಮಗಳಾಗಿ, ಹತ್ತರಲ್ಲಿ ಹನ್ನೊಂದನೆಯವಳಾಗಿ ಬದುಕಿ, ಸಾಯುವುದು ನನಗೆ ಬೇಕಾಗಿಲ್ಲ. ಎಲ್ಲರಿಗಿಂತ ನಾನು ಭಿನ್ನವಾಗಿ ನಿಂತು ನನ್ನದೇ ಆದ ವಿಶಿಷ್ಟತೆಯನ್ನು ಹೊಂದಬೇಕೆಂಬ ಛಲ ನನ್ನದೆಯ ತಳದಲ್ಲಿ ಬತ್ತದ ಗಂಗೆಯಾಗಿ ಹರಿಯುತ್ತಿರುವಾಗಲೇ ನಾನು ನನಗೆ ಬಂದ ಎಲ್ಲ ಸಮಸ್ಯೆಗಳನ್ನು ಸವಾಲಾಗಿಯೇ ಸ್ವೀಕರಿಸಿ ಬದುಕಲು ನಿರ್ಧರಿಸಿದ್ದೆ. ಆಗ ಬಂದವು ನೋಡಿ ಸಂಕಟಗಳ ಸರಮಾಲೆ. ಈ ಸಮಾಜದ ರೂಢಿ ರಿವಾಜುಗಳ ವಿರುದ್ಧ, ನೀತಿ ಸಂಪ್ರದಾಯಗಳ ವಿರುದ್ಧ, ಕೆಟ್ಟ ವ್ಯವಸ್ಥೆಯ ವಿರುದ್ಧ ಬಂಡು ಸಾರುತ್ತ ಮುನ್ನಡೆದೆ. ನಮ್ಮ ಜಿಲ್ಲೆಯ ಚುಂಚೂರು ಮಾಪುರತಾಯಿಗೆ ಬೆತ್ತಲೆ ಸೇವೆ, ದೇವಿಯ ಹೆಸರಿನ ಮೇಲೆ ನಡೆಸುವ ಸೂಳೆಗಾರಿಕೆ, ಊರ ಗೌಡ, ಕುಲಕರ್ಣಿ, ಸಾಹುಕಾರರು ನಿರ್ಗತಿಕ ಹೆಂಗಸರ ಮೇಲೆ ನಡೆಸುವ ದೌರ್ಜನ್ಯ, ದಬ್ಬಾಳಿಕೆ, ಲೈಂಗಿಕ ಶೋಷಣೆ ಮೊದಲಾದ ಆಗ ಚಾಲ್ತಿಯಲ್ಲಿದ್ದ ಮೂಢನಂಬಿಕೆಗಳ ವಿರುದ್ಧ ಮುಲಾಜಿಲ್ಲದೆ ಬರೆಯತೊಡಗಿದೆ. ನನ್ನ ಜಿಲ್ಲೆಯ ಹಳ್ಳಿಯ ಜವಾರಿ ಭಾಷೆ ನನ್ನ ಬರಹಕ್ಕೆ ಬೆನ್ನೆಲುಬಾಯಿತು. ಹಳ್ಳಿಯ ಅಮಾಯಕ, ಅನಕ್ಷರಸ್ಥ ಹೆಂಗಸರ ಶೋಷಣೆ, ಸಂಕಟಗಳು ನನ್ನ ಬರಹಕ್ಕೆ ಬೇರುಗಳಾದವು. ಹೀಗೆ ನಾನು ವ್ಯವಸ್ಥೆಯ ವಿರುದ್ಧ ದಂಗೆಯ ಬರವಣಿಗೆಯೊಂದಿಗೆ ಮುನ್ನಡೆದಾಗಲೇ ನನ್ನ ಮೇಲೆ ಸಮಾಜದ ಕಂದಾಚಾರಿಗಳು, ಜಾತಿವಾದಿಗಳು ಮೊದಲಾದವರೆಲ್ಲ ತೆರೆಮರೆಯಲ್ಲಿ ನಿಂತೇ, ಮಾರಿಗೆ ಮುಸುಕು ಹಾಕಿಕೊಂಡೇ ಯುದ್ಧ ಸಾರತೊಡ ಗಿದ್ದು, ಮನೆಯವರೂ ನನ್ನ ವಿರುದ್ಧ ನಿಂತರು. ನನ್ನ ಅವ್ವನೇ ನನ್ನೊಂದಿಗೆ ಮಾತು ಬಿಟ್ಟು ಮುನಿಸಿಕೊಂಡಳು. ಅಪ್ಪ ನೊಂದುಕೊಂಡ, ತಂಗಿಯರು ಕೆಂಡಕಾರಿದರು. ಆಗ ನನಗೆ ಒಂದು ಮಾತು ಖಾತ್ರಿಯಾಯಿತು. ಬದುಕು ಒಡ್ಡುವ ಸಮಸ್ಯೆಗಳೊಂದಿಗೆ ತಕರಾರೆತ್ತದೆ, ರಾಜಿಮಾಡಿಕೊಳ್ಳುತ್ತ ಬದುಕಿದರೆ ಮಾತ್ರ ಈ ಸಮಾಜದ ಕಣ್ಣಲ್ಲಿ ಒಂದು ಹೆಣ್ಣು ನೆಮ್ಮದಿಯಿಂದಿರಲು ಸಾಧ್ಯ ಅಂತ! ಆದರೆ ಅಂಥ ನಕಲಿ ನೆಮ್ಮದಿ ನನಗೆ ಬೇಕಾಗಿರಲಿಲ್ಲ. ಅಸಲಿಗೆ ಬಂದದ್ದಕ್ಕೆಲ್ಲ ಹೊಂದಿಕೊಂಡು ಹೋಗುವ ಜಾಯಮಾನವೇ ನನ್ನದಲ್ಲ. ಹೀಗಾಗಿ ನನ್ನೊಂದಿಗೆ ಈ ಬದುಕು ಕ್ರೂರವಾಗಿ ನಡೆದುಕೊಂಡಿದ್ದೇ ಜಾಸ್ತಿ. ಆದರೆ ಉರ್ದು ಕವಿಯೊಬ್ಬರು ಹೇಳುವಂತೆ "ಮುಸೀಬತ್ ಇತನೀ ಆ ಪಡೀ ಕಿ ಆಕರ್ ಆಸಾನ್ ಹೋಗಯೇ" ಅನುವಂತಾಯಿತು. "ಹೆಣ್ಣಾಗಿ ಹುಟ್ಟುವುದಕ್ಕಿಂತ ಮಣ್ಣಾಗಿ ಹುಟ್ಟಬೇಕು.." ಅಂತ ನಾನು ಕಣ್ಣೀರು ಹಾಕಲಿಲ್ಲ. ಈ ಸಂಸಾರದಲ್ಲಿ "ಸಾಸಿವೆಯಷ್ಟು ಸುಖಕ್ಕೆ, ಸಾಗರದಷ್ಟು ದುಃಖ ನೋಡಾ.." ಅನ್ನುವ ಬಸವಣ್ಣನ ಉಕ್ತಿಯನ್ನು ಒಪ್ಪಿಕೊಂಡೇ ನಾನು ಜೀವನದ ಹೊಳೆಯಲ್ಲಿ ಈಜಿಗಿಳಿದೆ.

ಹೌದೂ.. ನಾನೇಕೆ ಬರೆಯಲು ಶುರುಮಾಡಿದೆ? ಅನ್ನುವ ಪ್ರಶ್ನೆ ಆಗಾಗ ನನ್ನನ್ನು ಕಾಡಿದ್ದಿದೆ. ಬಾಲ್ಯದಲ್ಲಿ ನಾನು ಅನುಭವಿಸಿದ ಉತ್ತಮರ ತಿರಸ್ಕಾರ ಅಪಮಾನಗಳ ಸೇಡು ಈಗ ಈ ನನ್ನ ಬರಹದ ಮೂಲಕ ತೀರಿಸಿಕೊಳ್ಳುತ್ತಿದ್ದೇನೆಯೋ? ಎಂಬ ಗುಮಾನಿಯೂ ಇದೆ. ಹೌದು. ಆ ಹಾರುವರ ಹೆಂಗಸರು ನನ್ನನ್ನು ಅಪಮಾನಿಸಿದ ಪ್ರಸಂಗಗಳೆಷ್ಟು?– ನನ್ನ ಎಳೆ ಮನಸನ್ನು ಘಾಸಿಗೊಳಿಸಿದ ಬಗೆಗಳೆಷ್ಟು?

(ಮುಂದುವರೆಯುವುದು)

ಸಹಜ ಬಂಡಾಯದ ಲೇಖಕಿ

ಗೀತಾ ನಾಗಭೂಷಣರವರು ಸಾಹಿತ್ಯ ಸಮ್ಮೇಳನದ ...ಕ್ಷೆಯಾಗಿ ಆಯ್ಕೆಯಾಗಿರುವ ಈ ಸಂದರ್ಭದಲ್ಲಿ ...ಮಿಸಲು ಸಾಹಿತ್ಯಿಕ ಕಾರಣಗಳೂ ಇವೆ. ಸಾಹಿತ್ಯೇತರ ...ಗಳು ಇವೆ.

...ಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿರುವ ...ಲೆಯ ಮಹಿಳೆ ಎನ್ನುವುದನ್ನು ಪ್ರತ್ಯೇಕವಾಗಿ ... ಒತ್ತುಕೊಟ್ಟು ಹೇಳಬೇಕಾದ ಸಂದರ್ಭ ...ರದಾಗಿತ್ತು ಎನ್ನುವುದು ಇನ್ನೂ ...ವಾಗಿಯೇ ಉಳಿದುಕೊಂಡಿದೆ. ಈ ಅಂಶವೇ ... ಆಯ್ಕೆಯ ಮಹತ್ವವನ್ನು ಸೂಚಿಸುತ್ತದೆ. ...ೀನ ದಿನಗಳಲ್ಲಿ ಸಮ್ಮೇಳನಗಳ ಬಗ್ಗೆಯೇ ... ಪ್ರಶ್ನೆಗಳು ಸಕಾರಣವಾಗಿ ಚರ್ಚೆಯಾಗುತ್ತಿವೆ. ...ಸ್ಥೆಯೇ ಸಮ್ಮೇಳನದ ಮೂಲ ...ವಾಗಿರುವುದು ಕಳೆದ ಬಾರಿ ವಿವೇಕ ...ವರನ್ನು ನೀವು ಯಾರು, ...ಕೆಲಸ ...ುತ್ತಿದ್ದೀರಿ ಎಂದೆಲ್ಲ ...ಅವಮಾನ ...ವಾದ ಮೇಲೆ ...ಂದಿಗಿದ್ದ ...ಾಜ ...ಯುವವರು, ... ಮುಕ್ತ ... ಕುಲಪತಿಗಳು ... ಉತ್ತರಿಸಿದ ..., ಮುಕ್ತ ವಿವಿ ...ದು ಎಲ್ಲಿದೆ ...ಲ್ಲಿ ಕೇಳಲಾಯಿತು. ... ಆಭಾಸಗಳಿಗೆ ಯಾರು ...' ಸಂವೇದನೆಗಳನ್ನೊಳಗೊಂಡ ...ೂರ್ಣವಾಗಿಸಬಹುದಾದ, ಜನಸಾಮಾನ್ಯರನ್ನು ...ಅಪಾರವಾಗಿ ಸೆಳೆಯುತ್ತಿರುವ ಈ ...ನಗಳ ಬದಲಾಗಬೇಕಿರುವ ಸ್ವರೂಪಗಳ ಬಗ್ಗೆ ...ಳು ನಡೆಯುತ್ತಲೇ ...

...ದರೆ ಈ ಯಾವ ... ...ಾಗಭೂಷಣರ ... ...ುಖ್ಯತೆಯನ್ನು, ಅದು ... ಭರವಸೆಯನ್ನು ... ಮಾಡುವುದಿಲ್ಲ.

...ತಾ ನಾಗಭೂಷಣರನ್ನು ...ು ಸಾಹಿತ್ಯ ಚಳವಳಿಯ ...ಲ್ಲಿಯೇ ಗುರುತಿಸಿ ಚರ್ಚಿಸುವುದು ಸಾಮಾನ್ಯ ...ಬಿಟ್ಟಿದೆ, ಮಾತ್ರವಲ್ಲ ಸ್ಥಾಪಿತವೂ ಆಗಿಬಿಟ್ಟಿದೆ. ...ದನ್ನು ಸಂಪೂರ್ಣವಾಗಿ ಒಪ್ಪುವುದಾದ ನನಗೆ ...ಸಮಸ್ಯೆಗಳಿವೆ.

...ನ ಬದುಕನ್ನು ಸ್ವವಿಮರ್ಶೆಗೆ ಅಥವಾ ಸ್ವಗತಕ್ಕೆ ...ಡ್ಡುವುದರಲ್ಲಿ ಗೀತಾ ನಾಗಭೂಷಣರಿಗೆ ಹೆಚ್ಚಿನ ...ಲ್ಲ. ಇದಕ್ಕೆ ಕಾರಣವಾಗಿರುವ ಪಿತೃಪ್ರಧಾನ ... ಹೆಣ್ಣಿನ ಬದುಕಿನ ಸ್ಥಿತಿಗತಿಗಳನ್ನು ಮುಖಕ್ಕೆ ...ತೆ ಹಿಡಿದು ಯಾಕೆ ಹೀಗೆ? ಇದಕ್ಕೆ ಏನು ...ವರಣೆ? ಎಂದು ಕೇಳುವ ವ್ಯಗ್ರತೆ ಅವರ ...ಯಲ್ಲಿ ಸದಾ ಕಾಣಿಸುತ್ತದೆ. ದಮನವೇ ಬದುಕಿನ ...ರುವ ಸ್ತ್ರೀಲೋಕಕ್ಕೆ ಬಂಡಾಯವೂ ಹೊರಗಿನ ...ಿಂದ ಬರಬೇಕಾದ್ದಲ್ಲ.... ಅದು ಅವಳ ಸಹಜ ... ಎನ್ನುವಂತೆ ಗೀತಾ ನಾಗಭೂಷಣ್ ಅವರ ... ಇದೆ.... ಗೀತಾ ನಾಗಭೂಷಣ್ ಅವರ ...ಯ ಹಿಂದಿನ ಅನನ್ಯತೆ ಮತ್ತು ಐತಿಹಾಸಿಕ ...ನ್ನು ಗುರುತಿಸುವ ಸಲುವಾಗಿ ಈ ಮಾತುಗಳನ್ನು ...ೇನೆ.

...ಾಯ ಸಾಹಿತ್ಯದ ಎಲ್ಲ ಪ್ರಮುಖ ಲಕ್ಷಣಗಳು ...ಾಭೂಷಣರ ಬರವಣಿಗೆಯಲ್ಲಿ ಕಾಣಿಸಿಕೊಳ್ಳುತ್ತವೆ ... ನಿಜ... ಆದರೆ ಇವರ ಬರವಣಿಗೆಯನ್ನು ...ದ ಘೋಷಿತ ಆಶಯಗಳ ಸೀಮಿತ ...ಳಗೆ ಮಾತ್ರ ಗುರುತಿಸುವುದರಿಂದ ಅವರ ...ಯನ್ನು ಒತ್ತಾಯಪೂರ್ವಕವಾಗಿ ಕುಬ್ಜಗೊಳಿಸಿ ...ಹುದು ಎನ್ನುವ ಆತಂಕ ನನಗಿದೆ.

... ನಾಗಭೂಷಣ್ ಅವರ ಬರವಣಿಗೆಯ ವಿವರ ... ಇದು ಸಂದರ್ಭವೂ ಅಲ್ಲ, ಅದರ ... ಇಲ್ಲ. ಅವರ ಬರವಣಿಗೆಯು ...ಗಿ ಯಾವುದರ ಕಡೆಗೆ ಮುಖ ಮಾಡುತ್ತದೆ ...ನ್ನು ಬಂಡಾಯ ಸಾಹಿತ್ಯ ಚಳವಳಿಯ ಆಚೆಗೂ ... ಸಾಧ್ಯವಾಗುತ್ತದೆ ಎನ್ನುವುದು ನನ್ನ ನಂಬಿಕೆ.

...ಣೆಯ ಅರಿವು ಹೆಣ್ಣಿಗೆ ಹೊರಗಿನಿಂದ ಪಡೆಯಬೇಕಾದ ಸಮೃದ್ಧಿಯಲ್ಲ ಅದು ಅವಳ ಮಟ್ಟಿಗೆ ಅನುಚಿತವಾಗಿಯೇ ದಕ್ಕುವಂತದ್ದು ಎನ್ನುವುದನ್ನು ಸ್ಥಾಪಿಸುವುದರಲ್ಲಿಯೇ ಇವರ ಬರವಣಿಗೆಯ ಹೆಚ್ಚುಗಾರಿಕೆ ಎನಿಸುತ್ತದೆ ನನಗೆ. ಆದರೆ ಅದನ್ನು ಅಭಿವ್ಯಕ್ತಿಸಲು ಅವಳಿಗೆ ಲಭ್ಯವಿರುವ ಅವಕಾಶಗಳು ಅಥವಾ ಹೆಣ್ಣು ಕಟ್ಟಿಕೊಳ್ಳಲು ಪ್ರಯತ್ನಿಸುವ ಸಾಧ್ಯತೆಗಳು ಎಷ್ಟರಮಟ್ಟಿಗಿರುತ್ತವೆ ಮತ್ತು ಅವುಗಳ ಸ್ವರೂಪಗಳೇನು ಎನ್ನುವ ಪ್ರಶ್ನೆಗಳು ಬೇರೆ. ಈ ಪ್ರಶ್ನೆಗಳನ್ನೂ ಖಂಡಿತವಾಗಿ ಗೀತಾ ನಾಗಭೂಷಣರು ಮುಖಾಮುಖಿಯಾಗುತ್ತಾರೆ. ಈ ಮುಖಾಮುಖಿಯಲ್ಲೇ ಬಂಡಾಯ ಸಾಹಿತ್ಯದೊಂದಿಗೆ ಅವರ ಸಂಬಂಧವಿದೆ.



ಆದರೆ ಗೀತಾ ಅವರ ಬರವಣಿಗೆಯ ಮೂಲ ನೆಲೆಯು ಪ್ರಜ್ಞಾಪೂರ್ವಕವಾದ ಸಾಮಾಜಿಕ ನ್ಯಾಯ ಅಥವಾ ಲಿಂಗ ರಾಜಕಾರಣದ ದೃಷ್ಟಿಕೋನಗಳಿಂದ ಪ್ರೇರಿತವಾದ ಬರವಣಿಗೆ ಮಾತ್ರ ಅಲ್ಲ ಎನ್ನುವುದು ನನ್ನ ವಾದ...

ದಲಿತರ ನೋವಿನ ಇತಿಹಾಸಕ್ಕೂ ಹೆಣ್ಣಿನ ನೋವಿನ ಇತಿಹಾಸಕ್ಕೂ ನೂರು ಸಾಮ್ಯತೆಗಳಿರುವಂತೆಯೇ ನಿರ್ಣಾಯಕವಾದ ಕೆಲವು ಸೂಕ್ಷ್ಮ ವ್ಯತ್ಯಾಸಗಳೂ ಇವೆ. ಈ ವ್ಯತ್ಯಾಸಗಳ ಕಾರಣಕ್ಕಾಗಿ ಹೆಣ್ಣಿನ ಸಂಕಥನವು ದಲಿತರಿಗಿಂತ ಹೆಚ್ಚು ಆಳವಾದದ್ದು ಮತ್ತು ತೀವ್ರವಾದದ್ದು. ಈ ಆಳ ಮತ್ತು ತೀವ್ರತೆಗಳ ಕಡೆ ಗೀತಾ ಅವರ ಬರವಣಿಗೆ ಮುಖ ಮಾಡುತ್ತದೆ.

ಅವರ 'ರಣಹದ್ದು ಮತ್ತು ಹಸಿಮಾಂಸ'ದಿಂದ 'ಬದುಕು' ತನಕದ ಬರವಣಿಗೆಯಲ್ಲಿ ಇದಕ್ಕೆ ಸಾಕಷ್ಟು ಆಧಾರಗಳಿವೆ. ಕಾಲಾತೀತವಾಗಿ ಎನ್ನುವಂತೆ ಹೆಣ್ಣು ಅನುಭವಿಸುತ್ತಲೇ ಬಂದಿರುವ ನೋವು, ಅವಮಾನಗಳನ್ನು ಅದರ ಪ್ರಮಾಣ ಎಷ್ಟೇ ಕಡಿಮೆಯಾದರೂ, ಅಮೂರ್ತ ನೆಲೆಯದ್ದಾದರೂ ಹೆಣ್ಣು ಅಭಿವ್ಯಕ್ತಿಸುತ್ತಲೇ ಬಂದಿದ್ದಾಳೆ. ನಾನು ಅದರ ಮುಂದುವರಿಕೆ ಎನ್ನುವ ನಿಲುವು ಇವರ ಬರವಣಿಗೆಯಲ್ಲಿ ನಿಶ್ಚಯವಾಗಿದೆ. ಇದು ಕೊನೆಯಾಗಬೇಕು ಎನ್ನುವ ಆಶಯ, ಇನ್ನೂ ಕೊನೆಗಾಣಲಿಲ್ಲವಲ್ಲ ಎನ್ನುವ ವ್ಯಗ್ರತೆ, ಕೊನೆಕಾಣುವುದು ಸಾಧ್ಯವೇ ಇಲ್ಲ ಎನ್ನುವ ವಿಷಾದವೂ ಅಷ್ಟೇ ದಟ್ಟವಾಗಿದೆ. ಎಂದರೆ ಇದು ಮುಂದುವರಿಯುವ ಸೂಚನೆಗಳು ಈ ಸಮುದಾಯದಲ್ಲಿ ಅಷ್ಟೇ ಢಾಳಾಗಿ ಇರುವುದನ್ನು ಅಪಾರ ನೋವಿನಲ್ಲಿ ಗೀತಾ ನಾಗಭೂಷಣ ಗುರುತಿಸಿದ್ದಾರೆ. ಘೋಷಿತ ಆಶಯಗಳ ನೆಲೆಯಿಂದ ಗೀತಾ ಅವರ ಬರವಣಿಗೆ ವಿಸ್ತಾರಕ್ಕೆ ದಾಟಿಕೊಳ್ಳುವುದು ಹೀಗೆ...

ಈ ಎಲ್ಲ ಮಾತುಗಳನ್ನು ಹೇಳುತ್ತಿರುವಾಗ ಸಂಘಟನೆ ಮತ್ತು ಹೋರಾಟದ ಬಗ್ಗೆ ಗೀತಾ ನಾಗಭೂಷಣರಿಗೆ ನಂಬಿಕೆ ಇಲ್ಲವೆಂದಲ್ಲ, ಅದರ ಅನಿವಾರ್ಯತೆಯ ಬಗೆಗೂ ಇವರ ಗಾಢ ವಿಶ್ವಾಸವಿದೆ. ಸಂಘಟಿತ ಹೋರಾಟವು ಹೆಣ್ಣಿನ ಸ್ಥಿತಿಗತಿಗಳಲ್ಲಿ ತರಬಹುದಾದ, ತರಲೇಬೇಕಾದ ಬದಲಾವಣೆಯ ಬಗ್ಗೆ ಇವರು ಮತ್ತೆ ಮತ್ತೆ ಚರ್ಚಿಸುತ್ತಾರೆ. ಅಭಿವ್ಯಕ್ತಿಯ ಮತ್ತು ಹೋರಾಟದ ಎಲ್ಲ ಬಾಗಿಲುಗಳೂ ವ್ಯವಸ್ಥೆಯ ಕಡೆಯಿಂದಲೂ ತೆರೆಯಬೇಕೆಂಬ ತೀವ್ರ ಅಪೇಕ್ಷೆ ಇವರ ಬರವಣಿಗೆ ಮತ್ತು ಮಾತು ಎರಡರಲ್ಲೂ ಕಾಣಿಸಿಕೊಳ್ಳುತ್ತದೆ.

ಹೆಣ್ಣಿನ ಹೋರಾಟದ ಪರಂಪರೆಯ ಜೊತೆಗೆ ಸಂಬಂಧ ಕಟ್ಟಿಕೊಳ್ಳುತ್ತಲೇ ಅವಳು ಸಾಗಬೇಕಾದ ಮುಂದಿನ ದಾರಿಯ ಕಡೆಗೂ ಗೀತಾ ನಾಗಭೂಷಣ ಕಣ್ಣು ಹಾಯಿಸುತ್ತಾರೆ. ಈ ಪ್ರಕ್ರಿಯೆಯು ಹೆಣ್ಣು ಮಾತ್ರ ಸಾಗಬೇಕಾದ ದಾರಿಯಲ್ಲ ಸಮುದಾಯವೇ ಸಾಗಬೇಕಾಗಿರುವ ದಾರಿ ಎನ್ನುವುದನ್ನು ಖಚಿತವಾಗಿ ಹೇಳುವ ಕಾರಣಕ್ಕಾಗಿ ಗೀತಾ ನಾಗಭೂಷಣ ಮುಖ್ಯವಾಗುತ್ತಾರೆ.

ದಿಟ್ಟ ವ್ಯಕ್ತಿತ್ವ ಮತ್ತು ದಟ್ಟ ಬರವಣಿಗೆಯ ಗೀತಾ ನಾಗಭೂಷಣರಿಗೆ ಅಭಿನಂದನೆಗಳು....


● ಡಾ.ಎಂ.ಎಸ್.ಆಶಾದೇವಿ

ಸೂತಕದ ಅಂಗಳದಲ್ಲಿ ಸಾಹಿತ್ಯ ಸಮ್ಮೇಳನ

ಹೆಣಗಳ ರಾಶಿಯ ಮಧ್ಯ ಉಣ್ಣಲು ಕುಂತ ದೃಶ್ಯ ಹೇಗಿರುತ್ತದೆಯೋ ಗದಗದಲ್ಲಿ ನಡೆಯುವ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕೂಡ ಥೇಟ್ ಹಂಗೆ ಇರುತ್ತದೆ. ಇದು ಕೇವಲ ಉತ್ಪ್ರೇಕ್ಷೆಯ ಮಾತಲ್ಲ, ಸಮ್ಮೇಳನದ ತಯಾರಿಯ ಅವಸರಗಳನ್ನು ನೋಡಿ ಇಂಥ ತೀರ್ಮಾನಕ್ಕೆ ಬರುವುದು ಸಮಂಜಸವೆನಿಸುತ್ತದೆ. ಮೊದಲೇ ಗದಗ ಜಿಲ್ಲೆ ನೆರೆಯ ಹೊಡೆತಕ್ಕೆ ಸಿಕ್ಕು ಸ್ಮಶಾನಮೌನ ಹೊತ್ತಿದೆ. ನೆರೆ ಸಂತ್ರಸ್ತರು ಬದುಕು ಕಟ್ಟಿಕೊಳ್ಳಲಿಕ್ಕೆ ಇನ್ನೂ ಪರಿತಪಿಸುತ್ತಿದ್ದಾರೆ. ಸರ್ಕಾರಿ ಸಹಾಯ ಹಸ್ತಗಳೆಲ್ಲ ಫೈಲುಗಳಿಗಷ್ಟೇ ಸೀಮಿತವಾಗಿವೆ. ಇನ್ನು ಮೂಲಭೂತ ಸವಲತ್ತುಗಳು ದುರ್ಬೀನು ಹಾಕಿ ಹುಡುಕಿದರೂ ಜಿಲ್ಲೆಯಲ್ಲಿ ಕಾಣಸಿಗುವುದಿಲ್ಲ. ಇಂಥದ್ದರಲ್ಲಿ ಮಂತ್ರಿ ಶ್ರೀರಾಮುಲು ಸಾಹಿತ್ಯ ಸಮ್ಮೇಳನ ನಡೆಸುವ ತರಾತುರಿಯಲ್ಲಿದ್ದಾರೆ.

ಈ ಹಿಂದೆ 1961 ರಲ್ಲಿ 43ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಗದಗದಲ್ಲಿ ನಡೆದಿತ್ತು, ಆಗ ಸಮ್ಮೇಳನದ ರೂವಾರಿಗಳಾಗಿದ್ದವರು ದಿ.ಕೆ.ಎಚ್. ಪಾಟೀಲರು. ಅಲ್ಲಿಂದ ಬರೋಬ್ಬರಿ 48 ವರ್ಷಗಳ ಸುದೀರ್ಘ ಅವಧಿ ಮುಗಿದ ಮೇಲೆ ಮತ್ತೆ ಗದಗ ಜಿಲ್ಲೆಯಲ್ಲಿ ಸಾಹಿತ್ಯ ಸಮ್ಮೇಳನದ ಕಲರವ ಸೃಷ್ಟಿಯಾಗಿದೆ.

ಗದಗ ಜಿಲ್ಲೆ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರವಾಗಿದೆ. "ಉದಯವಾಗಲಿ ಚೆಲುವ ಕನ್ನಡ ನಾಡು" ಕವಿತೆ ಬರೆದ ಹುಯಿಲಗೋಳ ನಾರಾಯಣ ರಾವ, 'ಪ್ರಭುಲಿಂಗ ಲೀಲೆ' ರಚಿಸಿದ ಕವಿ ಚಾಮರಸ, 'ಗದುಗಿನ ಭಾರತ' ಬರೆದ ಕುಮಾರವ್ಯಾಸ, ಸಾಮರಸ್ಯದ ಕೊಂಡಿಗಳಾಗಿದ್ದು ಅಜಗಣ್ಣ ಮುಕ್ತಾಯಕ್ಕರಂತಹ ಸಾಹಿತ್ಯ ಸಾಧಕರೆಲ್ಲ ನೆಲೆ ಕಂಡು ಕೊಂಡಿದ್ದ ಗದಗದಲ್ಲಿಯೇ. ಹೀಗಾಗಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಗದಗದಲ್ಲಿ ನಡೆಯಬೇಕಾದರೆ ಅದರ ಸ್ವರೂಪದಲ್ಲೂ ವಿಶೇಷ ಗುಣಗಳು ಪ್ರತಿಬಿಂಬಿಸಬೇಕಾಗುತ್ತದೆ. ಆದರೆ ಅದೆಲ್ಲ ಅಸಾಧ್ಯ ಎನಿಸುತ್ತಿದೆ.



ಈ ಮೊದಲು ಈ ಸಮ್ಮೇಳನವನ್ನು 2009ರ ಡಿಸೆಂಬರ್‌ನಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಗಿತ್ತು, ಆದರೆ ಅದಕ್ಕೂ ಮೊದಲೇ ನೆರೆ ಬಂದು ಜಿಲ್ಲೆಯ ನೆಮ್ಮದಿಯನ್ನೇ ಹಾಳು ಮಾಡಿತು. ಸಹಜವಾಗಿ ಸಮ್ಮೇಳನವನ್ನು ಮುಂದೂಡಲಾಯಿತು. ಆದರೆ ಈಗ ದಿಢೀರನೆ 2010ರ ಫೆಬ್ರುವರಿ 19, 20, 21 ರಂದು ಸಮ್ಮೇಳನ ನಡೆಸುವ ತೀರ್ಮಾನ ಕೈಗೊಳ್ಳಲಾಗಿದೆ. ಈ ತೀರ್ಮಾನದ ಹಿಂದೆ ಸಾಹಿತ್ಯ ಪರಿಷತ್ತು ಕೇವಲ ಅಸ್ತ್ರವಾಗಿ ಬಳಕೆಯಾಗಿದೆ ಎಂಬ ಪುಕಾರು ಹಬ್ಬಿದೆ. ಅದು ವಾಸ್ತವವೆಂಬಂತೆ ಹತ್ತಾರು ವಿದ್ಯಮಾನಗಳು ತಾಳೆಯಾಗುತ್ತಿವೆ.

ಮೊದಲನೆಯದಾಗಿ ಜಿಲ್ಲಾ ಉಸ್ತುವಾರಿ ಮಂತ್ರಿ ಶ್ರೀರಾಮುಲುಗೆ ಗದುಗಿನ ಜನ ಮೊದಲಿನಷ್ಟು ಮರ್ಯಾದೆ ಕೊಡುತ್ತಿಲ್ಲ. ಬರಿ ಗಾಳಿಯಲ್ಲಿ ಗೋಪುರ ಕಟ್ಟುವ ಶ್ರೀರಾಮುಲುವಿನ ಕಲೆ ಈಗಾಗಲೇ ಜಿಲ್ಲೆಯ ಜನರಿಗೆ ಮನದಟ್ಟಾಗಿದೆ. ಹೀಗಾಗಿ ತನ್ನ ಮೊದಲ ಇಮೇಜನ್ನು ಶ್ರೀರಾಮುಲು ಮತ್ತೆ ಪಡೆಯಬೇಕಿದ್ದರೆ ಕೂಡಲೆ ಆತ ದೊಡ್ಡಮಟ್ಟದ ಕೆಲಸ ಮಾಡಬೇಕಾದ ಅನಿವಾರ್ಯತೆಯಲ್ಲಿದ್ದಾನೆ. ಇವನ ಅದೃಷ್ಟಕ್ಕೆ ಸಾಹಿತ್ಯ ಸಮ್ಮೇಳನ ಒಂದು ನೆಪವಾಗಿ ಬಂದು ನಿಂತುಕೊಂಡಿದೆ. ಅಲ್ಲಿಗೆ ಈ ಸಮ್ಮೇಳನವು ಶ್ರೀರಾಮುಲುವಿನ ಇಮೇಜು ವೃದ್ಧಿಸಿಕೊಳ್ಳುವ ಖಾಸಗಿ ಕಾರ್ಯಕ್ರಮವಾಗಿ ಬಳಕೆಯಾಗುತ್ತಿದೆ ಎಂಬುದು ಸ್ಪಷ್ಟ.

ಹಾಗೆ ನೋಡಿದರೆ ಗದಗ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತು ರಾಜಕಾರಣದ ಚದುರಂಗ ಗಾಳಕ್ಕೆ ಸಿಕ್ಕಿ ಹಾಕಿಕೊಳ್ಳಬಾರದಿತ್ತು. ಆದರೆ ಸಮ್ಮೇಳನವನ್ನು ಮತ್ತೆ ಮುಂದೂಡಬಾರದೆಂಬ ಧಾವಂತದಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ತು ಎಲ್ಲವನ್ನೂ ಸಹಿಸಿಕೊಳ್ಳುತ್ತಿದೆ. ಬರೀ ಒಂದು ತಿಂಗಳಲ್ಲಿ ಸಮ್ಮೇಳನಕ್ಕೆ ತಯಾರಿ ಮಾಡಿಕೊಳ್ಳುವುದು ಎಂತಹ ದಕ್ಷ ಅಧಿಕಾರಿಯಿಂದಲೂ ಸಾಧ್ಯವಿಲ್ಲ. ಇಂತಹ ವಾಸ್ತವಗಳನ್ನು ಮರೆತು ಫೆಬ್ರವರಿಯಲ್ಲಿ ಸಮ್ಮೇಳನ ನಿಗದಿ ಮಾಡಿದ್ದು ಮೂರ್ಖತನದ ಪರಮಾವಧಿಯೇ ಸರಿ. ಕೆಲವು ಅಂಕಿಅಂಶಗಳು ಇದನ್ನು ದೃಢೀಕರಿಸುತ್ತವೆ.

ಗದಗದಲ್ಲಿ ನಡೆಯುವ ಸಮ್ಮೇಳನದ ಒಟ್ಟು ಖರ್ಚಿನ ಅಂದಾಜು ಎಂಟು ಕೋಟಿಯಷ್ಟಿದೆ. ಈ ಹಣವನ್ನು ಸರ್ಕಾರಿ ಇಲಾಖೆಗಳನ್ನು ಅವಲಂಬಿಸಿಯೇ ಸಂಗ್ರಹಿಸಬೇಕಾಗಿದೆ. ಅದರಲ್ಲಿ ರಾಜ್ಯದ ಎಲ್ಲಾ ನಿಗಮ ಮಂಡಳಿಗಳಿಂದ ತಲಾ 10 ಲಕ್ಷ, ಗಾಳಿ ವಿದ್ಯುತ್ ಕಂಪನಿಗಳಿಂದ ತಲಾ 10 ಲಕ್ಷ, ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ ಕಂಪನಿಯಿಂದ 25 ಲಕ್ಷ, ದಿವಾಳಿಯಾಗಿ ಬಿಕ್ಕುತ್ತಿರುವ ವಿಜಯ ನಗರ ಶುಗರ್ಸ್‌ನಿಂದ (ಮುಂಡರಗಿ) 25 ಲಕ್ಷ, ಜಿಲ್ಲಾ ಸರಕಾರಿ ನೌಕರರಿಂದ ಒಂದು ದಿನದ ವೇತನ, ರಾಷ್ಟ್ರೀಕೃತ ಬ್ಯಾಂಕುಗಳ ಸಿಬ್ಬಂದಿ, ಅಧಿಕಾರಿಗಳ 1 ದಿನದ ವೇತನ, ಜಿಲ್ಲೆಯ ಸೀಮೆಎಣ್ಣೆ, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ್ ವರ್ತಕರಿಂದ ತಲಾ 1 ಲಕ್ಷ, ಜಿಲ್ಲಾ ಪಂಚಾಯತಿಯಿಂದ 25 ಲಕ್ಷ, ತಾಲೂಕ ಪಂಚಾಯತಿಯಿಂದ 1 ಲಕ್ಷ, ಗ್ರಾಮ ಪಂಚಾಯತಿಯಿಂದ 25 ಸಾವಿರ, ನಗರಸಭೆಯಿಂದ 10 ಲಕ್ಷ, ಪುರಸಭೆಗಳಿಂದ 5 ಲಕ್ಷ, ಪಟ್ಟಣ ಪಂಚಾಯತಿಗಳಿಂದ 2.5 ಲಕ್ಷ ಹೀಗೆ ಲಕ್ಷ ಲಕ್ಷ ಲೆಕ್ಕದ ಹಣವನ್ನು ಸಂಗ್ರಹಿಸಿ ಸಮ್ಮೇಳನಕ್ಕೆ ಸುರಿಯುವ ಅಂದಾಜು ಮಾಡಲಾಗಿದೆ. ಇಷ್ಟೆಲ್ಲದರ ಮಧ್ಯೆ ಸಮ್ಮೇಳನಕ್ಕೆ ಒಂದೇ ತಿಂಗಳು ಬಾಕಿ ಇದ್ದರೂ ಇವತ್ತಿನ ಮಟ್ಟಿಗೆ ರೂ. 71,19,900 ಮಾತ್ರ ಸಮ್ಮೇಳನದ ಖಾತೆಗೆ ಜಮಾ ಆಗಿದೆ.


ಒಂದೆಡೆ ನೆರೆ ಪರಿಹಾರದಲ್ಲಿ ದೊಡ್ಡಮಟ್ಟದ ಅನ್ಯಾಯ ನಡೆದಿದೆ. ಲೋಕಾಯುಕ್ತರು ಗದಗ ಜಿಲ್ಲೆಯ ನೆರೆ ಪರಿಹಾರದ ಹಣದಲ್ಲಿ ನಡೆದಿರುವ ಅವ್ಯವಹಾರದ ತನಿಖೆಯಲ್ಲಿ ನಿರತರಾಗಿದ್ದಾರೆ. ಜನಸಮುದಾಯಗಳು ಪುನರ್ವಸತಿ ಕಾಣದೆ ಬಸ್ ನಿಲ್ದಾಣ, ಶೆಡ್ಡುಗಳಲ್ಲಿ ಕಾಲ ಕಳೆಯುತ್ತಿದ್ದಾರೆ. ರೈತರ ಹೊಲಗಳು ಬರಿದಾಗಿವೆ. ಇಂಥ ಸೂತಕದ ಅಂಗಳದಲ್ಲಿ ಸಾಹಿತ್ಯ ಸಮ್ಮೇಳನ ನಡೆಸುವುದಕ್ಕೆ ಎಂಥವರ ಮನಸ್ಸು ಹಿಂದೇಟು ಹಾಕುತ್ತದೆ. ಆದರೆ ಸ್ವಾರ್ಥ, ಹಿರೋಯಿಸಂ, ಗಿಮಿಕ್‌ಗಳಲ್ಲಿ ಮೈಮರೆಯುವ ಶ್ರೀ ರಾಮುಲುನಂಥವರಿಗೆ ಇದೆಲ್ಲ ಎಲ್ಲಿ ಅರ್ಥವಾಗುತ್ತದೆ?

● ಹುರುಳಿಕುಪ್ಪಿ ವಿನಯ್


ಅನಾರೋಗ್ಯ ಮಂತ್ರಿಯ ಹಿಂದೆ ನಿರುದ್ಯೋಗಿ ಶಾಸಕರು

ಗದಗ ಜಿಲ್ಲೆಯ 4 ಶಾಸಕರು ಶ್ರೀರಾಮುಲು ಹಿಂದೆ ನಿಂತು "ಜೈ" ಎನ್ನುವ ಸಂಸ್ಕೃತಿಗೆ ಶರಣಾಗಿದ್ದಾರೆ. ಅಷ್ಟೇ ಅಲ್ಲ, ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ಒಂದಿಷ್ಟು ಮೆರೆದು, ಒಂದಿಷ್ಟು ಹಣ ಲಪಟಾಯಿಸಲು ಸಜ್ಜಾಗಿದ್ದಾರೆ.


ರೋಣದ ಕಳಕಪ್ಪ ಬಂಡಿ ಸಮ್ಮೇಳನದ ಹೆಸರಲ್ಲಿ ಒಂದಿಷ್ಟು ಕಮಾಯಿ ಮಾಡಿಕೊಳ್ಳಬಹುದೆಂದು ಲೆಕ್ಕಹಾಕಿರುವಂತಿದೆ. ಶ್ರೀಶೈಲಪ್ಪ ಬಿದರೂರ ಗರಿ ಗರಿ ಅಂಗಿ ತೊಟ್ಟು ಗುಪ್ಪದಂತಹ ಮಾತು ಹೇಳಲು ರೆಡಿಯಾಗಿದ್ದಾನೆ. ಸಿ.ಸಿ. ಪಾಟೀಲ ತನ್ನ ಮನೆ ಅಂಗಳದಲ್ಲಿನ ನೆರೆ ಸಂತ್ರಸ್ತರ ಗೋಳಾಟ ಕೇಳಿಸಿಕೊಳ್ಳದೆ ಕಿವಿಯಲ್ಲಿ ಹತ್ತಿ ಉಂಡೆ ಇಟ್ಟುಕೊಂಡು ಸಮ್ಮೇಳನಕ್ಕಾಗಿ ಕಾಯುತ್ತಿದ್ದಾನೆ. ರಾಮಣ್ಣ ಲಮಾಣಿ ಕಥೆಯೂ ಇವರೆಲ್ಲರಿಗಿಂತ ಭಿನ್ನವಾಗಿಲ್ಲ. ಒಟ್ಟಾಗಿ ಹೇಳಬೇಕೆಂದರೆ "ನೆರೆ" ಸಂದರ್ಭದಲ್ಲಿ ಕೆಡಿಸಿಕೊಂಡ ಹೆಸರನ್ನು ಸಾಹಿತ್ಯ ಸಮ್ಮೇಳನದಲ್ಲಿ ಪಡೆಯಲಿಕ್ಕಾಗಿ ಈ ಎಲ್ಲಾ ಬಿಡ್ಡಿ ಶಾಸಕರುಗಳು ಎಲ್ಲದಕ್ಕೂ ತಯಾರಾಗಿದ್ದಾರೆ. ಅಲ್ಲಿಗೆ ಸಾಹಿತ್ಯ ಸಮ್ಮೇಳನ ಅಧ್ವಾನವೇಳುವುದು ಯಾರಿಂದಲೂ ತಪ್ಪಿಸಲಿಕ್ಕಾಗುವುದಿಲ್ಲ.








ರೈತರಿಗೆ ಹಿಟ್ಲರ್ ಬಿಜೆಪಿಗೆ ಜೋಕರ್





ಕರ್ನಾಟಕದ ಇತಿಹಾಸದಲ್ಲೇ ಕಂಡರಿಯದ ಕಳಪೆ ಹಾಗೂ ವೇಸ್ಟ್ ಮುಖ್ಯಮಂತ್ರಿ ಯಾರೆಂದು ಇನ್ನು ಮುಂದೆ ಯೋಚಿಸಿ ಹೇಳಬೇಕಾದ ಅಗತ್ಯವಿಲ್ಲ.

ಶ್ರೀಮಾನ್ ಯಡಿಯೂರಪ್ಪ ಸಾಹೇಬರು ಬೇರೆಲ್ಲಾ ಪ್ರತಿಸ್ಪರ್ಧಿಗಳನ್ನು ಹಿಂದೆ ಹಾಕಿ ನಿರಾಯಾಸವಾಗಿ ಮೊದಲ ಸ್ಥಾನ ಗೆದ್ದಿದ್ದಾರೆ. ಅಷ್ಟೇ ಅಲ್ಲ, ಈ ಮೊದಲ ಸ್ಥಾನದಿಂದ ಸದ್ಯದ ಭವಿಷ್ಯದಲ್ಲಿ ಅವರು ಕೆಳಗಿಳಿದು ಬರುವಂತೆಯೂ ಕಾಣುತ್ತಿಲ್ಲ. ಬ್ರೇಕು, ಗೇರು, ಕ್ಲಚ್ಚು ಕೊನೆಗೆ ಸ್ಟೀರಿಂಗ್ ವೀಲ್ ಕೂಡ ಇರದ ಪಂಕ್ಚರ್ ಆಗಿರುವ ಬಸ್ಸನ್ನು ಓಡಿಸುತ್ತಿರುವಂತೆ ಕಾಣುತ್ತಿರುವ ಯಡಿಯೂರಪ್ಪನವರ ಎರಡು ಮುಖ ಈಗ ಚೆನ್ನಾಗಿ ಕಾಣುತ್ತಿದೆ.

ಒಂದು, ರಾಜ್ಯದ ನೆರೆಸಂತ್ರಸ್ತರ ಹಾಗೂ ರೈತರ ಪಾಲಿಗೇ ಈತ ಹಿಟ್ಲರ್! ಅದೇ ವೇಳೆಗೆ ಬಿಜೆಪಿಯೊಳಗೇ ಈತ ಈಗ ಒಬ್ಬ ಜೋಕರ್.

ಕಳೆದ ಎರಡು-ಮೂರು ತಿಂಗಳ ವಿದ್ಯಮಾನಗಳನ್ನು ಗಮನಿಸಿ ನೋಡಿದರೆ ಯಡ್ಡಿಯ ಈ ಹಿಟ್ಲರ್ ಹಾಗೂ ಜೋಕರ್ ವರ್ತನೆಗಳಿಗೆ ಪ್ರತಿ ದಿನವೂ ಸಾಕ್ಷ್ಯ ಪುರಾವೆಗಳು ಸಿಗುತ್ತವೆ.

2008 ರ ಜೂನ್ 10 ರಂದು ಹಾವೇರಿ ರೈತರ ಮೇಲೆ ಗೋಲಿಬಾರ್ ಮಾಡಿಸಿ ಇಬ್ಬರ ನರಬಲಿ ಪಡೆದೇ ಅಧಿಕಾರಪರ್ವ ಶುರು ಮಾಡಿದ ಯಡ್ಡಿ ಸರ್ಕಾರ ಈಗಲೂ ರೈತರ ವಿರುದ್ಧ ಝಳಪಿಸುತ್ತಿರುವ ಲಾಠಿ-ಬಂದೂಕುಗಳನ್ನು ಕೆಳಗಿಟ್ಟಿಲ್ಲ. ಪ್ರವಾಹ ಪರಿಹಾರಕ್ಕಾಗಿಯೋ ಅಥವಾ ಬೀಜ-ಗೊಬ್ಬರ ಹಾಗೂ ಬೆಂಬಲ ಬೆಲೆಗೆಂದೋ ರೈತ ಸಮುದಾಯ ಗುಂಪು ಸೇರಿ 'ಬಂಡಾಯ' ವೆದ್ದರೆ ತಕ್ಷಣ ಲಾಠಿಚಾರ್ಜ್, ಗೋಲಿಬಾರ್, ಜೈಲು, ಕೈಗೆ ಬೇಡಿ ಹಾಕುವುದೆಲ್ಲಾ ಈಗ ನಡೆಯುತ್ತಿವೆ. ಇದು ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ್ದ ಸಿಎಂ ಯಡ್ಡಿಯ ನೈಜ ಮುಖ. ಅದೇ ವೇಳೆಯಲ್ಲಿ ದುಡ್ಡು ಹಾಗೂ ಕುರ್ಚಿಗಾಗಿ ಬಜೆಪಿ ಶಾಸಕರು ಗುಂಪು ಕಟ್ಟಿ 'ಬಂಡಾಯ' ಎಂದು ಬೆದರಿಸಿದರೆ ತಕ್ಷಣ ಅವರನ್ನೆಲ್ಲಾ ರೆಸಾರ್ಟ್‌ಗೆ ಕರೆದೊಯ್ದು ರಾಜಾತಿಥ್ಯ ಕೊಡಿಸಿ 'ಅಚ್ಚಾಅಚ್ಚಾ' ಮಾಡಿಸಿ ಕಳಿಸುವ ಸರ್ಕಸ್ ಮಾಡುತ್ತಿದ್ದಾರೆ ಯಡ್ಡಿ.

ಕಷ್ಟದಲ್ಲಿರುವ ರೈತರಿಗೆ ಬೇಡಿ ಹಾಕಿಸಿ ಜೈಲಿಗೆ ತುಂಬುವುದು ಹಾಗೂ ಜನರೊಂದಿಗಿರಬೇಕಾದ ಶಾಸಕರನ್ನು ರೆಸಾರ್ಟ್‌ಗೆ ಕರೆದೊಯ್ದು ಕೂರಿಸಿಕೊಳುವುದು ಒಂದು ಜೋಭದ್ರಗೇಡಿ ಸರ್ಕಾರದ ಲಕ್ಷಣವಲ್ಲವೆ?

ರೈತರ ಪಾಲಿನ ಹಿಟ್ಲರ್

ಯಡ್ಡಿ ಸರ್ಕಾರದ ರೈತ ವಿರೋಧಿ ನಿಲುವು ಸಿರಿವಾರ ಹಾಗೂ ಸುತ್ತಲಿನ ಕರ್ನಾಟಕದ ಜನರಿಗೆ ಹೊಸದೇನಲ್ಲ. ಬಳ್ಳಾರಿ ರೆಡ್ಡಿಗಳ ಅನುಕೂಲಕ್ಕಾಗಿ ಗ್ರಾಮಗಳ ಸಾವಿರಾರು ಎಕರೆ ಫಲವತ್ತಾದ ಭೂಮಿಯನ್ನು ಬಡರೈತರಿಂದ ಕಿತ್ತುಕೊಳ್ಳಲು ಯಡ್ಡಿ ಹೊರಟಿದ್ದಾರೆ. ಇದನ್ನು ಧಿಕ್ಕರಿಸಿ ಅಲ್ಲೀಗ ರೈತ ಹೋರಾಟ ನಡೆಯುತ್ತಿದೆ. ಕಳೆದ ತಿಂಗಳು ಚಾಮರಾಜನಗರ ರೈತರು ಹಲವು ಬೇಡಿಕೆ ಮುಂದಿಟ್ಟು

▶▶▶13

ಗೋಲ್ಡನ್ ಪಾಮ್ ರೆಸಾರ್ಟ್ ಸಭೆ ಖರ್ಚೆಷ್ಟು ಗೊತ್ತೆ?

ಅಖಂಡ ದೇಶಪ್ರೇಮಿಗಳೂ ಮತ್ತು ಬಡವರ ಬಂಧುಗಳೂ ತಾವೆಂದು ಹೇಳಿಕೊಳ್ಳುವ ಈ ಬಜೆಪಿಗಳಿಗೆ ತಿಂಗಳಿಗೆರಡು ಬಾರಿ ರೆಸಾರ್ಟ್ ರಾಜಕೀಯ ಮಾಡದಿದ್ದರೆ ತಿಂದ ಅನ್ನ ಕರಗುವುದಿಲ್ಲವೆಂದು ಕಾಣುತ್ತದೆ.

Room Rates Effective From 1ST OCTOBER 2009 TO 30TH SEPTEMBER 2010

Room Categories	Rack Rates: Current (Valid till 30th Sep' 2010) INR (Rs.)	Rack Rates: Current (Valid till 30th Sep' 2010) USD ($)
Deluxe Rooms (Single)	12000	300
Deluxe Rooms (Double)	13000	350
Deluxe suites	22000	550
Presidential Suite	35000	880

ಈ ಬಜೆಪಿಯಲ್ಲಿ ಭಿನ್ನಮತ ಶುರುವಾದಾಗಲೂ ರೆಸಾರ್ಟ್ ಠಿಕಾಣಿ, ಈ ಭಿನ್ನಮತೀಯರ ವಿರುದ್ಧ ಬಂಡೆದ್ದ ವಿಭಿನ್ನಮತೀಯರೂ ರೆಸಾರ್ಟ್‌ನಲ್ಲಿದ್ದವರೆ, ಈಗ ಭಿನ್ನಮತೀಯರು, ವಿಭಿನ್ನಮತೀಯರು ಸೇರಿಕೊಂಡೇ ಮತಿಗೆಟ್ಟವರಂತೆ ಗೋಲ್ಡನ್ ಪಾಮ್ ರೆಸಾರ್ಟ್‌ಗೆ ಹೋಗಿಬಂದಿದ್ದಾರೆ.

ಹೀಗೆ ಮತಿಗೆಟ್ಟವರಂತೆ ಆಡುತ್ತಿರುವ ಬಜೆಪಿಗಳ ಮೊನ್ನಿನ ಒಂದು ದಿನದ ರೆಸಾರ್ಟ್ ರಾಜಕೀಯಕ್ಕೆ ಖರ್ಚಾಗಿರುವ ಹಣ ಎಷ್ಟು ಗೊತ್ತೆ?

ಒಂದು ಕೋಟಿ ರೂಪಾಯಿಗಳು!

ಬೆಂಗಳೂರಿನ ತುಮಕೂರು ರಸ್ತೆಯಲ್ಲಿರುವ 'ಗೋಲ್ಡನ್ ಪಾಮ್' ಒಂದು ಫೈವ್‌ಸ್ಟಾರ್ ರೆಸಾರ್ಟ್. ಅಲ್ಲಿನ ಒಂದು ರೂಮಿನ ದಿನ ಬಾಡಿಗೆಯೇ 25 ಸಾವಿರದಿಂದ 33 ಸಾವಿರ ರೂಪಾಯಿ ಇದೆ. ಜೊತೆಗೆ 12 ಪರ್ಸೆಂಟ್ ಟ್ಯಾಕ್ಸ್ ಕೊಡಬೇಕು.

ಈ ರೆಸಾರ್ಟ್‌ನಲ್ಲಿ ಒಟ್ಟು 132 ಡಿಲಕ್ಸ್ ರೂಂಗಳಿವೆ. ಮೊನ್ನಿನ ಸಭೆಗೆ ಗೈರುಹಾಜರಾಗಿದ್ದ 20 ಶಾಸಕ-ಸಂಸದರನ್ನು ಹೊರತುಪಡಿಸಿಯೂ ಅಲ್ಲಿ ಒಟ್ಟು ನೂರೈವತ್ತಕ್ಕೂ ಹೆಚ್ಚು ಚಿಡ್ಡಿ ಶಾಸಕರಿದ್ದರು. ಇಡೀ ರೆಸಾರ್ಟ್‌ನ ಎಲ್ಲಾ ರೂಂಗಳನ್ನು ಸಭೆಗೆಂದು ಬುಕ್ ಮಾಡಲಾಗಿತ್ತು. ಇದರ ದಿನ ಬಾಡಿಗೆಯೇ 40 ಲಕ್ಷ ರೂ ದಾಟಿದೆ. ಜೊತೆಗೆ ಶಾಸಕರ ಊಟ-ಕೂಟ, ಗುಂಡು-ತುಂಡು, ಸಾರಿಗೆ, ಮಸಾಜು, ಎಲ್ಲಾ ಖರ್ಚು ಸೇರಿ 60 ಲಕ್ಷ ಆಗುವುದೇನು ಮಹಾ!

ಈಗ ಹೇಳಿ ಮಿ. ಯಡಿಯೂರಪ್ಪ

ಯಾವ ಪುರುಷಾರ್ಥಕ್ಕಾಗಿ ಈ ಸಭೆ ಮಾಡಿದಿರಿ?

ಅದರ ಖರ್ಚು ಕೊಟ್ಟವರ್ಯಾರು?

ಈ ಸಭೆಯಿಂದ ಜನರ ಕಷ್ಟ ಏನಾದರೂ ಪರಿಹಾರವಾಯಿತಾ? ಅಸಲಿಗೆ ನಿಮ್ಮ ಸಭೆಯಲ್ಲಿ ಅದರ ಚರ್ಚೆಯಾದರೂ ಮಾಡಿದಿರಾ?



1 ವಡೆ, 2 ಇಡ್ಲಿ, 3 ಕೋಟಿ ದುಡ್ಡು!

ಬಿಜೆಪಿಯಲ್ಲಿನ ಭಿನ್ನಮತೀಯರು ಸದ್ಯಕ್ಕೆ ಸುಮ್ಮನಾಗಿದ್ದಾರೆ. 'ಸುಮ್ಮನಾಗಿದ್ದಾರೆ' ಎನ್ನುವುದಕ್ಕಿಂತ ಮುಖ್ಯಮಂತ್ರಿ ಯಡ್ಡಿ 'ಸುಮ್ಮನಾಗಿಸಿದ್ದಾರೆ' ಎಂಬುದೇ ಸರಿ. ನರ್ಸ್ ರೇಣು'ಕಾಚಾ'ರ್ಯನನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುತ್ತಿದ್ದಂತೆಯೇ ಬಾಯಿಬಡಿದುಕೊಳ್ಳಲಾರಂಭಿಸಿದ್ದವರೆಲ್ಲಾ ಈಗ ಬಾಯಿ ಮುಚ್ಚಿಕೊಂಡು ಮನೆ ಸೇರಿದ್ದಾರೆ. 'ಗೋಲ್ಡನ್ ಪಾಮ್' ರೆಸಾರ್ಟ್‌ನಲ್ಲಿ ಯಡ್ಡಿ ನೀಡಿದ 'ಆತಿಥ್ಯ' ಅವರೆಲ್ಲರ ಪಕ್ಷ ನಿಷ್ಠೆಯನ್ನು ಹೆಚ್ಚಿಸಿದೆ!

ಬಂಡಾಯದ ಬಾವುಟ ಹಿಡಿದುಕೊಂಡು, ಯಡ್ಡಿಯನ್ನು ಛೇಡಿಸುತ್ತಾ ಓಡಾಡಿಕೊಂಡಿದ್ದ ಹೊನ್ನಾಳಿಯ ಗೂಳಿ ರೇಣು'ಕಾಚಾ'ರ್ಯನನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳುತ್ತಿದ್ದಂತೆ ಪಕ್ಷ ನಿಷ್ಠ ಶಾಸಕರೆನಿಸಿಕೊಂಡವರು "ಎರಡು- ಮೂರು- ನಾಲ್ಕು ಬಾರಿ ಗೆದ್ದ ನಮಗೆ ಅನ್ಯಾಯವಾಗಿದೆ. ಪಕ್ಷದಲ್ಲಿ ಹೊರಗಿನಿಂದ ಬಂದವರಿಗೆ ಮತ್ತು ಬಂಡಾಯವೆದ್ದವರಿಗೆ ಮಾತ್ರ ಅಧಿಕಾರ ನೀಡಲಾಗುತ್ತಿದೆ" ಎಂದು ಸಿಕ್ಕಸಿಕ್ಕವರ ಹತ್ತಿರ ಗೋಳು ತೋಡಿಕೊಳ್ಳುತ್ತಿದ್ದರು. ಸುಮಾರು 30ಕ್ಕೂ ಹೆಚ್ಚು ಶಾಸಕರು ಮಡಿಕೇರಿ ಶಾಸಕ ಅಪ್ಪಚ್ಚು ರಂಜನ್ ನೇತೃತ್ವದಲ್ಲಿ ಬಂಡಾಯದ ಬಾವುಟ ಹಾರಿಸಿದ್ದಲ್ಲದೆ, ಇನ್ನೇನು ಸರ್ಕಾರ ಪತನವಾಗಲಿದೆ ಎಂಬ ವಾತಾವರಣ ನಿರ್ಮಿಸಿದ್ದರು.

ಈ ಬೆಳವಣಿಗೆಯಿಂದ ತನ್ನ ಬುಡಕ್ಕೆ ಬಿಸಿನೀರು ಬಿಟ್ಟಂತೆ ಎಂದು ಅರಿತ ಯಡ್ಡಿ ರಾತ್ರಿ ಕಾರ್ಯಾಚರಣೆ ನಡೆಸಿದರು. ರಾಜೀನಾಮೆ ಕೊಡಲು ಹೊರಟಿದ್ದ ಅಪ್ಪಚ್ಚು ರಂಜನ್ ಮತ್ತಿತರರನ್ನು ತಮ್ಮ ಮನೆಗೆ ಕರೆಸಿಕೊಂಡು ಸಪ್ಪಾಪ ಮಾಡಿ, ಪಕ್ಷ ನಿಷ್ಠರಿಗೆ ಆದ 'ಅನ್ಯಾಯ' ಸರಿಪಡಿಸಿದರು!



'ಗೋಲ್ಡನ್ ಪಾಮ್'ನಲ್ಲಿ ನಡೆದಿದ್ದೇನು?

ಮೊನ್ನೆ ಸೋಮವಾರ ಬೆಂಗಳೂರಿನ ಹೊರವಲಯದಲ್ಲಿರುವ 'ಗೋಲ್ಡನ್ ಪಾಮ್' ರೆಸಾರ್ಟ್‌ನಲ್ಲಿ ಬಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಿತು. ಭಿನ್ನಮತಕ್ಕೆ ಕಾರಣವಾಗಿರುವ ವಿಷಯಗಳ ಕುರಿತು ಚರ್ಚಿಸುವುದು ಈ ಸಭೆಯ ಉದ್ದೇಶವಾಗಿತ್ತಾದರೂ ಅಲ್ಲಿ ನಡೆದದ್ದೇ ಬೇರೆ!

ಆ ಸಭೆ ನಡೆಯುವ ಮೊದಲೇ ಶಾಸಕರೆಲ್ಲಾ ಬಂಡೆದ್ದ ಬಗ್ಗೆ ಮಾಹಿತಿ ಪಡೆದ ಬಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿ, ಮುಖ್ಯಮಂತ್ರಿ ಯಡ್ಡಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಂತ್‌ಕುಮಾರ್ ಮತ್ತು ರಾಜ್ಯ ಘಟಕದ ಅಧ್ಯಕ್ಷರನ್ನು ಸಂಪರ್ಕಿಸಿ ಅವರನ್ನೆಲ್ಲ ತರಾಟೆಗೆ ತೆಗೆದುಕೊಂಡರು.

"ಇನ್ನೊಂದು ವಾರದಲ್ಲಿ ಬಿನ್ನಮತೀಯರ ಬಾಯಿ ಮುಚ್ಚಿಸದಿದ್ದರೆ ಸರ್ಕಾರ ಬಿದ್ದು ಹೋಗುತ್ತದೆ. ಪಕ್ಷದ ವಿರುದ್ಧ ಮಾತನಾಡಿದವರನ್ನೆಲ್ಲಾ ಸಸ್ಪೆಂಡ್ ಮಾಡುತ್ತೇನೆ" ಎಂದು ಗಡ್ಕರಿ ಎಚ್ಚರಿಸಿದರು. ಮಾತ್ರವಲ್ಲ ರಾಜ್ಯಾಧ್ಯಕ್ಷ ಹಲ್ಮುಖಿ ಗೌಡನಿಗೆ ಒಂದಿಷ್ಟು ಜೋರಾಗಿಯೇ ಗದರಿ "ಎಲ್ಲವನ್ನೂ ಸರಿಪಡಿಸಿ ನನಗೆ ವರದಿ ನೀಡಿ" ಎಂದರು.

ಆಗ ಇಕ್ಕಟ್ಟಿನಲ್ಲಿ ಸಿಕ್ಕ ತ್ರಿಮೂರ್ತಿಗಳು (ಯಡ್ಡಿ ಅನಂತು, ಹಲ್ಮುಖಿಗೌಡ) ಮಾಸ್ಟರ್ ಪ್ಲಾನ್ ರೂಪಿಸಿದರು. ಭಿನ್ನಮತೀಯ ಶಾಸಕರನ್ನೆಲ್ಲಾ ಸಂಪರ್ಕಿಸಿ ಗಡ್ಕರಿ ನೀಡಿದ ಎಚ್ಚರಿಕೆಯನ್ನು ವಿವರಿಸಿದರು. "ನೀವು ಈಗ ಸುಮ್ಮನಿರಿ, ಮುಂದೆ ಎಲ್ಲ ಸರಿಮಾಡೋಣ, ಅಲ್ಲಿಯತನಕ ಇದನ್ನು ಇಟ್ಕೊಂಡಿರಿ" ಎಂದು ಸೂಟ್‌ಕೇಸ್ ನೀಡಿದರು. ಅದರಲ್ಲಿತ್ತು ದುಡ್ಡಿನ ಕಂತೆ!

ಹೌದು, ಜೋರಾಗಿ ಮಾತನಾಡುತ್ತಿದ್ದ ಸುಮಾರು 20 ಶಾಸಕರಿಗೆ ತಲಾ ಮೂರು ಕೋಟಿ ಮತ್ತು ಉಳಿದವರಿಗೆ 2 ಅಥವಾ 1 ಕೋಟಿ ವಿತರಿಸಲಾಯಿತು. ಸರ್ಕಾರದಿಂದ ಲಾಭ ಪಡೆದವರಿಗೆ ಕಡಿಮೆ, ಇದುವರೆಗೂ ಏನೂ ಪಡೆಯದೆ ಸಿಟ್ಟಾಗಿದ್ದವರಿಗೆ - ಮೂರು ಕೋಟಿ ಹೀಗೆ ಕೆಲ ಮಾನದಂಡಗಳನ್ನು ಅನುಸರಿಸಿ ತ್ರಿಮೂರ್ತಿಗಳು ದುಡ್ಡು ಹಂಚಿದ್ದರು. ಈ ತಂತ್ರ ಹೇಳಿಕೊಟ್ಟಿದ್ದು ರೆಡ್ಡಿ ಬ್ರದರ್ಸ್ ಎಂದು ಇಲ್ಲಿ ಬಿಡಿಸಿ ಹೇಳಬೇಕಾಗಿಯೇನೂ ಇಲ್ಲ.

ಭಿನ್ನಮತೀಯರಾಗಿ ಸಸ್ಪೆಂಡ್ ಆಗುವುದಕ್ಕಿಂತ ಯಡ್ಡಿ ಕೊಟ್ಟಷ್ಟು ಇಸ್ಕೊಂಡು ಮನೆ ಸೇರುವುದೇ ಸರಿ ಎಂದು ಲೆಕ್ಕ ಹಾಕಿದರು ಈ 'ಪಕ್ಷ ನಿಷ್ಠ'ರು. ಅಷ್ಟೇ ಅಲ್ಲ ಅದಕ್ಕೂ ಮುಂಚೆಯೇ ದುಡ್ಡು ತೆಗೆದುಕೊಂಡ ಕೆಲವರು ಸಭೆಗೇ ಬಂದಿರಲಿಲ್ಲ!

ಬಜೆಪಿಯ ಉನ್ನತ ಮೂಲಗಳ ಪ್ರಕಾರ ಸುಮಾರು 150 ಕೋಟಿಗೂ ಹೆಚ್ಚು ಹಣವನ್ನು ಹೀಗೆ ಶಾಸಕರಿಗೆ ವಿತರಿಸಲಾಗಿದೆ. ಎಲ್ಲ ಶಾಸಕರೂ ಈಗ ಯಡ್ಡಿಯ ಹಂಗಿನಲ್ಲಿದ್ದು ಮುಂದೆ ಭಿನ್ನಮತದ ಧ್ವನಿ ಇಷ್ಟು ಜೋರಾಗಿ ಕೇಳಿಸದು ಎಂಬ ಮಾತು ಕೇಳಿಬರುತ್ತಿದೆ.

ಈಗಾಗಲೇ ಅಧಿಕಾರಕ್ಕಾಗಿ ಎಲ್ಲವನ್ನೂ ಕಳೆದುಕೊಂಡು ವಿಧುರನಂತೆ ಆಡುತ್ತಿರುವ ಯಡ್ಡಿ ಈಗ ಕೋಟಿಗಳ ಲೆಕ್ಕದಲ್ಲಿ ಹಣವನ್ನೂ ಕಳೆದುಕೊಂಡು ಈಗ ಸಪ್ಪೆ ಮುಖ ಮಾಡಿಕೊಂಡು ಓಡಾಡುತ್ತಿದ್ದಾರೆ. ಮೊದಲು ಬೇರೆ ಪಕ್ಷದ ಶಾಸಕರನ್ನು ಖರೀದಿಸಿ ತಮ್ಮ ಕುರ್ಚಿಯನ್ನು ಗಟ್ಟಿ ಮಾಡಿಕೊಂಡಿದ್ದ ಯಡ್ಡಿ ಈಗ ತಮ್ಮ ಪಕ್ಷದ ಶಾಸಕರನ್ನೇ ಖರೀದಿಸುವ ಮಟ್ಟಕ್ಕೆ ಇಳಿದಿದ್ದಾರೆ. ಇಂತಹ ಹೇಸಿಗೆಯ ವ್ಯವಹಾರ ನಡೆಸಿ, ಇನ್ನು ತನ್ನ ವಿರುದ್ಧ ಯಾರೂ ಬಾಯಿಬಿಡುವುದಿಲ್ಲ ಎಂಬ ಧೈರ್ಯದಿಂದ ಯಡ್ಡಿ ಈಗ ಉಸಿರಾಡುತ್ತಿದ್ದಾರೆ. ಸಂಕ್ರಾಂತಿ ನಂತರ ನಿಗಮ-ಮಂಡಳಿಯ ಅಧ್ಯಕ್ಷರ ರಾಜೀನಾಮೆ ಪಡೆದು ಪುನರ್‌ನೇಮಕ ಮಾಡಲಾಗುವುದು ಎಂದು ಅಧ್ಯಕ್ಷ ಹಲ್ಮುಖಿಗೌಡ ಹೇಳುತ್ತಿದ್ದರೆ, ಯಡ್ಡಿ ಮಾರ್ಚ್‌ವರೆಗೂ ಯಾರನ್ನೂ ಎಲ್ಲಿಗೂ ನೇಮಿಸುವುದಿಲ್ಲ, ಯಾರ ರಾಜೀನಾಮೆಗೂ ತಾವು ಸೂಚಿಸಿಲ್ಲ ಎಂದು ಗುಟುರು ಹಾಕಿದ್ದಾರೆ. ಬಾಯಿಗೆ ದುಡ್ಡಿನ ಬೆಣೆ ಹೊಡೆಸಿಕೊಂಡ ಭಿನ್ನಮತೀಯರಂತೂ ಮಾತನಾಡುವಂತೆಯೇ ಇಲ್ಲ ಬಿಡಿ! ಇದು ಯಡ್ಡಿಗೆ ಅರ್ಥವಾಗಿದೆ.


ರೆಸಾರ್ಟ್ ಸಭೆಯ ನಂತರ ದಿಲ್ಲಿಗೆ ಹೋದ ಹಲ್ಮುಖಿಗೌಡ ಗಡ್ಕರಿಗೆ "ರಾಜ್ಯದಲ್ಲಿ ಈಗ ಎಲ್ಲವೂ ಸರಿ ಮಾಡಿದ್ದೇವೆ, ಎಲ್ಲರನ್ನೂ ಸಮಾಧಾನ ಪಡಿಸಿದ್ದೇವೆ" ಎಂದು 'ವರದಿ' ಕೊಟ್ಟು ಬಂದಿದ್ದಾರೆ. ಸದ್ಯ ಒಂದು ಸಮಸ್ಯೆ ಸಾಲ್ವಾಯಿತಲ್ಲಾ ಎಂದು ಗಡ್ಕರಿ ನಿಟ್ಟುಸಿರುಬಿಟ್ಟರಂತೆ. ಒಟ್ಟಾರೆ ಬಜೆಪಿಯಲ್ಲೀಗ ಕುರುಡು ಕಾಂಚಾಣ ಕುಣಿಯುತಲಿದೆ. ಅದೇ ಭಿನ್ನಮತವನ್ನೂ ಶಮನ ಮಾಡಿದೆ!

● ನೀರದ ಬೆಂಗಳೂರು

ಯಾರೋ ಕಟ್ಟಿದ ಹುತ್ತಕ್ಕೆ ನುಗ್ಗಿದ ಚೆಡ್ಡಿ ಲಕ್ಷ್ಮೀಕಾಂತ!

ಗೆದ್ದಲು ಕಟ್ಟಿದ ಹುತ್ತಕ್ಕೆ) ಸೇರಿಕೊಂಡಿತು ಕ್ಷೀ ಗಾದೆ ಬಿಜೆಪಿಯ ಳೂರು ನಗರ ರ್ಯದರ್ಶಿಯಾಗಿರುವ ಲಕ್ಷ್ಮೀಕಾಂತನಿಗೆ ಚೆನ್ನಾಗಿ ಲುತ್ತದೆ. ದಶಕಗಳಿಂದ ಮಪಟ್ಟು ಕಟ್ಟಿದ ತ್ತಾದ ಶಿಕ್ಷಣ ಯೊಂದಕ್ಕೆ ಕುನೋಡುತ್ತಿದ್ದಂತೆಯೇ ಹೊಕ್ಕು ಕುಳಿತಿದ್ದಾನೆ. ಗಿ ಆತ ಮಾಡಿದ ಟಗಳು ಒಂದೇ ? ಸ್ವಾತಂತ್ರ್ಯ ರಾಟಗಾರರೂ ಹಾಗೂ ಳೂರಿನ ಮಾಜಿ ಮರ್ ಆಗಿದ್ದ ಮಚಂದ್ರ ಮತ್ತು ಬಿ.ವಿ.ಲಂಕಪ್ಪರಂಥ ರು ಬಡ ಮತ್ತು ದಿಕ್ಕು ದೆಸೆಯಿಲ್ಲದ ವಮಕ್ಕಳಿಗೆ ಶಿಕ್ಷಣ ಒದಗಿಸಬೇಕೆಂಬ ೋನ್ನತ ಧ್ಯೇಯದೊಂದಿಗೆ ಪ್ರತಿಷ್ಠಾಪಿಸಿದ್ದ .ಎಸ್ ಎಜುಕೇಶನ್ ಸೊಸೈಟಿಯೇ ಕಾಂತನೆಂಬ ಬಿಜೆಪಿ ಹಾವಿಗೆ ಬಲಿಯಾದ ದೆ.

.ರಾಮಚಂದ್ರ ಅವರು ಬೆಂಗಳೂರಿನ ಯರ್ ಆಗಿದ್ದಾಗಲೇ ಬಡ ಮಕ್ಕಳಿಗೆ ಶಿಕ್ಷಣ ವ ಸದುದ್ದೇಶದಿಂದ ಈ ಶಿಕ್ಷಣ ಸಂಸ್ಥೆಯನ್ನು ಭಿಸಿದ್ದರು. ಇದಕ್ಕಾಗಿ ನಗರದ ಪೇಟೆಯಲ್ಲಿ 80 x 80 ಅಳತೆಯ ಹಾಗೂ ನಗರದಲ್ಲಿ 175 x 100 ರು ಎರಡು ನಿವೇಶನಗಳನ್ನೂ ಆಧಾರದಲ್ಲಿ ಒದಗಿಸಿದ್ದರು. ಹೇಟೆಯ ನಿವೇಶನವನ್ನು ವರ್ಷಕ್ಕೆ ಹಾಗೂ ನಗರದ ನಿವೇಶನವನ್ನು 99 , ಗುತ್ತಿಗೆ ಆಧಾರದಲ್ಲಿ ನಗರ ಪಾಲಿಕೆ ಈ ಸಂಸ್ಥೆಗೆ . ಈ ಸಂಸ್ಥೆಯ ಟಿಕೆಗಳು ಸ್ವಾತಂತ್ರ್ಯ ದಿಂದಲೂ ುತ್ತಿದ್ದವಾದರೂ ಅದು ವಾಗಿ ನೋಂದಣಿಗೊಂಡದ್ದು 1 ರಲ್ಲಿ. ಬಿ.ವಿ.ಲಂಕಪ್ಪ ಅವರು ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಉದ್ದೇಶಕ್ಕಾಗಿ ಈ ಸಂಸ್ಥೆ ಸ್ಥಾಪನೆಯಾಗಿತ್ತೋ ಸವನ್ನು ಬಹು ಚೆನ್ನಾಗಿಯೇ ಸಿಕೊಂಡು ಬರಲಾಗುತ್ತಿತ್ತು.



ಲಕ್ಷ್ಮೀಕಾಂತ್

1970ರಲ್ಲಿ ಅಧ್ಯಕ್ಷರಾಗಿದ್ದ ಲಂಕಪ್ಪನವರು ನಿಧನರಾದ ಮೇಲೆ ವೈ.ರಾಮಚಂದ್ರ ಅವರು ಅದರ ಅಧ್ಯಕ್ಷರಾಗಿ ಜವಾಬ್ದಾರಿ ತೆಗೆದುಕೊಂಡರು. ಅವರೂ ಕೂಡ ಸಂಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದರಿಂದ ಲಂಕಪ್ಪನವರ ಕೆಲಸವನ್ನು ಬಹು ಸಮರ್ಥವಾಗಿಯೇ ನಿಭಾಯಿಸಿಕೊಂಡು ಹೋಗುತ್ತಿದ್ದರು. ತೊಂಭತ್ತರ ದಶಕದ ನಂತರ ಬೆಂಗಳೂರಿನಲ್ಲಿ ಐಟಿ, ಬಿಟಿ ಬೂಮ್ ಏರುತ್ತಿದ್ದಂತೆಯೇ, ಬೆಂಗಳೂರು ಅಡ್ಡಾದಿಡ್ಡಿಯಾಗಿ ಬೆಳೆಯಲಾರಂಭಿಸಿದಂತೆಯೇ ಇಲ್ಲಿ ಭೂಮಿಗೆ ಬಂಗಾರದ ಬೆಲೆ ಬಂತು. ಅದರಲ್ಲೂ ಜಯನಗರದಂತಹ ಆಯಕಟ್ಟಿನ ಪ್ರದೇಶದಲ್ಲಿದ್ದ ಈ ಶಿಕ್ಷಣ ಸಂಸ್ಥೆಯ 175 x 100 ಅಳತೆಯ ವಿಸ್ತಾರ ಭೂಮಿ ಸಹಜವಾಗಿಯೇ ಭೂಗಳ್ಳರ ಕಣ್ಣು ಕುಕ್ಕುತ್ತಿತ್ತು. ಅದರಲ್ಲೂ ವಿಶೇಷವಾಗಿ ಈ ಸಂಸ್ಥೆಯ ಜಾಗದ ಎದುರುಗಡೆಯೇ ಮನೆಕಟ್ಟಿಕೊಂಡಿರುವ ಬಿಜೆಪಿಯ ನಗರ ಕಾರ್ಯದರ್ಶಿ ಎನ್.ಲಕ್ಷ್ಮೀಕಾಂತನಂತೂ ಏನಾದರೂ ಮಾಡಿ ಚಿನ್ನದ ಬೆಲೆಯಿರುವ ಈ ಭೂಮಿಯನ್ನು ನುಂಗುವುದಕ್ಕೆ ಹವಣಿಸುತ್ತಲೇ ಇದ್ದ. ಆದರೆ, ವೈ.ರಾಮಚಂದ್ರ ಅವರು ತಾವು ಬದುಕಿರುವ ತನಕ ಯಾವುದೇ ಭೂಗಳ್ಳ ಸಂಸ್ಥೆಯ ಒಂದಿಂಚು ಜಾಗವನ್ನೂ ನುಂಗುವುದಕ್ಕೆ ಅವಕಾಶ ಮಾಡಿಕೊಟ್ಟಿರಲಿಲ್ಲ. ಹಾಗಾಗಿ ಲಕ್ಷ್ಮೀಕಾಂತ ಕೂಡ ಬಾಲ ಮುದುಡಿಕೊಂಡು ಕಾಯುತ್ತಿದ್ದ.




ಅರುಣ್ ಮತ್ತು ಮನೋಹರ್

2007ರಲ್ಲಿ ವೈ.ರಾಮಚಂದ್ರ ಅವರೂ ಕೂಡ ನಿಧನರಾದರು. ಪ್ರಾಯಶಃ ಇಂಥ ಒಂದು ಸಂದರ್ಭಕ್ಕಾಗಿಯೇ ಕಾಯುತ್ತಿದ್ದ ಲಕ್ಷ್ಮೀಕಾಂತ ತಕ್ಷಣವೇ ಫೀಲ್ಡಿಗಿಳಿದು ಇಡೀ ಶಿಕ್ಷಣ ಸಂಸ್ಥೆಯನ್ನು ತನ್ನ ಕೈವಶ ಮಾಡಿಕೊಳ್ಳುವುದಕ್ಕೆ ಕಾರ್ಯಾರಂಭ ಮಾಡಿದ. ಆ ನಿಟ್ಟಿನಲ್ಲಿ ಆತ ಮೊದಲು ಮಾಡಿದ ಕೆಲಸ ಈ ಸಂಸ್ಥೆಯ ಜಾಗದಲ್ಲಿಯೇ ಅಯ್ಯಪ್ಪಸ್ವಾಮಿಯ ಮಂದಿರ ಸ್ಥಾಪಿಸಿಕೊಂಡು ಭಜನೆ ನಾಟಕ ಮಾಡುತ್ತಿದ್ದ ವಾಸುದೇವ ಮತ್ತು ಮನೋಹರ್ ಎಂಬ ಪಾತಕಿಗಳನ್ನು ತನ್ನ ಬುಟ್ಟಿಗೆ ಹಾಕಿಕೊಂಡಿದ್ದು.

ಈ ವಾಸುದೇವ ಮತ್ತು ಮನೋಹರ್ ಶಿಕ್ಷಣ ಸಂಸ್ಥೆಯ ಜಾಗದಲ್ಲಿ ತಳವೂರಿದ್ದರ ಹಿಂದೆಯೂ ಒಂದು ಪುಟ್ಟ ಕತೆಯಿದೆ. ರಾಮಚಂದ್ರ ಅವರು 70ರ ದಶಕದಲ್ಲಿ ಸಂಸ್ಥೆಯ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡ ಮೇಲೆ ಕೆಲವು ಅಯ್ಯಪ್ಪ ಸ್ವಾಮಿ ಭಕ್ತರು ಬಂದು ಭಜನೆ, ಪೂಜೆ ಮಾಡುವುದಕ್ಕಾಗಿ ಆರ್.ಕೆ.ಎಸ್ ಶಿಕ್ಷಣ ಸಂಸ್ಥೆಯ ಸುಪರ್ದಿನಲ್ಲಿದ್ದ ಒಂದಿಷ್ಟು ಜಾಗವನ್ನು ಕೊಡುವಂತೆ ಕೇಳಿಕೊಂಡಿದ್ದರು. "ದೇವರ ಕೆಲಸವಲ್ಲವೇ, ಭಜನೆ, ಪೂಜೆ ಮಾಡಿಕೊಳ್ಳಲಿ" ಎಂದು ರಾಮಚಂದ್ರ ಅವರೂ ಆ ಭಕ್ತರಿಗೆ ಅಲ್ಲಿ ಅವಕಾಶ ಮಾಡಿಕೊಟ್ಟಿದ್ದರು. ಆರಂಭದಲ್ಲಿ ಅಯ್ಯಪ್ಪ ಸ್ವಾಮಿಯ ನಿಜವಾದ ಭಕ್ತರೆ ಅಲ್ಲಿದ್ದುದರಿಂದ ಶಿಕ್ಷಣ ಸಂಸ್ಥೆಗಾಗಲೀ, ಅದರ ಸುಪರ್ದಿನಲ್ಲಿದ್ದ ಜಾಗಕ್ಕಾಗಲೀ ಯಾವುದೇ ಅಪಾಯವಿರಲಿಲ್ಲ. ಆದರೆ, ನಿಧಾನವಾಗಿ ಈ ನೈಜ ಭಕ್ತರ ಗುಂಪಿಗೆ ವಾಸುದೇವ ಮತ್ತು ಮನೋಹರ ಎಂಬ ಪಾತಕಿಗಳೂ ಸೇರಿಕೊಳ್ಳುವುದರೊಂದಿಗೆ ಅತ್ತ ಅಯ್ಯಪ್ಪ ಸ್ವಾಮಿಯ ನಿಜವಾದ ಭಕ್ತರೂ, ಇತ್ತ ಶಿಕ್ಷಣ ಸಂಸ್ಥೆಯೂ ಇವರಿಂದ ಅಪಾಯವನ್ನೆದುರಿಸಬೇಕಾಗಿ ಬಂತು.



ವೆಂಕಟೇಶ್



ರಾಮಚಂದ್ರ

ಕೆಲವು ವರ್ಷಗಳ ಹಿಂದೆ ಸಂಸ್ಥೆಯ ಜಾಗದ ಒಂದು ಮೂಲೆಯಲ್ಲಿ ಭಜನೆ ಮಾಡುತ್ತಿದ್ದ ಇವರು ಈ ಹೊತ್ತು ಹೆಚ್ಚೂಕಡಿಮೆ ಅರ್ಧ ಭಾಗವನ್ನು ಆಕ್ರಮಿಸಿಕೊಂಡು ಅಯ್ಯಪ್ಪ ಸ್ವಾಮಿಯ ದೇವಸ್ಥಾನ ಕಟ್ಟಿಸಿಕೊಂಡಿದ್ದಾರೆ. ಅಯ್ಯಪ್ಪ ಸ್ವಾಮಿಯ ಹೆಸರಿನಲ್ಲಿ ಕೋಟಿ ಕೋಟಿ ದುಡ್ಡು ಎತ್ತುವುದು, ಅದನ್ನು ನುಂಗಿ ನೀರು ಕುಡಿಯುವುದು ಇವರ ಮಾಮೂಲಿ ದಂಧೆಯಾಗಿಬಿಟ್ಟಿದೆ. ಅದೂ ಸಾಲದೆಂಬಂತೆ ಜಯನಗರದ ನಾಲ್ಕನೇ ಹಂತದಲ್ಲಿರುವ ಸ್ಟುಡಿಯೋದಲ್ಲಿ ಬ್ಲೂ ಫಿಲಂಗಳನ್ನೂ ಸೃಷ್ಟಿ ಮಾಡಿ ಮಾರಾಟ ಮಾಡುವ ದಂಧೆಯನ್ನೂ ಮಾಡುತ್ತಿದ್ದರು. ಈ ಕುರಿತಂತೆ ಜಯನಗರ ಪೊಲೀಸರು ಈ ಇಬ್ಬರು 'ಅಯ್ಯಪ್ಪ ಭಕ್ತ'ರನ್ನು ಅರೆಸ್ಟ್ ಮಾಡಿ ಮೈತುಂಬಾ ಕೇಸು ಜಡಿದಿದ್ದರು.

ಆದಾದ ಮೇಲೂ ತಮ್ಮ ಅಡ್ಡ ಕಸುಬುಗಳನ್ನು ನಿಲ್ಲಿಸದ ಕಾರಣ 2000, 2001, 2002ರಲ್ಲಿ ಈ ಮಹಾನ್ ಭಕ್ತರ ಮೇಲೆ ಅನೇಕ ಕ್ರಿಮಿನಲ್ ಕೇಸುಗಳನ್ನು ಜಡಿಯಲಾಗಿದೆ. (ಕೇಸ್ ನಂಬರ್: 1573/2000; 821/2000/ 212/2001; 435/2001/ 4419/2002). ಎಂಥ ಅಯ್ಯಪ್ಪ ಸ್ವಾಮಿಗೆ ಎಂಥಾ ಕ್ರಿಮಿನಲ್ ಭಕ್ತರು!


2007ರಲ್ಲಿ ರಾಮಚಂದ್ರ ಅವರು ನಿಧನರಾಗುತ್ತಿದ್ದಂತೆಯೇ ಫೀಲ್ಡಿಗಿಳಿದ ಲಕ್ಷ್ಮೀಕಾಂತ ಈ ಇಬ್ಬರು ಪುಂಡರ ಜೊತೆ ಸೇರಿಕೊಂಡು ಇಡೀ ಶಿಕ್ಷಣ ಸಂಸ್ಥೆಯನ್ನು ನುಂಗುವುದಕ್ಕೆ ಪ್ಲಾನ್ ರೂಪಿಸಿದ. ತನ್ನೊಂದಿಗೆ ಹಾಲಿ ಆಡಳಿತ ಮಂಡಳಿಯಲ್ಲಿದ್ದ ಕೆಲವರನ್ನೂ ಸೇರಿಸಿಕೊಂಡ. ಚುನಾವಣೆಯ ಮೂಲಕ ಹೊಸ ಆಡಳಿತ ಮಂಡಳಿಯನ್ನು ರಚಿಸಲಾಗಿದೆಯೆಂದೂ ಪೊಳ್ಳು ದಾಖಲೆಗಳನ್ನು ಸೃಷ್ಟಿಸಿದ. ತನ್ನ ತಾಯಿ ಲಕ್ಷ್ಮಮ್ಮಳನ್ನೇ ಅದಕ್ಕೆ ಅಧ್ಯಕ್ಷೆಯನ್ನಾಗಿ ನೇಮಿಸಿದ. ಕೊನೆಗೆ ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಹೋಗಿ ಅದನ್ನು ಅಧಿಕೃತ ಮಾಡಿಸಿಕೊಂಡು ಬಂದ.

ಅಸಲೀಯತ್ತೇನೆಂದರೆ ಈ ಸಂಸ್ಥೆಗೆ 2003ರಲ್ಲಿ ಚುನಾವಣೆ ನಡೆದಿತ್ತು, ಸಂಸ್ಥೆಯ ಬೈಲಾದ ಪ್ರಕಾರ ಚುನಾಯಿತಗೊಂಡ ಆಡಳಿತ ಮಂಡಳಿ ಐದು ವರ್ಷ ಅಧಿಕಾರದಲ್ಲಿರುತ್ತದೆ. ಅದರಂತೆ 2003ರಲ್ಲಿ ಆಯ್ಕೆಗೊಂಡ ಸಮಿತಿಯ ಆಡಳಿತಾವಧಿ 2008ರ ತನಕ ಇತ್ತು, ಆದರೆ, ಒಂದು ವರ್ಷ ಮುಂಚೆಯೇ ಚುನಾವಣೆ ನಡೆಸಿದ್ದೇವೆಂದು ಬಂದಿದ್ದ ಲಕ್ಷ್ಮೀಕಾಂತನನ್ನು ಸಬ್‌ರಿಜಿಸ್ಟ್ರಾರ್ ಅವರೇ ಒದ್ದೋಡಿಸಬೇಕಿತ್ತು, ಅವರು ಅದ್ಯಾವ ನಿದ್ರೆ ಮಾತ್ರೆ ತೆಗೆದುಕೊಂಡು ಮಲಗಿದ್ದರೋ ಗೊತ್ತಿಲ್ಲ, ಅವರು ಅದನ್ನು ಪ್ರಶ್ನಿಸಲೇ ಇಲ್ಲ. ಕೊನೆಗೆ ಸಂಸ್ಥೆಯಲ್ಲಿ ನಿಷ್ಠಾವಂತರಾಗಿ ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಕೆಲವರಿಗೆ ಸಂಸ್ಥೆಯ ಭೂಮಿ ನುಂಗುವುದಕ್ಕಾಗಿಯೇ ಲಕ್ಷ್ಮೀಕಾಂತ ಈ ಎಲ್ಲಾ ಷಡ್ಯಂತ್ರ ನಡೆಸಿದ್ದಾನೆಂಬುದು ಅರಿವಾಗುತ್ತಿದ್ದಂತೆಯೇ ಸಬ್‌ರಿಜಿಸ್ಟ್ರಾರ್‌ಗೆ ಕಂಪ್ಲೇಂಟ್ ಕೊಟ್ಟರು. ಕೊನೆಗದು ಹೈಕೋರ್ಟ್ ಮೆಟ್ಟಿಲನ್ನೂ ಹತ್ತಿತು.

ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿದ ಕೋರ್ಟು ಯಾವುದು ಅಧಿಕೃತವಾದ ಆಡಳಿತ ಮಂಡಳಿ ಎಂಬುದನ್ನು ನಿರ್ಧರಿಸಲು ತನಿಖೆ ನಡೆಸಬೇಕೆಂದು ನೋಂದಣಾಧಿಕಾರಿಗಳಿಗೆ ಆದೇಶಿಸಿತು. ಅದರಂತೆ ಜಿಲ್ಲಾ ನೋಂದಣಾಧಿಕಾರಿಗಳು ತನಿಖೆ ನಡೆಸಿ ವರದಿಯನ್ನೂ ಕೊಟ್ಟಿದ್ದಾರೆ. ಅದರಲ್ಲಿ ಅವಧಿಗೆ ಒಂದು ವರ್ಷ ಮುಂಚಿತವಾಗಿಯೇ ಚುನಾವಣೆ ನಡೆಸಿದ್ದು ಕಾನೂನುಬಾಹಿರ ಕೃತ್ಯವೆಂದೂ, 2003ರಲ್ಲಿ ಆಯ್ಕೆಯಾದ ಸಮಿತಿಯೇ ಅಧಿಕೃತ ಸಮಿತಿಯೆಂದೂ ಸ್ಪಷ್ಟವಾಗಿ ಹೇಳಲಾಗಿದೆ. ಈ ವರದಿ ಹೈಕೋರ್ಟ್ ತಲುಪುವ ಹೊತ್ತಿಗೆ 2003ರಲ್ಲಿ ಆಯ್ಕೆಯಾದ ಅಧಿಕೃತ ಸಮಿತಿಯ ಅಧಿಕಾರಾವಧಿಯೂ ಮುಗಿದುಹೋಗಿತ್ತು, ಹಾಗಾಗಿ, ಆ ಸಮಿತಿಗೆ ಅಧಿಕಾರ ಹಸ್ತಾಂತರಿಸುವುದಕ್ಕೂ ಸಾಧ್ಯವಾಗಲಿಲ್ಲ. ಈ ಹಿನ್ನೆಲೆಯಲ್ಲಿ ಚುನಾವಣೆಯ ಮೂಲಕ ಹೊಸ ಸಮಿತಿ ಆಯ್ಕೆಯಾಗುವ ತನಕ ಒಬ್ಬ ಆಡಳಿತಾಧಿಕಾರಿಯನ್ನು ಸರ್ಕಾರ ನೇಮಿಸಿತು. ಇನ್ನೇನು ಅವರು ಬಂದು ಅಧಿಕಾರ ವಹಿಸಿಕೊಳ್ಳಬೇಕು ಎನ್ನುವಷ್ಟರಲ್ಲಿ ಮತ್ತೆ ಅಪೀಲು ಹೋಗಿದ್ದಾನೆ.

ಸಾರಾಂಶದಲ್ಲಿ ಹೇಳಬೇಕೆಂದರೆ, ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಈ ಶಿಕ್ಷಣ ಸಂಸ್ಥೆಯ ಜಾಗವನ್ನು

ಆರ್‌ಕೆಎಸ್ ಶಾಲೆ ಮತ್ತು ಅಯ್ಯಪ್ಪ ದೇವಸ್ಥಾನ...



ನುಂಗುವುದಕ್ಕೆ ಹಠತೊಟ್ಟಿರುವ ಲಕ್ಷ್ಮೀಕಾಂತ ಮಾಡಬಾರದ ಸರ್ಕಸ್ ಮಾಡುತ್ತಿದ್ದಾನೆ. ಹೊಸ ಚುನಾವಣೆಗಳು ನಡೆದರೆ ಬಹುತೇಕ ಸದಸ್ಯರು ಅವನ ವಿರುದ್ಧವಿರುವುದರಿಂದ ತಾನು ಮೂಲೆಗುಂಪಾಗುವುದು ಗ್ಯಾರಂಟಿ ಎಂಬುದು ಅವನಿಗೆ ಮನವರಿಕೆಯಾಗಿದೆ. ಹಾಗಾಗಿ, ಚುನಾವಣೆಯೇ ಆಗದಂತೆ ಅಡ್ಡದಾರಿಯ ಮೂಲಕ ಹೊರಟಿದ್ದಾನೆ.

ಇನ್ನೊಂದು ವಿಷಯವನ್ನಿಲ್ಲಿ ಹೇಳಬೇಕು. ಈ ಇಡೀ ಹಗರಣದಲ್ಲಿ ತನ್ನ ಹೆಸರು ಅಧಿಕೃತವಾಗಿ ಎಲ್ಲೂ ಬಾರದಂತೆ ಲಕ್ಷ್ಮೀಕಾಂತ ಎಚ್ಚರಿಕೆ ವಹಿಸಿದ್ದಾನೆ. ತನ್ನ ತಾಯಿ ಲಕ್ಷ್ಮಮ್ಮನವರನ್ನೇ ಮುಂದೆ ಬಿಟ್ಟು ಅವರ ಹೆಸರಿನಲ್ಲೇ ಎಲ್ಲಾ ಕೆಲಸ ನಡೆಸುತ್ತಿದ್ದಾನೆ. ಶಿಕ್ಷಣ ಸಂಸ್ಥೆಯ ಜಾಗ ತನ್ನದೇ ಸ್ವಂತ ಜಾಗವೆಂಬಂತೆ ವರ್ತಿಸುತ್ತಿರುವ ಆತ ಎನ್‌ಎಮ್‌ಕೆಆರ್‌ವಿ ಕಾಲೇಜಿನ ವೆಂಕಟೇಶ್ ಎಂಬ ಉಪನ್ಯಾಸಕನಿಗೆ ಟ್ಯೂಶನ್ ಮಾಡುವುದಕ್ಕಾಗಿ ಪ್ರತಿ ತಿಂಗಳು ಆರು ಸಾವಿರ ರೂಪಾಯಿ ಬಾಡಿಗೆ ಪಡೆದು ಸಂಸ್ಥೆಯ ಜಾಗವನ್ನು ಕೊಟ್ಟಿದ್ದಾನೆ. ಇನ್ನೊಂದೆಡೆ ವಾಸ್ತು ಜ್ಯೋತಿಷ್ಯ ಎಂತೆಲ್ಲಾ ಬುರುಡೆ ಹೊಡೆಯುವ ಬಸವರಿಗೆ ಜಾಗ ಕೊಟ್ಟು ಅವರಿಂದಲೂ ದುಡ್ಡು ವಸೂಲಿ ಮಾಡುತ್ತಿದ್ದಾನೆ. ಇನ್ನು ಅಧಿಕೃತವಾಗಿ ಶಿಕ್ಷಣ ಸಂಸ್ಥೆ ಇವನ ಕೈಗೆ ಬಂದರೆ ಏನಾಗಬಹುದೆಂದು ನೀವೇ ಊಹಿಸಿ.

● ಕುಮಾರ್ ಬುರಡಿಕಟ್ಟಿ


ಬುರುಡೆ ಬಸವ!

ಬೆಂಗಳೂರು ಬಿಜೆಪಿಯಲ್ಲಿ ಅತ್ಯಂತ ಫೋಟೋ ಪ್ರಿಯರೆಂದರೆ ಇಬ್ಬರು: ಕಾಮಾಕ್ಷಿಪಾಳ್ಯದ ರಂಗಣ್ಣ, ಇನ್ನೊಬ್ಬ ಜಯನಗರದ ಈ ಲಕ್ಷ್ಮೀಕಾಂತ. ಟೋ ತೆಗೆಯುತ್ತಿದ್ದಾರೆಂದರೆ ಎಲ್ಲರನ್ನೂ ಹಿಂದೆ ತಳ್ಳಿ ಮುಂದೆ ಬಂದು ರಾಕ್ಕೆ ತಮ್ಮ ಖರಾಬು ಮುಖವೊಡ್ಡುವುದು ಅವರ ಜಾಯಮಾನ. ಗಳಲ್ಲಿ, ಫ್ಲೆಕ್ಸ್-ವಿನೇಲ್ ಬ್ಯಾನರ್‌ಗಳಲ್ಲಿ ದೊಡ್ಡ ದೇಶ ನಿರ್ಮಾಪಕರಂತೆ ೂ ಕೈಎತ್ತಿ ಹಿಡಿದು ನಿಂತ ಫೋಟೋಗಳನ್ನು ಹಾಕಿಸಿಕೊಳ್ಳುವ ಗೀಳು ದ್ದು. ಮಾತೆತ್ತಿದ್ದರೆ ಅನಂತಕುಮಾರ್‌ನನ್ನು ನಾನೇ ಬೆಳೆಸಿದ್ದು, ಜಯನಗರದ ್ರೆ ವಿಜಯ್‌ಕುಮಾರ್‌ಗೆ ನಾನೇ ಗಾಡ್‌ಫಾದರ್ ಎಂಬಿತ್ಯಾದಿಯಾಗಿ ಬುರುಡೆ ುವುದು ಅವರ ಚಾಳಿ. ಸದ್ಯ ಅಡ್ವಾಣಿ, ವಾಜಪೇಯಿ, ಅರುಣ್ ಜೇಟ್ಲಿಗೂ ಮಾರ್ಗದರ್ಶನ ಮಾಡೋದು ಅಂತ ಹೇಳ್ತಿಲ್ಲ! ಕನಿಷ್ಠ ಎಮ್ಮೆಲ್ಲೆಯಾಗಿ ತಾಕತ್ತಿಲ್ಲದ ಈ ತಿರಬೋಕಿಗಳು ಇದಕ್ಕಿಂತ ಇನ್ನೇನು ಮಾಡಲು ಸಾಧ್ಯ ?

ಕ್ಷ್ಮೀಕಾಂತ ರಾಜಕೀಯವಾಗಿ ಬೆಳೆಯುವ ಮಹಾತ್ವಾಕಾಂಕ್ಷೆಯಿಟ್ಟುಕೊಂಡಿರುವ ಮನುಷ್ಯ. ತನ್ನ ಗುರಿಸಾಧನೆಗಾಗಿ ಎಂಥ ಹೇಯ ಕೃತ್ಯಕ್ಕೂ ಇಳಿಯುವುದಕ್ಕೆ ಅವನು ಹಿಂಜರಿಯುವುದಿಲ್ಲ. ಅದಕ್ಕೊಂದು ಉದಾಹರಣೆ ನೋಡಿ. ಯಡಿಯೂರಿನ ಬಿಜೆಪಿ ಸ್ಲಮ್ ಮೋರ್ಚಾದ ಜನರಲ್ ಸೆಕ್ರೆಟರಿ ಆಗಿದ್ದ ಚಂದ್ರು ಎಂಬಾತನನ್ನು 2007ರಲ್ಲಿ ಬಳ್ಳಾರಿ ಮತ್ತು ರಾಜ ಎಂಬಿಬ್ಬರು ಕೊಚ್ಚಿ ಮರ್ಡರ್ ಮಾಡಿದರು. ಹಾಗೆ ನೋಡಿದರೆ ಕೊಲೆಯಾದ ಈ ಚಂದ್ರು ಮತ್ತು ಲಕ್ಷ್ಮೀಕಾಂತ ಚೆಡ್ಡಿ ದೋಸ್ತುಗಳಂತಿದ್ದವರು. ಇಪ್ಪತ್ನಾಲ್ಕು ಗಂಟೆ ಜೊತೆಗೇ ತಿರುಗುತ್ತಿದ್ದವರು. ಚಂದ್ರುನ ಕೊಲೆಯಾದ ತಕ್ಷಣವೇ ಲಕ್ಷ್ಮೀಕಾಂತ ಅದಕ್ಕೆ ಸೇಡು ತೀರಿಸಿಕೊಳ್ಳುತ್ತಾನೆ ಎಂದೇ ಹಲವರು ಎಣಿಸಿದ್ದುಂಟು. ಆದರೆ, ಆತ ಮಾಡಿದ್ದೇನು ಗೊತ್ತೆ? ಚಂದ್ರುನನ್ನು ಕತ್ತರಿಸಿದ ಬಳ್ಳಾರಿ ಮತ್ತು ರಾಜನಿಗೆ ಈತನೇ ಜಾಮೀನು ಕೊಡಿಸಿದ! ಕೈತುಂಬಾ ದುಡ್ಡು ಕೊಟ್ಟ!

ಇಂದಿಗೂ ಲಕ್ಷ್ಮೀಕಾಂತನಿಗೆ ಅಂಡರ್‌ವರ್ಲ್ಡ್ ಪಾತಕಿಗಳೊಂದಿಗೆ ಲಿಂಕಿದೆ. ಮೊನ್ನೆ ತಾನೆ ಈತ ಪರಪ್ಪನ ಅಗ್ರಹಾರ ಮತ್ತು ಮಂಡ್ಯ ಜೈಲುಗಳಲ್ಲಿರುವ ಕ್ರಿಮಿನಲ್‌ಗಳಿಗೆ ಎರಡು ಲಕ್ಷ ದುಡ್ಡು ತಲುಪಿಸಿ ಬಂದಿರುವ ವಾಸನೆ ಸಿಟಿ ಕ್ರೈಮ್ ಬ್ರಾಂಚ್ ಪೊಲೀಸರ ಮೂಗಿಗೆ ಬಡಿಯುತ್ತಿದ್ದಂತೆಯೇ ಅವರೆಲ್ಲಾ ಈಗ ಲಕ್ಷ್ಮೀಕಾಂತನ ಹಿಂದೆ ಬಿದ್ದಿದ್ದಾರೆ. ಅವನ ಮೊಬೈಲ್ ಟ್ಯಾಪ್ ಮಾಡಿ ಅವನ ಚಲನವಲನಗಳ ಬಗ್ಗೆ ನಿಗಾಯಿಟ್ಟಿರುವುದು ಪ್ರಾಯಶಃ ಅವನಿಗೇ ಗೊತ್ತಿರಲಿಕ್ಕಿಲ್ಲ. ●

ವಿಷ್ಣು ದುಡಿದ ಹಣ ಏನಾಯ್ತು?



ಜಯನಗರದ ಮನೆ, ಮಗಳು ಕೀರ್ತಿ ಮತ್ತು ಅಳಿಯ ಅನಿರುದ್ಧನಿಗೆಂದು ಜೆ.ಪಿ.ನಗರದಲ್ಲಿ ಕಟ್ಟಿಸಿಕೊಟ್ಟ ಮನೆಬಿಟ್ಟರೆ ವಿಷ್ಣು ಈತನಕ ಮತ್ತೇನನ್ನೂ ಗಳಿಸಲೇ ಇಲ್ಲ. ಹಾಗಂತ ಈತನಕ ಗಳಿಸಿದ ದುಡ್ಡೇನಾಯಿತು? ಇಷ್ಟೆಲ್ಲಾ ದುಡಿದ ವಿಷ್ಣು ಅದನ್ನೆಲ್ಲ ಎಲ್ಲಿ ಕಳೆದರು?

● ರಾ. ಸೋಮನಾಥ್

ತಮಿಳುನಾಡು ಮೂಲದ ಫೈನಾನ್ಶಿಯರ್ ಮೆನನ್ ಎಂಬಾತನಿಗೆ ನಟ ವಿಷ್ಣುವರ್ಧನ್ ಎಂಟು ಕೋಟಿಯ ಸಾಲ ತೀರಿಸಬೇಕಿತ್ತಾ? ವಿಷ್ಣು ಕಣ್ಮುಚ್ಚಿದ ಸುದ್ದಿ ತಿಳಿದದ್ದೇ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿಯ ಪುತ್ರ ಸ್ಟಾಲಿನ್‌ನ ಮೊರೆ ಹೊಕ್ಕ ಆತ ಬಾಕಿ ವಸೂಲಿಗೆ ನಿಂತಿದ್ದಾನಾ? ಸ್ಟಾಲಿನ್ ಭಾರತಿಯವರಿಗೆ ಫೋನಾಯಿಸಿ ಬಾಕಿ ದುಡ್ಡಿಗೆ ಪೀಡಿಸಿದ್ದು ನಿಜವಾ? ತಮಿಳಿನ ಸೂಪರ್‌ಸ್ಟಾರ್ ರಜನೀಕಾಂತ್ ಜನವರಿ ಆರರಂದು ವಿಷ್ಣು ಮನೆಗೆ ಭೇಟಿ ಕೊಟ್ಟದ್ದು ಈ ಸಾಲಬಾಕಿಯ ಮಧ್ಯಸ್ಥಿಕೆಗಾಗಾ? ವಿಷ್ಣು ಪರಮಾಪ್ತ ಅಂಬರೀಶ್ ಮುಂದೆ ಭಾರತಿಯವರು ಫೈನಾನ್ಶಿಯರ್ ಮೆನನ್ ಕೊಟ್ಟಿದ್ದ ಸಾಲದ ಪ್ರಸ್ತಾಪವೆತ್ತಿ ಕಣ್ಣೀರಿಟ್ಟರಾ? ಅಂಬಿಯ ಕೋರಿಕೆಯ ಮೇರೆಗೆ ರಜನೀಕಾಂತ್ ಸಾಲದ ಚೌಕಾಶಿಗೆ ಕೈಹಾಕಿರಬಹುದೇ?

ಇದು ವಿಷ್ಣು ಸಾವಿನ ಬೆನ್ನಲ್ಲೇ, ಗಾಂಧಿನಗರದುದ್ದಕ್ಕೂ ಹೊಗೆಯಾಡುತ್ತಿರುವ ಲೇಟೆಸ್ಟ್ ಗಾಸಿಪ್ಪುಗಳು!

ಎಲ್ಲಿಯ ಫೈನಾನ್ಶಿಯರ್ ಮೆನನ್? ಎಲ್ಲಿಯ ಕರುಣಾನಿಧಿ ಪುತ್ರ ಸ್ಟಾಲಿನ್? ಮತ್ತು ಯಾವ ಎಂಟು ಕೋಟಿ? ರಜನೀಕಾಂತ್ ಸಾಂತ್ವನ ಹೇಳಲೆಂದೇ ಜಯನಗರದ ವಿಷ್ಣು ಮನೆಗೆ ಭೇಟಿ ಕೊಟ್ಟರೂ ಏಕೆ ಈ ಥರದ ಪುಕಾರೆದ್ದಿದೆ?

ಸದ್ಯ ಗಾಂಧಿನಗರದಲ್ಲಿ ಗುಲ್ಲೆದ್ದ ಮತ್ತೊಂದು ಗಾಸಿಪ್ಪೆಂದರೆ, ವಿಷ್ಣು ಕೂಡಿಟ್ಟಿದ್ದ ಚೂರುಪಾರು ದುಡ್ಡೆಲ್ಲವನ್ನೂ ಚಿತ್ರನಿರ್ಮಾಪಕ ಕೆ.ಮಂಜು ಹುಡಿಹಾರಿಸಿದ್ದಾರೆಂಬುದು. ಮೂರ್ನಾಲ್ಕು ಕೋಟಿಯಷ್ಟು ದುಡ್ಡನ್ನು ಚಿತ್ರ ನಿರ್ಮಾಣಕ್ಕೆಂದು ಕೆ.ಮಂಜುಗೆ ಬಡ್ಡಿಗೆ ಬಿಟ್ಟಿದ್ದರಂತೆ ವಿಷ್ಣು. ಕೆ.ಮಂಜು ತೆಗೆದ ಅನೇಕ ಚಿತ್ರಗಳು ಬರಕತ್ತಾಗದೇ ಕೊಟ್ಟ ಸಾಲವಾಗಲಿ ಅದರ ಬಡ್ಡಿಯಾಗಲಿ ಯಾವುದೂ ಗಿಟ್ಟದೇ ಹೋಗಿದ್ದರಿಂದಲೇ ವಿಷ್ಣು ಕೊರಗಿಗೆ ಬಿದ್ದರೆಂಬುದು ಒಂದು ಸುದ್ದಿ. ಸಾಲದ ಚಿಂತೆಗೆ ಬಿದ್ದೇ ವಿಷ್ಣು ಕೃಶರಾಗಿದ್ದರೆಂಬುದು ಮತ್ತೊಂದು ಸುದ್ದಿ. ದುಡ್ಡೂ ಕಾಸಿನ ಅನುಕೂಲವಿದ್ದಿದ್ದರೆ ಮೈಸೂರಿನ ವಿಕ್ರಮ್ ಆಸ್ಪತ್ರೆಯಂಥ ಸಾಧಾರಣ ರೇಟಿನ ಆಸ್ಪತ್ರೆಯನ್ನೇಕೆ ವಿಷ್ಣು ಹುಡುಕಿಕೊಂಡು ಹೋಗುತ್ತಿದ್ದರೆಂಬುದು ಕೆಲವರ ಪ್ರಶ್ನೆಯಾದರೆ ಸಾಕ್ಸ್ ಫ್ಯಾಕ್ಟರಿ ತೆರೆಯಲು ವಿಷ್ಣು ಕೈಹಾಕದೇ ಹೋಗಿದ್ದರೆ ಈ ಪಾಟಿ ಕೈ ಸುಟ್ಟುಕೊಳ್ಳುತ್ತಲೇ ಇರಲಿಲ್ಲ ಎಂಬುದು ಇನ್ನೂ ಕೆಲವರ ಕೊಂಕು.

ಇಂತಹ ಗಾಸಿಪ್ಪುಗಳ ಮಧ್ಯೆ ಎಲ್ಲಾದರೂ ಸತ್ಯವೆಂಬುದು ಅಡಗಿರಲೇಬೇಕಲ್ಲವೇ?

ಭಾರತಿ ಒಬ್ಬರ ಹೊರತಾಗಿ

ಆದರೆ ವಾಸ್ತವವೇ ಬೇರೆಯಿದೆ. ಕೆ.ಮಂಜು ಥರದವರಿಗೆ ಬಡ್ಡಿಗೆ ಬಿಡುವುದಾಗಲಿ, ಅಂಥವರನ್ನಿಟ್ಟುಕೊಂಡು ಲೇವಾದೇವಿ ಮಾಡುವುದಾಗಲಿ ವಿಷ್ಣು ಜಾಯಮಾನವಾಗಿರಲಿಲ್ಲ. ಪತ್ನಿ ಭಾರತಿಯವರನ್ನು ಬಿಟ್ಟರೆ ದುಡ್ಡುಕಾಸಿನ ವಿಷಯದಲ್ಲಿ ಬೇರೆ ಯಾರನ್ನೂ ವಿಷ್ಣು ನಂಬುತ್ತಿರಲಿಲ್ಲ. ಒಂದೋ ಎರಡೋ ಲಕ್ಷದ ಬಾಕಿಗಾಗಿ ತನ್ನ ಅನಾದಿಕಾಲದ ಗೆಳೆಯ ದ್ವಾರಕೀಶ್ ಮುಖವನ್ನೂ ಲೆಕ್ಕಿಸದ ವಿಷ್ಣು ಯಾವುದೇ ದಾಖಲೆಯಾಗಲೀ, ಗ್ಯಾರಂಟಿಯಾಗಲೀ ಇಲ್ಲದೇ ಕೆ.ಮಂಜು ಕೈಗೆ ಕೋಟಿಗಟ್ಟಲೇ ದುಡ್ಡು ಕೊಡುವುದುಂಟಾ? ಕೊಟ್ಟಿದ್ದರೆ ಪತ್ನಿ ಭಾರತಿಯವರ ಗಮನಕ್ಕೆ ಬರದೆ ಇರುವುದುಂಟಾ?

ಹೆಚ್ಚೆಂದರೆ ತನ್ನ ಕಾಲ್‌ಶೀಟ್ ರೇಟಿನಲ್ಲಿ ಒಂದೋ ಎರಡೋ ಲಕ್ಷದ ರಿಯಾಯತಿ ಕೊಟ್ಟಿರಬಹುದು. ಅಥವಾ ಐದೋ ಹತ್ತೋ ಲಕ್ಷದಷ್ಟು ಕಮ್ಮಿ ಮಾಡಿರಬಹುದು. ಅದು ಬಿಟ್ಟರೆ ವಿಷ್ಣು ಕಾಲ್‌ಶೀಟು, ಬಂದ ದುಡ್ಡು, ಅದರ ಲೆಕ್ಕ, ಲೇವಾದೇವಿ ಎಲ್ಲವನ್ನೂ ನಿಭಾಯಿಸುತ್ತಿದ್ದದ್ದು ಪತ್ನಿ ಭಾರತಿಯವರೇ. ದುಡ್ಡೂ ಕಾಸಿನ ವಿಷಯಕ್ಕೆ ಬಂದರೆ ವಿಷ್ಣು ಪಕ್ಕಾ ಲೆಕ್ಕಾಚಾರದ ಮನುಷ್ಯ. ಕಳೆದ ಹತ್ತು ವರ್ಷಗಳ ಅವರ ಸಿನಿಮಾ ಬದುಕಿನ ಲೆಕ್ಕಾಚಾರವನ್ನೇ ತೆಗೆದುಕೊಂಡರೂ ವರ್ಷಕ್ಕೆ ಎರಡೋ ಅಥವಾ ಮೂರೋ ಸಿನಿಮಾ ಮಾಡಿದರೆ ಅದೇ ಹೆಚ್ಚು.

ತನ್ನ ಜನ್ಮಾಪಿ ಯಾವತ್ತೂ ವಿಷ್ಣು ಒಂದು ಕೋಟಿಯ ಸಂಭಾವನೆ ಪಡೆಯಲೇ ಇಲ್ಲ. 'ಯಜಮಾನ' ಹಿಟ್ ಆಗುವತನಕ ಅವರ ಕಾಲ್‌ಶೀಟ್ ರೇಟು ಮೂವತ್ತು ಲಕ್ಷವನ್ನು ಮೀರೇ ಇರಲಿಲ್ಲ. 1990ರಲ್ಲಿ ತೆರೆ ಕಂಡ 'ಮತ್ತೆ ಹಾಡಿತು ಕೋಗಿಲೆ' ಚಿತ್ರಕ್ಕೆ ವಿಷ್ಣು ಪಡೆದದ್ದು ಕೇವಲ ಏಳೂವರೆ ಲಕ್ಷ ಮಾತ್ರ. ಅವರ ಸಂಭಾವನೆ ಎರಡಂಕಿಯನ್ನು ದಾಟಿದ್ದು 1995ರ ನಂತರವೇ. 1995ರಲ್ಲಿ ಬನಶಂಕರಿ ಶಂಕರ್ ನಿರ್ಮಿಸಿದ 'ಬಂಗಾರದ ಕಳಸ' ಚಿತ್ರಕ್ಕೆ ಪಡೆದ ಹನ್ನೆರಡು ಲಕ್ಷವೇ ವಿಷ್ಣು ಆ ಕಾಲಕ್ಕೆ ಪಡೆದ ಅತೀ ದೊಡ್ಡ ಸಂಭಾವನೆಯಾಗಿತ್ತು. ಇಸವಿ 2000ದ ಹೊತ್ತಿಗಷ್ಟೇ ವಿಷ್ಣು ಕಾಲ್‌ಶೀಟ್‌ನ ಬೆಲೆ ನಲವತ್ತು ಲಕ್ಷವನ್ನು ಮುಟ್ಟಿದ್ದು. ಅಂಥಾ ಹಿಟ್ಟಾದ 'ಆಪ್ತಮಿತ್ರ'ಕ್ಕೂ ವಿಷ್ಣು ಪಡೆದದ್ದು ಬರೇ ಐವತ್ತು ಲಕ್ಷ ಮಾತ್ರ. ತೀರ ಇತ್ತೀಚೆಗೆ ಕಾಮಿಡಿ ಗಣೇಶ್‌ನಂಥ ಹೊಸ ನಟರು ಚಿತ್ರವೊಂದಕ್ಕೆ ಒಂದು ಕೋಟಿಯಷ್ಟು ದುಡ್ಡೆಣಿಸಿಕೊಳ್ಳುತ್ತಿದ್ದರೂ, ಸೂಪರ್‌ಸ್ಟಾರ್ ಪುನೀತ್ ತನ್ನ ಚಿತ್ರವೊಂದಕ್ಕೆ ಒಂದೂ ಮುಕ್ಕಾಲು ಕೋಟಿ ಪಡೆಯುತ್ತಿದ್ದರೂ, ದರ್ಶನ್, ಸುದೀಪ್, ವಿಜಯ್, ಥರದವರೆಲ್ಲ ಎಂಬತ್ತು, ತೊಂಬತ್ತು ಲಕ್ಷಗಳೆಣಿಸುತ್ತಿರುವಾಗಲೂ ವಿಷ್ಣು ತನ್ನ ಸಂಭಾವನೆಯನ್ನು ಎಪ್ಪತ್ತು ಲಕ್ಷಕ್ಕಿಂತ ಮೇಲೆ ಏರಿಸಲೇ ಇಲ್ಲ.

ಇತ್ತೀಚಿನ 'ಬಳ್ಳಾರಿ ನಾಗ' ಚಿತ್ರಕ್ಕೆ ವಿಷ್ಣು ಪಡೆದದ್ದು ಐವತ್ತು ಲಕ್ಷ ಮಾತ್ರ. ಅದೂ ಕೆ.ಮಂಜು ತನ್ನ ಶಿಷ್ಯನೆಂಬ ಕಾರಣಕ್ಕೆ ಕೊಟ್ಟ ರಿಯಾಯಿತಿಯಾಗಿತ್ತು. ಅದು ಬಿಟ್ಟರೆ ಸಿ.ಆರ್. ಮನೋಹರ್ ಮತ್ತು ಉಮೇಶ್ ಬಣಕಾರ್ ಜಂಟಿ ನಿರ್ಮಾಣದ 'ಸ್ಕೂಲ್ ಮಾಸ್ಟರ್' ಮತ್ತು ಇನ್ನೂ ತೆರೆಕಾಣದ ಕೇಕೆ ನಿರ್ಮಾಣದ 'ಆಪ್ತರಕ್ಷಕ' ಚಿತ್ರಕ್ಕೆಂದು ತಲಾ ಎಪ್ಪತ್ತು ಲಕ್ಷದಂತೆ ವಿಷ್ಣು ಪಡೆದ ಸಂಭಾವನೆಯೇ ಅವರ ಬದುಕಿನ ಗರಿಷ್ಠ ಮೊತ್ತವಾಗಿತ್ತು.

ಎರಡಂಕಿ ದಾಟಲಿಲ್ಲ!




ವಿಷ್ಣು ಮನೆ...



ಗಾಂಧಿನಗರದ ಭಾರತಿಯ ಕಾಂಪ್ಲೆಕ್ಸ್



ಜೆ.ಪಿ.ನಗರದ ಅನಿರುದ್ಧ್ ಮನೆ...



ಕೊಬ್ರಿ ಮಂಜು ಹೇಳಿದ್ದು!

ನನ್ನಿಂದಾಗಿ ವಿಷ್ಣು ಸಾರ್‌ಗೆ ನಷ್ಟ ಆಯ್ತು, ನನ್ನ ಮೂಲಕ ಅವರು ಸಿನಿಮಾ ಫೈನಾನ್ಸಿಂಗ್ ಮಾಡ್ತಾ ಇದ್ರು ಅಂತ ಯಾರಾದ್ರೂ ನಂಬಿಕೊಂಡಿದ್ದರೆ ಅದು ಅವರ ಮೂರ್ಖತನ ಮತ್ತು ವಿಷ್ಣು ಬಗ್ಗೆ ಅವರಿಗಿರುವ ಅಜ್ಞಾನ ಮಾತ್ರ. ದಾನ-ಧರ್ಮದ ವಿಷಯ ಬಿಟ್ಟರೆ ವ್ಯವಹಾರಿಕವಾಗಿ ವಿಷ್ಣು ಸಾರ್ ಭಾರತಿಯವರನ್ನು ಬಿಟ್ಟು ಏನನ್ನೂ ಮಾಡಿದವರಲ್ಲ. ನನಗೇನಾದರೂ ಕಾಸು ಕೊಟ್ಟದ್ರೆ ಬೇರೆ ಯಾರಿಗಲ್ಲದೇ ಇದ್ರೂ ಭಾರತಿಯವರಿಗಾದ್ರೂ ಗೊತ್ತಿರಬೇಕಿತ್ತಲ್ಲವೆ?


ಇರಲಿ, ಜನಕ್ಕೇನಿದ್ದರೂ ಬೇಡದ ವಿಷಯಗಳಲ್ಲೇ ತಾನೇ ಕೆಟ್ಟ ಕುತೂಹಲ. ದುಡ್ಡುಕಾಸಿನ ವಿಷಯದಲ್ಲಿ ವಿಷ್ಣು ಸಾರ್‌ಗೆ ಸಣ್ಣ ಅನುಮಾನ ಬಂದರೂ ಅಂಥವರನ್ನು ಯಾವತ್ತೂ ನಂಬೋಲ್ಲ ಮತ್ತು ಮನೆಗೇ ಸೇರಿಸೋಲ್ಲ. ಕಾಲ್‌ಶೀಟ್ ಕೊಡುವುದರಲ್ಲೂ ವಿಷ್ಣು ಚೂಸಿ. ಕಾಸು ಕೊಟ್ಟವರಿಗೆಲ್ಲ ಕಾಲ್‌ಶೀಟ್ ಕೊಡುತ್ತಾ ಹೋಗಿದ್ದರೆ ಅದೆಷ್ಟು ಸಂಪಾದಿಸುತ್ತಿದ್ದರೋ. ವ್ಯಕ್ತಿ ಒಳ್ಳೆಯವನು, ತನ್ನ ಬಗ್ಗೆ ಗೌರವವಿದೆ ಎಂಬುದನ್ನು ಪರೀಕ್ಷಿಸಿದ ನಂತರವೇ ಕಾಲ್‌ಶೀಟ್ ಕೊಡೋದು ಅವರ ಸ್ವಭಾವ.

ನನಗೆಂದು ಕಾಣಿಕೆಯಾಗಿ ವಿಷ್ಣು ಸಾರ್ ಸ್ಕೋಡಾ ಕಾರ್ ಕೊಟ್ಟರು. ನಿಮ್ಮಿಂದ ಫ್ರೀಯಾಗಿ ಏನೂ ಬೇಡ ಎಂದು ನಾನೇ [illegible]ಲೆ ಬಿದ್ದು ಅದರ ದುಡ್ಡು ಕೊಟ್ಟೆ. 'ಮಾತಾಡ್ ಮಲ್ಲಿಗೆ'ಯಲ್ಲಿ ಲಾಸ್ ಆಯ್ತು ಎಂದು ಬೇಸರ ಮಾಡಿಕೊಂಡರು. ಅದರ ನಷ್ಟ ಭರಿಸೋದಕ್ಕೆ ಮತ್ತೊಂದು ಫ್ರೀ ಕಾಲ್‌ಶೀಟ್ [illegible]ತ್ತೀನಿ ಅಂತಲೂ ಹೇಳಿದ್ರು. ಹಿಂದಿಯ 'ಸರ್ಕಾರ್' ಚಿತ್ರವನ್ನು ಸುದೀಪ್ ನಿರ್ದೇಶನದಲ್ಲಿ ಕನ್ನಡದಲ್ಲಿ ಮಾಡೋದಕ್ಕೆ ಮಾತಾಗಿತ್ತು. ಆದರೆ ವಿಷ್ಣು ಸಾರ್ ಕೊಟ್ಟ ಉಚಿತ [illegible]ಶೀಟ್ ಆಫರ್ ಅನ್ನು ನಾನು ತಿರಸ್ಕರಿಸಿಬಿಟ್ಟೆ. ಫ್ರೀ ಆಗಿ ನಿಮ್ಮಿಂದ ಏನೂ ಬೇಡ ಎಂದಿದ್ದೆ. ದುಡ್ಡೂ ಕಾಸು ನೋಡಿ ಮನುಷ್ಯ ಸಂಬಂಧವನ್ನು ನಿರ್ಧರಿಸುವ ವ್ಯಕ್ತಿತ್ವ [illegible]ರದಾಗಿದ್ದರೆ ಇಷ್ಟೆಲ್ಲ ಪ್ರಶಸ್ತಿ ಪುರಸ್ಕಾರ ಪಡೆದ ನಂತರವೂ ಬಿಡಿಎ ಸೈಟಿಗಾಗಿ ಅರ್ಜಿ ಹಾಕದೇ ಇರುತ್ತಿದ್ದರಾ? ಅವರೇನಾದ್ರೂ ಸೈಟು ಕೇಳಿದ್ರೆ ಸರ್ಕಾರ ಕೊಡದೇ ಇರುತ್ತಿತ್ತಾ? 'ನಮ್ಮೆಜಮಾನ್ರು' ಬಿಡುಗಡೆಯಾಗದೇ ನಿಂತುಹೋಗುವ ಪರಿಸ್ಥಿತಿ ಬಂದಾಗ ನನಗೊಂದು ಮಾತು ಹೇಳಿದ್ದಕ್ಕೆ ನಾನೇ ದುಡ್ಡು ಬಿಡುಗಡೆ ವ್ಯವಸ್ಥೆ ಮಾಡಿದ್ದೆ. ಅವರ ಮಾತಿಗೆ ಕೊಟ್ಟು ಅವತ್ತು ಹಾಕಿದ ದುಡ್ಡಲ್ಲಿ ಈತನಕ ನಯಾಪೈಸೆ ಬರಲಿಲ್ಲ. ನಾನು ಅವರ ಅಭಿಮಾನಿ. ನನಗವರು ಸ್ವಂತ ಅಣ್ಣನಿಗಿಂತ ಮಿಗಿಲು. ಅವರು ಈತನಕ ತೋರಿಸಿರೋ [illegible]ತಿಯ ಮುಂದೆ ದುಡ್ಡೂಕಾಸು ಯಾವ ಲೆಕ್ಕ? ಬಾಯಿ ಚಪಲಕ್ಕೆ ಯಾರೋ ಏನೇನೋ ಟೀಕೆ ಮಾಡಿದ್ದಕ್ಕೆ ನಾನ್ಯಾಕೆ ತಲೆ ಕೆಡಿಸಿಕೊಳ್ಳಲಿ?

[illegible]ಕೆ. ಮಂಜು ಹೇಳಿದ್ದಿಷ್ಟು.

[illegible]ದರರ್ಥ ನೂರು ಚಿತ್ರದ ತನಕ ವಿಷ್ಣು [illegible]ವನೆ ಎರಡಂಕಿಯನ್ನು ದಾಟೇ ಇರಲಿಲ್ಲ. [illegible]ಕನ ಕೊನೆಗಾಲದ ಹತ್ತು ವರ್ಷಗಳಲ್ಲಿ ಕನಿಷ್ಠ [illegible]ಚಿತ್ರಗಳಿಗೆ ತಲಾ ಐವತ್ತು ಲಕ್ಷದಂತೆ ಲೆಕ್ಕ [illegible]ಕರೂ ಅದು ಹನ್ನೆರಡೂವರೆ ಕೋಟಿಯಷ್ಟು [illegible]. ಅಂದರೆ ವಿಷ್ಣು ನೂರು ಚಿತ್ರಗಳಲ್ಲಿ [illegible]ದ್ದರೂ ದುಡಿದದ್ದು ಬರಿ ಐದುಕೋಟಿ [illegible]. ತಮ್ಮ 175ನೇ ಚಿತ್ರದ ಹೊತ್ತಿಗೆ ಸರಾಸರಿ [illegible]ಕ್ಷದಂತೆ ಲೆಕ್ಕ ಹಾಕಿದರೂ ವಿಷ್ಣು ಉಳಿಕೆ 75 [illegible]ಸಿಗೆಂದು ಪಡೆದ ಒಟ್ಟು ಮೊತ್ತ ಹನ್ನೆರಡು [illegible]ಯನ್ನು ದಾಟುವುದಿಲ್ಲ. ಇದರರ್ಥ ವಿಷ್ಣು [illegible] ಜನ್ಮಾಪಿ ಮೂವತ್ತು ಕೋಟಿಗೂ ಹೆಚ್ಚು [illegible]ಲೇ ಇಲ್ಲ!

[illegible]ೀಗೆ ದುಡಿದ ಮೂವತ್ತು ಕೋಟಿಯಲ್ಲಿ [illegible] ಕಾಲುಭಾಗವಾದರೂ ಮತ್ತೆ ನಿರ್ಮಾಪಕರ [illegible]ರುತ್ತದೆ. ಬೇರೆ ನಟರಂತೆ ವಿಷ್ಣು ಶೂಟಿಂಗಿಗೆ [illegible]ಪಕನ ಕಾರು ಬಳಸುವುದಿಲ್ಲ. ತಮ್ಮದೇ [illegible] ಬರುತ್ತಾರೆ. ಜೊತೆಗೆ ಬರುವ ನಾಲ್ವರು [illegible]ಯಕರ ಊಟ, ಬಾಟಾ, ಸಂಬಳ ಎಲ್ಲವನ್ನೂ [illegible] ಭರಿಸುತ್ತಾರೆ. [illegible] ಡೀಸೆಲ್‌ನಿಂದ [illegible] ತಂಗುವ [illegible]ಟೆಲ್ ಬಾಡಿಗೆ, [illegible]ವ ಊಟ, [illegible]ಯುವ ಮಿನರಲ್ [illegible] ಕೊನೆಗೆ [illegible]ಗ್‌ನ [illegible]ಮ್ ಕೂಡ [illegible] ಸಂಭಾವನೆಯ [illegible]ಲ್ಲೇ [illegible]ವುದು [illegible]



[illegible]ಗುಣ. ನಿರ್ಮಾಪಕರ ಪಾಲಿಗೂ ವಿಷ್ಣು [illegible]ಂಧವ.

[illegible]ಗಾಗಿ ವಿಷ್ಣು ಪಡೆಯುವ ಸಂಭಾವನೆಯ [illegible] ಭಾಗದಷ್ಟು ದುಡ್ಡು ಒಂದಲ್ಲ ಒಂದು [illegible]ಲ್ಲಿ ಮತ್ತೆ ನಿರ್ಮಾಪಕನಿಗೆ [illegible]ಯವಾಗಿರುತ್ತದೆ. ಇಂಥಾದ್ದರಲ್ಲಿ ಮನೆ ವೆಚ್ಚ [illegible], ದಾನ-ಧರ್ಮ, ಆರೋಗ್ಯ, ಔಷಧಿ [illegible]ಯೆಲ್ಲವನ್ನೂ ಕಳೆದು ವಿಷ್ಣು [illegible]ನ್ನಾದರೂ ಯಾವ ಮಹಾ ದುಡ್ಡು?

[illegible]ಜ್ ಕ್ಯಾಂಪಿನಂತೆ ವಿಷ್ಣು ಸ್ವಂತ [illegible]ಣಕ್ಕಿಳಿಯಲಿಲ್ಲ. ಸ್ವಂತ ಔಟ್‌ಡೋರ್ [illegible]ಟ್ಟು, ಹಂಚಿಕೆ ಸಂಸ್ಥೆ, ರೆಕಾರ್ಡಿಂಗ್ [illegible]ಹೋ ಯಾವುದಕ್ಕೂ ಕೈಹಾಕಲಿಲ್ಲ. [illegible]ಬಂತೆ ಸಿನಿಮಾ ಹೊರತಾದ ಪಾಲಿಟಿಕ್ಸ್, [illegible] ಕಾಂಟ್ರ್ಯಾಕ್ಟು, ಬಿಜಿನೆಸ್ಸಿಗೆ [illegible]ಗಲೇ ಇಲ್ಲ. ಎರಡೋ ಮೂರೋ [illegible]ತ್ತು ಭಾರೀ ಮಹತ್ವಾಕಾಂಕ್ಷೆಯಿಟ್ಟು [illegible]ಸಿದ ಉದ್ದಿಮೆಗೆಂದು ಹಾಕಿದ [illegible]ಳ ಕೂಡ ವಾಪಸ್ಸು ಗಿಟ್ಟಲೇ ಇಲ್ಲ. [illegible]ಅಲ್ಪತೃಪ್ತ, ವಿನಾಕಾರಣದ ರಿಸ್ಕಿಗೆ


ಕೈಹಾಕುವ ಸಾಹಸಿಯಲ್ಲ, ಮಹತ್ವಾಕಾಂಕ್ಷಿಯಲ್ಲ. ಇವತ್ತು ದುಡ್ಡೂ ಕಾಸಿನ ವಿಷಯಕ್ಕೆ ಸಂಬಂಧಪಟ್ಟಂತೆ ವಿಷ್ಣು ಬಗ್ಗೆ ತಲೆಗೊಂದು ಪುಕಾರೆದ್ದಿದೆಯೆಂದರೆ ಅದಕ್ಕೆ ಇದು ಬಿಟ್ಟರೆ ಬೇರೆ ಕಾರಣಗಳಿಲ್ಲ.

ಜನಕ್ಕೆ ವಿಷ್ಣು ಥರದ ಸೂಪರ್‌ಸ್ಟಾರ್ ಓರ್ವನ ಬಗ್ಗೆ ಚಿತ್ರವಿಚಿತ್ರ ಕಲ್ಪನೆಗಳಿರುತ್ತವೆ. ಆತ ನೂರಾರು ಕೋಟಿಯ ಒಡೆಯನೆಂದೂ, ಬೇಕಾಬಿಟ್ಟಿ ಬಿಜಿನೆಸ್ಸು, ಆಸ್ತಿ, ಫೈನಾನ್ಸಿಂಗ್ ಏನೆಲ್ಲಾ ಇದೆಯೆಂದೂ, ಪ್ರಭಾವಿ ವಲಯವೇ ವಿಷ್ಣು ಸಾಮ್ರಾಜ್ಯವೆಂದು ಯಾರಾದರೂ ಲೆಕ್ಕ ಹಾಕಿದರೆ ಅದು ಶುದ್ಧ ತಪ್ಪು.

ಜಯನಗರದ ಮನೆ, ಅಳಿಯ ಅನಿರುದ್ಧನಿಗೆಂದು ಜೆ.ಪಿ.ನಗರದಲ್ಲಿ ಕಟ್ಟಿಸಿಕೊಟ್ಟ ಮನೆಬಿಟ್ಟರೆ ವಿಷ್ಣು, ಈತನಕ ಮತ್ತೇನನ್ನೂ ಗಳಿಸಲೇ ಇಲ್ಲ. ಹಾಗಂತ ಈತನಕ ಗಳಿಸಿಧ ದುಡ್ಡೇನಾಯಿತು? ಇಷ್ಟೆಲ್ಲಾ ದುಡಿದ ವಿಷ್ಣು ಅದನ್ನೆಲ್ಲ ಎಲ್ಲಿ ಕಳೆದರು?

ಬಾಲಿವುಡ್ ಗುಂಗು

ಇಂಥ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದಂತೆಲ್ಲ ಹೇಗೆ ವಿಷ್ಣು ಕಂಡ ಕನಸುಗಳೆಲ್ಲ ಒಂದೊಂದಾಗಿ ಮಣ್ಣುಗೂಡಿದವೆಂಬುದಕ್ಕೆ ಪುರಾವೆ ಸಿಗುತ್ತದೆ. ತಾನು ಹಿಂದಿಚಿತ್ರರಂಗದಲ್ಲಿ ಮಿಂಚಬೇಕೆಂಬುದು ವಿಷ್ಣುವಿನ ಅತೀ ದೊಡ್ಡ ಕನಸಾಗಿತ್ತು. ಅದಕ್ಕೆಂದು ತಮ್ಮ ತಾಯಿಯ ಹೆಸರಿಟ್ಟು 'ಕಾಮಾಕ್ಷಿ ಫಿಲಂಸ್' ಎಂಬ ಸಂಸ್ಥೆ ಸ್ಥಾಪಿಸಿದರು. ಅದು 1997ರ ಕಾಲ. ಬಾಲಿವುಡ್ ಗುಂಗಿನಲ್ಲಿದ್ದ ವಿಷ್ಣು ತಾವೇ ಹೀರೋ ಆಗಿ ಹಿಂದಿ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಏಕಕಾಲಕ್ಕೆ ನಿರ್ಮಿಸಿದ್ದು 'ಇನ್ಸ್‌ಪೆಕ್ಟರ್ ಧನುಷ್', ಕನ್ನಡದಲ್ಲಿ ಅದು 'ಪೋಲೀಸ್ ಮತ್ತು ದಾದಾ' ಆಗಿತ್ತು. ಸಂಗೀತಾ ಬಿಜಲಾನಿ ರೂಪಾ ಗಂಗೂಲಿಯಂಥ ಹಿಂದಿ ನಟರಿದ್ದ 'ಇ.ಧನುಷ್'ನಲ್ಲಿ ವಿಷ್ಣು ದ್ವಿಪಾತ್ರದಲ್ಲಿ ನಟಿಸಿದ್ದರು. ಆ ಕಾಲಕ್ಕೆ



ಸರಿಸುಮಾರು ಮೂರು ಕೋಟಿ ಹಾಕಿ ನಿರ್ಮಿಸಿದ 'ಇ.ಧನುಷ್' ಇನ್ನಿಲ್ಲದಂತೆ ತೋಪಾಯಿತು.

ಅದು ವಿಷ್ಣುಗಾದ ಮೊದಲ ಆಘಾತ. ಅಷ್ಟಾಗ್ಯೂ ಧೃತಿಗೆಡದ ವಿಷ್ಣು 'ನಿಶಾಂತ್' ಎಂಬ ಎರಡನೇ ಹಿಂದಿ ಚಿತ್ರಕ್ಕೆ ಕೈಯಿಟ್ಟರು. ಆಗಿನ್ನೂ ಕಣ್ಣುಬಿಡುತ್ತಿದ್ದ ಹಿಂದಿಯ ಅಕ್ಷಯ್‌ಕುಮಾರ್ ಜೊತೆಗೆ ಅಶ್ವಿನಿ ಭಾವೆ, ಮಮತಾಕುಲಕರ್ಣಿ, ಪಂಕಜ್ ಧೀರ್ ಮುಂತಾದವರ ತಾರಾಗಣವಿದ್ದ 'ನಿಶಾಂತ್' ಕೂಡ ಕನ್ನಡದಲ್ಲಿ 'ವಿಷ್ಣು ವಿಜಯ'



ಆಗಿತ್ತು. ಹೆಚ್ಚೂಕಮ್ಮಿ ಇದು ಕೂಡ ಮೂರು ಕೋಟಿಯ ಚಿತ್ರವಾಗಿತ್ತು. ಯಾಕೋ 'ವಿಷ್ಣು ವಿಜಯ' ತೆರೆಕಂಡ ಎರಡೇ ವಾರಕ್ಕೆ ತೋಪು ಬಿತ್ತು.

ಅನಂತರ 'ಜಾಲಿಮ್' ಎಂಬ ಮತ್ತೊಂದು ಹಿಂದಿ ಚಿತ್ರದಲ್ಲಿ ವಿಷ್ಣು ನಟಿಸಿದರಾದರೂ ಅದು ತೆರೆಕಾಣಲೇ ಇಲ್ಲ. ಇನ್ಸ್‌ಪೆಕ್ಟರ್ ಧನುಷ್ ಮತ್ತು ನಿಶಾಂತ್ ಎಂಬ ಎರಡು ಹಿಂದಿ ಚಿತ್ರಗಳಿಂದಾಗಿ ವಿಷ್ಣು ಕಮ್ಮಿಯೆಂದರೂ ಐದು ಕೋಟಿಯಷ್ಟು ಕೈಸುಟ್ಟುಕೊಂಡಾಗಿತ್ತು.

ಸಾಕ್ಸ್ ಫ್ಯಾಕ್ಟರಿ

ಇದರಿಂದ ಸುಧಾರಿಸಿಕೊಳ್ಳುವ ಹೊತ್ತಿಗೆ ಹತ್ತು ವರ್ಷಗಳೇ ಕಳೆದುಹೋಗಿದ್ದವು. ಅಷ್ಟೋ ಇಷ್ಟೋ ಚೇತರಿಸಿಕೊಂಡ ವಿಷ್ಣು ಈ ಬಾರಿ ಇನ್ನೂ ದೊಡ್ಡ ರಿಸ್ಕಿಗೆ ಕೈಯಿಟ್ಟರು. ಅದು ತನ್ನ ಅಕ್ಕನ ಮಗ ರಂಗನ ಮಾಲೀಕತ್ವದ ಸಾಕ್ಸ್ ಫ್ಯಾಕ್ಟರಿ. ಅದಕ್ಕೆಂದು ಬನ್ನೇರುಘಟ್ಟ ರಸ್ತೆಯಲ್ಲಿ ಎಕರೆಗಟ್ಟಲೇ ಜಮೀನು ಖರೀದಿಸಿದ್ದರು. ಕೆಎಸ್‌ಎಫ್‌ಸಿಯಿಂದ ಮೂರು ಕೋಟಿಯಷ್ಟು ಸಾಲವಲ್ಲದೇ ತಮಗೆ ಪರಿಚಿತರಿದ್ದ ಒಂದಿಬ್ಬರು ಶ್ರೀಮಂತರಿಂದ ಇನ್ನೂ ಹಲವು ಕೋಟಿಗಳಷ್ಟು ಕೈಗಡ ಪಡೆದುಕೊಂಡಿದ್ದರು. ಫ್ಯಾಕ್ಟರಿ ಕಟ್ಟಡ, ಯಂತ್ರಗಳು, ಕಾರ್ಮಿಕರು ಎಲ್ಲವೂ

ನೆರವೇರಿ ಇನ್ನೇನು ಸಾಕ್ಸುಗಳು ಮಾರುಕಟ್ಟೆಗೆ ಬರಬೇಕೆನ್ನುವಷ್ಟರಲ್ಲಿ ಅಂತರರಾಷ್ಟ್ರೀಯ ಕ್ಯಾಜುವಲ್ ಗಾರ್ಮೆಂಟ್ಸ್ ಮಾರುಕಟ್ಟೆಯ ಸ್ವರೂಪವೇ ಬದಲಾಗಿಹೋಗಿತ್ತು. ಪಾಶ್ಚಿಮಾತ್ಯ ರಾಷ್ಟ್ರಗಳೆಲ್ಲ ಏಕಾಏಕಿ ಬಾಂಗ್ಲಾ, ಪಾಕಿಸ್ತಾನ್, ಮಾರಿಷಸ್‌ನ ಅಗ್ಗದ ಕಾರ್ಮಿಕರತ್ತ ಮುಖ ಮಾಡಿದ್ದವು. ದೇಶಿಯ ಮಾರುಕಟ್ಟೆಗೆ ಬಂದರೆ ತಮಿಳುನಾಡಿನ ತಿರುಪ್ಪೂರಿನ ಅಸಂಖ್ಯಾತ ಟೆಕ್ಸ್‌ಟೈಲ್ಸ್ ಘಟಕಗಳು ಅರ್ಧಕ್ಕೂ ಕಮ್ಮಿರೇಟಿಗೆ ಸಾಕ್ಸು, ಬನಿಯನ್‌ಗಳನ್ನು ಮಾರಾಟಕ್ಕಿಟ್ಟಿದ್ದವು.

ವಿಷ್ಣು ಫ್ಯಾಕ್ಟರಿಯ ಜೊತೆ ಸಾಕ್ಸ್ ಒಂದಕ್ಕೆ ನೂರೈವತ್ತು ರೂಪಾಯಿಯಾದರೆ ಫುಟ್‌ಪಾತ್‌ನಲ್ಲಿ ಆ ರೇಟಿಗೆ ಮೂರು ಜೊತೆ ಸಾಕ್ಸುಗಳು ಸಿಗುತ್ತಿದ್ದವು!

ಅಲ್ಲಿಗೆ ಸಾಕ್ಸ್ ಫ್ಯಾಕ್ಟರಿಯ ಯೋಜನೆಯನ್ನೇ ವಿಷ್ಣು ಕೈ ಬಿಟ್ಟರು. ಫ್ಯಾಕ್ಟರಿಯ ಜಮೀನು ಮಾರಿದ ದುಡ್ಡು ಯಂತ್ರಗಳ ಸಾಲದ ಬಡ್ಡಿಗೆ ಸರಿಹೋಗಿತ್ತು. ಕಾಂಗ್ರೆಸ್ ಸರ್ಕಾರವಿತ್ತಾದ್ದರಿಂದ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದ ದೇಶಪಾಂಡೆ ಕೆಎಸ್‌ಎಫ್‌ಸಿ ಸಾಲಕ್ಕೆ ಒಂದಷ್ಟು ರಿಯಾಯಿತಿ ಕೊಡಿಸಿದ್ದೇ ಬಂತು. ಅಕ್ಕನ ಮಗ ರಂಗನ ಭವಿಷ್ಯ ರೂಪಿಸಲು ಹೆಚ್ಚುಕಮ್ಮಿ ಮೂರ್‍ನಾಲ್ಕು ಕೋಟಿಯಷ್ಟು ಸಾಲ ವಿಷ್ಣು ತಲೆಗೆ ಬಿತ್ತು.

ಅದೇ ಕೊರಗಿಗೆ ಬಿದ್ದ ವಿಷ್ಣು ಬಂದಬಂದ ಸಿನಿಮಾಗಳಿಗೆಲ್ಲ ಕಾಲ್‌ಶೀಟ್ ಕೊಟ್ಟರು. ಅಪರೂಪಕ್ಕೆಂಬಂತೆ 'ಯಜಮಾನ', 'ಆಪ್ತಮಿತ್ರ' ಹಿಟ್ಟಾಗಿದ್ದು ಬಿಟ್ಟರೆ ಮಹತ್ವಾಕಾಂಕ್ಷೆಯಿಟ್ಟು ನಿರ್ಮಿಸಿದ 'ವಿಷ್ಣುಸೇನಾ', 'ಕೋಟಿಗೊಬ್ಬ', 'ಸಿಂಹಾದ್ರಿಯ ಸಿಂಹ', 'ಜಮೀನ್ದಾರ'.. ಇತ್ಯಾದಿ ಚಿತ್ರಗಳೆಲ್ಲ ಸಾಲುಸಾಲಾಗಿ ತೋಪಾದವು. ಯೌವನ ಮುಗಿದುಹೋಗಿತ್ತು. ವಯಸ್ಸು, ಆರೋಗ್ಯ ವರ್ಚಸ್ಸು, ಗ್ಲಾಮರ್‌ಗಳೆಲ್ಲವೂ ಸವಕಳಿಗೊಂಡು ಅದು ವಿಷ್ಣು ಜಮಾನದ ಸಂಧ್ಯಾಕಾಲವಾಗಿತ್ತು. ಈ ಮಧ್ಯೆಯೇ ಮಗಳು ಚಂದನಳನ್ನು ವೇಣು ಎಂಬ ಸಾಫ್ಟ್‌ವೇರ್ ಇಂಜಿನಿಯರ್‌ಗೂ, ಕೀರ್ತಿ ಎಂಬ ಮತ್ತೊಬ್ಬ ಮಗಳನ್ನು ಪತ್ನಿ ಭಾರತಿಯವರ ಸಂಬಂಧಿ ಅನಿರುದ್ಧ್‌ಗೂ ಕೊಟ್ಟು ಮದುವೆ ಮುಗಿಸಿದ ವಿಷ್ಣು ಕೊಂಚ ನಿರಾಳವಾದರು. ಜೆ.ಪಿ.ನಗರದಲ್ಲಿ ಮಗಳು ಕೀರ್ತಿ ಮತ್ತು ಅಳಿಯ ಅನಿರುದ್ಧ್‌ಗೆಂದೇ ಮನೆಯೊಂದನ್ನು ಕಟ್ಟಿಸಿಕೊಟ್ಟರು. ಉಳಿದಂತೆ ಮೈಸೂರಿನ ವಿಕ್ರಮ್ ಆಸ್ಪತ್ರೆಗೆಂದು ಹಾಕಿದ ಅಷ್ಟಿಷ್ಟು ಬಂಡವಾಳವನ್ನೂ ವಾಪಸ್ಸು ಪಡೆದರು. ಜಯನಗರದ ಮನೆ ಬಿಟ್ಟರೆ ವಿಷ್ಣು ದಂಪತಿಗಳ ಪಾಲಿಗೇಂತ ಉಳಿದದ್ದು ಗಾಂಧಿನಗರದಲ್ಲಿ ಕೆ.ಮಂಜು ಕಚೇರಿಯ ಎದುರಿಗಿದ್ದ ಕಾಂಪ್ಲೆಕ್ಸ್ ಒಂದೇ.

ಅದು ಭಾರತಿಯವರ ಸ್ವಂತ ದುಡಿಮೆಯೇ ಹೊರತು ವಿಷ್ಣು ಪಾಲೆಂಬುದು ಏನೇನೂ ಇರಲಿಲ್ಲ. ಭಾರತಿಯವರ ತಮ್ಮ ಮಂಜು ಪೀಣ್ಯದಲ್ಲೊಂದು ಫ್ಯಾಕ್ಟರಿ ನಡೆಸುತ್ತಿದ್ದನಾದರೂ ಅದಕ್ಕೆ ವಿಷ್ಣು ಕೊಡುಗೆ ಏನೇನೂ ಇರಲಿಲ್ಲ. ತಮಿಳುನಾಡಿನ ಮಧುರೈ ಬಳಿ ಭಾರತಿಯವರಿಗಿದ್ದ ಐವತ್ತೆಕರೆಯ ಫಾರ್ಮ್‌ಹೌಸ್ ಕೂಡ ಅವರ ಪಿತ್ರಾರ್ಜಿತ ಸ್ವತ್ತಾಗಿತ್ತೆ ಹೊರತು ಅದಕ್ಕೂ ವಿಷ್ಣುಗೂ ಬಿಲ್‌ಕುಲ್ ಸಂಬಂಧವಿರಲಿಲ್ಲ... ವಿಪರ್ಯಾಸವೆಂದರೆ ಇಲ್ಲಿಗೆ ಮೂರು ತಿಂಗಳ ಹಿಂದಷ್ಟೇ ಭಾರತಿಯವರೇ ನಿಂತು ತಮ್ಮ ಮಧುರೈನ ಫಾರ್ಮ್‌ಹೌಸ್ ಅನ್ನು ಮಾರಿಬಿಟ್ಟರು.

ಮಾರುವಂಥಾದ್ದೇನಾಗಿತ್ತು? ಅದು ಹಣಕಾಸಿನ ಮುಗ್ಗಟ್ಟೇ? ಸಾಲಗಾರರ ಕಾಟವಾಗಿತ್ತೇ?


IAS ರಂಗಸ್ವಾಮಿಯ 'ಯಾಮಿನಿ' ಹಗರಣ

ಮುಖ್ಯಮಂತ್ರಿ ಯಡಿಯೂರಪ್ಪನವರ ಅವಿವೇಕಿ ಸರ್ಕಾರದಲ್ಲಿ ಏನೆಲ್ಲಾ ಯಡವಟ್ಟುಗಳು ನಡೆಯಲು ಸಾಧ್ಯ ಎಂಬುದಕ್ಕೆ ಈಗ ಇನ್ನೊಂದು ಸಾಕ್ಷಿ ಸಿಕ್ಕಿದೆ.

ರಾಜ್ಯದ ಹಿರಿಯ ಐಎಎಸ್ ಅಧಿಕಾರಿ ಡಿ.ಕೆ. ರಂಗಸ್ವಾಮಿ ಎಂಬಾತ ಯಾಮಿನಿ ಎಂಬ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿದ್ದ ದೂರಿನ ಕಡತವೀಗ ಅದರ ತನಿಖಾ ವರದಿ ಸಮೇತ ನಾಪತ್ತೆಯಾಗಿ ಹೋಗಿದೆ! ಲ್ಯಾಂಡ್ ಡೀಲು, ಸರ್ಕಾರಿ ಜಮೀನಿನ ಕಬಳಿಕೆ, ತೆರಿಗೆ ವಂಚನೆಗಳೆಲ್ಲಾ ಇರುವ ಈ ಯಾಮಿನಿ ಹಗರಣದೊಳಗೆ ಈಗ ಲೈಂಗಿಕ ಕಿರುಕುಳವೂ ಸೇರಿಕೊಂಡಿದೆ. ಈ ಕುರಿತು ಯಡ್ಡಿ 'ಹಗರಣದ ಬಗ್ಗೆ ತನಿಖೆ ಮಾಡಿಸಿ ನಂತರ ಕ್ರಮ ತೆಗೆದುಕೊಳ್ಳುತ್ತೇವೆ' ಎಂದಿದ್ದಾರೆ. ಆದರೆ ಯಡ್ಡಿಯ ತಲೆಯ ಮೇಲೆ ಹೊಡೆಯುವಂತೆ ಗೃಹ ಸಚಿವ ವಿ.ಎಸ್. ಆಚಾರ್ಯ "ತನಿಖೆ ಆಗಬೇಕು ಸರಿ, ಆದರೆ ಆ ಫೈಲೇ ಕಳೆದುಹೋಗಿದೆ" ಎಂದು ಹೇಳುತ್ತಿದ್ದಾರೆ.


ಈ ಮಧ್ಯೆ ಸಸ್ಪೆಂಡಾಗಿ ಮನೆ ಸೇರಬೇಕಿದ್ದ ತನಿಖೆಯಾಗಿದಿದ್ದರೆ ಜೈಲಿನಲ್ಲಿರಬೇಕಿದ್ದ ಅಧಿಕಾರಿ ರಂಗಸ್ವಾಮಿ ಈಗ ಪ್ರಮೋಶನ್ ಗಿಟ್ಟಿಸಿ ಸೂಪರ್ ಟೈಂ ಸ್ಕೇಲ್ ಸಂಬಳಕ್ಕೆ ಜಿಗಿದು ನಿಂತಿದ್ದಾನೆ.

ಅಂದಹಾಗೆ ಈತನಿಗೆ ಪ್ರಮೋಶನ್ ಕೊಟ್ಟಿರುವುದು ಬೇರೆ ಯಾರೂ ಅಲ್ಲ, ಅದು ಮುಖ್ಯಮಂತ್ರಿ ಯಡಿಯೂರಪ್ಪನೆ!




ರಂಗಸ್ವಾಮಿಯ ರಂಗಿನಾಟ

ಹಾಸನ ಮೂಲದವನಾದ ಈ ಡಿ.ಕೆ. ರಂಗಸ್ವಾಮಿ 1996 ರ ಬ್ಯಾಚಿನ ಐಎಎಸ್ ಅಧಿಕಾರಿ. ಕೆಲಕಾಲ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತಿಯಲ್ಲೂ



ಸಿಇಓ ಆಗಿ ನಂತರ 2005 ರ ಸುಮಾರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ಬಂದು ಕುಳಿತಿದ್ದ. ಈಗ ಹೊಸ ಜಿಲ್ಲೆಯಾಗಿರುವ ರಾಮನಗರವು ಆಗ ಒಂದು ತಾಲ್ಲೂಕು ಕೇಂದ್ರವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯೊಳಗಿತ್ತು.

ಇಷ್ಟು ಪೀಠಿಕೆ ಹೇಳಿದ ಮೇಲೆ ಈಗ ನೇರವಾಗಿ ವಿಷಯಕ್ಕೆ ಬರಬಹುದು. ಈ ರಂಗಸ್ವಾಮಿ ಮೊದಲಿನಿಂದಲೂ ಬಹಳ ಸ್ಟ್ರಿಕ್ಟ್ ಆಫೀಸರ್. ಬಹಳ ನೀಟಾಗಿ ಡ್ರೆಸ್ ಮಾಡುವುದು, ಕಡಿಮೆ ಮಾತು, ಕೆಳಹಂತದ ಸಿಬ್ಬಂದಿಯಿಂದ ಲಂಚ ಕೇಳದೆ ಹಿರಿಯ ಅಧಿಕಾರಿಗಳ ಮೂಲಕವೇ ಮಂತ್ಲಿ ವಸೂಲಿ ಮಾಡುವ ವಿಶೇಷ ಕ್ವಾಲಿಟಿಗಳಿದ್ದ ಆಫೀಸರ್. ಈತ ಬೆಂಗಳೂರು ಗ್ರಾಮಾಂತರ ಡೀಸಿಯಾದ ಮೇಲೆ ರಾಜರಾಜೇಶ್ವರಿ ನಗರದಲ್ಲಿದ್ದ ಶಶಿಕುಮಾರ್ ಹಾಗೂ ಯಾಮಿನಿ ಎಂಬುವರ ಪರಿಚಯವಾಗಿ ಬಹಳ ಬೇಗನೆ ಅದು ಲ್ಯಾಂಡ್ ಬ್ಯುಸಿನೆಸ್‌ನ ಪಾರ್ಟನರ್‌ಶಿಪ್ ಆಗಿ ಬೆಳೆದಿತ್ತು. ಈ IAS ರಂಗಸ್ವಾಮಿ ಹಾಗೂ ಲ್ಯಾಂಡ್ ಡೀಲರ್ ಶಶಿಕುಮಾರ್ ನಡುವೆ ಅದೇನೇನು ಬ್ಯುಸಿನೆಸ್‌ಗಳಿದ್ದವೊ ಅದಿನ್ನು ಹೊರಬರಬೇಕಿದೆ. ಅದೇನೇ ಇರಲಿ, 2007 ರಲ್ಲಿ ಶಶಿಕುಮಾರ್ ರಸ್ತೆ ಅಪಘಾತವೊಂದರಲ್ಲಿ ಸಿಕ್ಕು ತೀರಿಕೊಂಡ. ನಂತರ ಈ ಯಾಮಿನಿ ಎಂಬ 27 ವರ್ಷದ ಮಹಿಳೆ ರಾಮನಗರ ತಾಲ್ಲೂಕಿನಲ್ಲಿ ತನ್ನ ಪತಿ ಶಶಿಕುಮಾರ್ ಹೆಸರಿನಲ್ಲಿದ್ದ ಮೂರು ಎಕರೆ ಸರ್ಕಾರಿ ಖರಾಬ್ ಜಮೀನನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳಲು ಜಿಲ್ಲಾಧಿಕಾರಿ ರಂಗಸ್ವಾಮಿ ಬಳಿಗೆ ಹೋಗಿದ್ದಾರೆ. ಆಗ ಎಕರೆಗೆ ಮೂರು ಲಕ್ಷದಂತೆ ಲಂಚ ತಿಂದ ರಂಗಸ್ವಾಮಿ ಅದೇ ಖರಾಬ್ ಜಮೀನನ್ನು ಕೃಷಿ ಭೂಮಿ ಎಂಬಂತೆ ಬಿಂಬಿಸಿ ಯಾಮಿನಿ ಹೆಸರಿಗೆ 2007 ರ ಅಕ್ಟೋಬರ್‌ನಲ್ಲಿ ದಾಖಲೆ ಮಾಡಿಸಿಕೊಟ್ಟುಬಿಟ್ಟ. ಹೀಗೆ ಜಮೀನು ವರ್ಗಾಯಿಸುವಾಗ ಭೂ ಮಂಜೂರಾತಿ ಹಾಗೂ ಪರಿವರ್ತನೆ ಶುಲ್ಕವಾಗಿ ಯಾಮಿನಿ ಸರ್ಕಾರಕ್ಕೆ ಕಟ್ಟಬೇಕಿದ್ದ 31.5 ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಿಕೊಳ್ಳದೆ ಆಕೆಯೊಂದಿಗೆ ಲೈಂಗಿಕ ಚೇಷ್ಟೆ ಶುರು ಮಾಡಿದ ಎನ್ನಲಾಗಿದೆ. ಶಶಿಕುಮಾರ್ ಸತ್ತ ನಂತರ ರಂಗಸ್ವಾಮಿಯು ರಾಜರಾಜೇಶ್ವರಿ ನಗರದಲ್ಲಿದ್ದ ಯಾಮಿನಿಯ ಮನೆಗೆ ಪದೇಪದೇ ಹೋಗಿಬರುತ್ತಿದ್ದುದ್ದ ಬಗ್ಗೆ, ಆಕೆಗೆ ಎಸ್‌ಎಂಎಸ್ ಕಳುಹಿಸುತ್ತಿದ್ದ ಬಗ್ಗೆ ಲೋಕಾಯುಕ್ತರಿಗೆ ಈಗ ದಾಖಲೆಗಳೇ ಸಿಕ್ಕಿವೆ. ಅದಿರಲಿ, ರಂಗಸ್ವಾಮಿಯ ಚೇಷ್ಟೆಗಳಿಗೆ ಯಾಮಿನಿ ಸಹಕರಿಸದ ಕಾರಣ ಆತ ಅದೇ 2007 ರ ಅಕ್ಟೋಬರ್ 16 ರಂದು ಯಾಮಿನಿಗೆ ಒಂದು ಸರ್ಕಾರಿ ಪತ್ರ ಬರೆದು 31.4 ಲಕ್ಷ ರೂಪಾಯಿ ಭೂಪರಿವರ್ತನಾ ಶುಲ್ಕ ಕಟ್ಟುವಂತೆ ಆದೇಶಿಸಿಬಿಟ್ಟ. ಹೀಗೆ ಆದೇಶ ನೀಡಿದ ಒಂದು ಗಂಟೆಯೊಳಗೇ ಇನ್ನೊಂದು ಆದೇಶ ಹೊರಡಿಸಿ ಹಣ ಕಟ್ಟುವ ಅಗತ್ಯವಿಲ್ಲ ಎಂದು ಹೊಸ ಆದೇಶ ಕೊಟ್ಟ. ಅದಾದ ಕೆಲ ಹೊತ್ತಿನಲ್ಲೇ ಮತ್ತೊಂದು ಆದೇಶ ಹೊರಡಿಸಿ 'ನೀವು ಸರ್ಕಾರಿ ಜಾಗವನ್ನು ಅಕ್ರಮವಾಗಿ ಲಪಟಾಯಿಸಿದ್ದೀರಿ ಇದೊಂದು ವಂಚನೆಯ ಪ್ರಕರಣ' ಎಂದು ಆರೋಪಿಸಿ ಬೆಂಗಳೂರು ಸಿಸಿಬಿಗೆ ಒಂದು ಅಧಿಕೃತ ಕಂಪ್ಲೇಂಟು ಕೊಟ್ಟುಬಿಟ್ಟ.





ಆಗ ಯಾಮಿನಿ ನೇರ ಹೈಕೋರ್ಟಿಗೆ ಹೋಗಿ ರಂಗಸ್ವಾಮಿಯ ಆದೇಶದ ವಿರುದ್ಧ ತಡೆಯಾಜ್ಞೆ ತಂದು ಅವನ ಬಾಯಿ ಮುಚ್ಚಿಸಿದ್ದರು. ಈ ನಡುವೆ, ಯಾಮಿನಿ ಕಂದಾಯ ಇಲಾಖೆಯ ಕಾರ್ಯದರ್ಶಿ ಜಾಮ್‌ದಾರ್ ಬಳಿಗೆ ನೇರ ಹೋಗಿ ರಂಗಸ್ವಾಮಿ ತನಗೆ ನೀಡುತ್ತಿದ್ದ ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಿದರು. ನಂತರ ತನಿಖೆ ನಡೆಸಿದ ಜಾಮ್‌ದಾರ್ 2008 ರ ನವೆಂಬರ್ 17 ರಂದು ಸರ್ಕಾರಕ್ಕೆ ಪತ್ರ ಬರೆದು "ಅಧಿಕಾರ ದುರುಪಯೋಗ, ಸರ್ಕಾರಿ ಬೊಕ್ಕಸಕ್ಕೆ 31.5 ಲಕ್ಷ ನಷ್ಟ ಹಾಗೂ ಲೈಂಗಿಕ ಕಿರುಕುಳ ನೀಡಿರುವುದು ಸಾಬೀತಾಗಿದೆ" ಎಂದು ಹೇಳಿ ರಂಗಸ್ವಾಮಿಯನ್ನು ಸಸ್ಪೆಂಡ್ ಮಾಡುವಂತೆ ಸರ್ಕಾರಕ್ಕೆ ವರದಿ ನೀಡಿದ್ದರು. ಆದರೆ ಆಗ ರಾಜ್ಯ ಮುಖ್ಯ ಕಾರ್ಯದರ್ಶಿಯಾಗಿದ್ದ ಪಿ.ಎಸ್. ಮಹಿಂಪಿ ಯಾವುದೇ ಕ್ರಮ ಕೈಗೊಳ್ಳಲಿಲ್ಲ.

ಸರ್ಕಾರಿ ಉನ್ನತಾಧಿಕಾರಿಗಳ ಈ ಕಣ್ಣಾಮುಚ್ಚಾಲೆ ಆಟ ನೋಡಿ ರೋಸಿಹೋದ ಯಾಮಿನಿ ಕೊನೆಗೆ ಲೋಕಾಯುಕ್ತರಿಗೆ ದೂರು ಕೊಟ್ಟರು. ಪ್ರಕರಣದ ಗಂಭೀರತೆ ಗಮನಿಸಿದ ನ್ಯಾ. ಸಂತೋಷ್ ಹೆಗಡೆ 2009 ರ ಮೇ 8 ರಂದು ಆಗಿನ ಸರ್ಕಾರದ ಕಾರ್ಯದರ್ಶಿ ಸುಧಾಕರ ರಾವ್‌ಗೆ ಪತ್ರ ಬರೆದು ರಂಗಸ್ವಾಮಿಯ ವಿರುದ್ಧ ತನಿಖೆ ನಡೆಸಿ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದ್ದರು. ಇದಾಗಿ ಏಳು ತಿಂಗಳಾಗಿವೆ. ಯಡ್ಡಿ ಸರ್ಕಾರ ದೂರಿನತ್ತ ತಿರುಗಿಯೂ ನೋಡಲಿಲ್ಲ. ಈಗ ಲೋಕಾಯುಕ್ತರೇ ಸಿಟ್ಟಿಗೆದ್ದು ಬಹಿರಂಗ ಹೇಳಿಕೆ ನೀಡಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಯಡ್ಡಿ ಈಗ ನರ್ಸ್ ರೇಣುಕನ ಆಲಿಂಗನದಿಂದ ಬಿಡಿಸಿಕೊಂಡು ಈ ಯಾಮಿನಿ ಹಗರಣ ಏನೆಂದು ತಿಳಿದು 'ತನಿಖೆ ಮಾಡಿಸುವುದಾಗಿ' ಹೇಳಿದ್ದಾರೆ.

ಆದರೆ ಐಎಎಸ್ ರಂಗಸ್ವಾಮಿ ಶಿಕ್ಷೆಗೆ ಬದಲಾಗಿ ಪ್ರಮೋಷನ್ ಗಿಟ್ಟಿಸಿ ಹಾಯಾಗಿದ್ದಾನೆ.

ಎಲ್ಲಿಗೆ ಬಂತು ನೋಡಿ ಈ ಬಿಜೆಪಿಗಳ 'ರಾಮ ರಾಜ್ಯ'!

● ಕುಮಾರ್



ಲವ್ ಜಿಹಾದ್: ಪ್ರೋಷಕರ ಹಾಜರಿ

ಮಾಹಿತಿಗೆ ಆದೇಶ

ಸಂಧಾನ ವಿಫಲ

ತಾರತಮ್ಯ: ನೋಟಿಸ್



ಸ್ವ-ಇಚ್ಛೆಯಿಂದ ಹೋಗಿರುವುದಾಗಿ ಯುವತಿ ಹೇಳಿಕೆ

ಮಂಗಳೂರು 'ಲವ್ ಜಿಹಾದ್'ಗೆ ತೆರೆ

ಪ್ರಜಾವಾಣಿ ವಾರ್ತೆ

ಮಹಿಳೆ ಹಾಜರಿಗೆ ಆದೇಶ

ಲವ್ ಜಿಹಾದ್

ಪ್ರಜಾವಾಣಿಗೆ ಎರಡು ಕಣ್ಣು!
ವಿಜಯ ಕರ್ನಾಟಕ ಒಕ್ಕಣ್ಣು!!

ಕನ್ನಡ ದಿನಪತ್ರಿಕೆಗಳ ದೃಷ್ಟಿದೋಷಕ್ಕೆ ಸಂಬಂಧಿಸಿರುವ ಲೇಟೆಸ್ಟ್ ಪ್ರಕರಣವಿದು.

ಕಳೆದ ನಾಲ್ಕಾರು ತಿಂಗಳಿಂದ ಲವ್ ಜಿಹಾದ್ ಬಗ್ಗೆ ವಿಪರೀತ ಪ್ರಚಾರವಾಗಿ ಏನೋ ಭಾರಿ ಅನಾಹುತವಾಗುತ್ತಿದೆ ಎಂಬ ಭಾವನೆ ಜನರಲ್ಲಿ ಮೂಡಿತ್ತು. ಈಗ ಅಂತಹ ಅಪಪ್ರಚಾರಗಳಲ್ಲಿ ಹುರುಳಿಲ್ಲವೆಂಬ ಸಂಗತಿ ಒಂದೊಂದಾಗಿ ಬಯಲಿಗೆ ಬರುತ್ತಿವೆ. ಚಾಮರಾಜನಗರದ ಯುವತಿ ಸೆಲ್ವರಾಜ್ ಸ್ವಇಚ್ಛೆಯಿಂದ ಮುಸ್ಲಿಂ ಹುಡುಗನನ್ನು ಮದುವೆಯಾಗಿದ್ದಾಗಿ ಕೋರ್ಟ್‌ನಲ್ಲಿ ಹೇಳಿಕೆ ನೀಡಿದ ನಂತರ ಆ ಪ್ರಕರಣ ಕೊನೆಗೊಂಡಿತ್ತು.

ಈಗ ಬಂಟ್ವಾಳದ ರಮ್ಯಾ ಶೆಟ್ಟಿ ಸಹ ತಾನು ಸ್ವಇಚ್ಛೆಯಿಂದ ಮಹಮದ್ ಎಂಬಾತನನ್ನು ಮಧುವೆ ಆಗಿರುವುದಾಗಿ ಹೈಕೋರ್ಟ್‌ನಲ್ಲಿ ಹೇಳಿಕೆ ನೀಡಿದ್ದಾಳೆ.

ಅಲ್ಲಿಗೆ ಈ ಪ್ರಕರಣವೂ ಲವ್ ಜಿಹಾದ್ ಅಲ್ಲ ಎಂದಾಯಿತು. ಆದರೆ ಈ ಸುದ್ದಿ ದಿ. 6.1.2010 ರ ಪ್ರಜಾವಾಣಿಯಲ್ಲಿ ಹೇಗೆ ಪ್ರಕಟವಾಗಿದೆ ಹಾಗೂ ಅದೇ ದಿನ ವಿಜಯ ಕರ್ನಾಟಕದಲ್ಲಿ ಯಾವ ರೀತಿ ಬಂದಿದೆ ಎಂದು ನೋಡಿ.

ರಮ್ಯಾ ಶೆಟ್ಟಿಯ ಹೇಳಿಕೆಯನ್ನು ಪ್ರಜಾವಾಣಿ ನಿಷ್ಪಕ್ಷಪಾತವಾಗಿ ಪ್ರಕಟಿಸಿದೆ. ಆದರೆ ವಿಜಯ ಕರ್ನಾಟಕ ಆಕೆಯ ಹೇಳಿಕೆಯ ಸಾರಾಂಶವನ್ನು ತನ್ನ ಓದುಗರಿಗೆ ತಿಳಿಸದೆ ವಂಚಿಸಿದೆ.

ಟೈಮ್ಸ್ ಆಫ್ ಇಂಡಿಯಾ ಗುಂಪಿನ ಬೆಂಗಳೂರು ಬಾಸ್ ಚಿನ್ನನ್ ದಾಸ್‌ಗೆ ಜರ್ನಲಿಸಂ ಅಂದರೆ ಏನಂತಲೂ ಗೊತ್ತಿಲ್ಲವಾ?

…ರೈತರಿಗೆ ಹಿಟ್ಲರ್ ಬಿಜೆಪಿಗೆ ಜೋಕರ್

▶▶8



…ಹೋರಾಟ ಆರಂಭಿಸಿದಾಗ ಅವರ ವಿರುದ್ಧ …ಲೀಸರನ್ನು ಛೂಬಿಟ್ಟು ದೌರ್ಜನ್ಯ ನಡೆಸಲಾಗಿದೆ. …ತ್ತೊಂದೆಡೆ ವಿಶೇಷ ಆರ್ಥಿಕ ವಲಯಕ್ಕಾಗಿ ಭೂಸ್ವಾಧೀನ …ರೋಧಿಸಿ ದಾವಣ ಗೆರೆ ರೈತರು ಹೋರಾಟಕ್ಕಿಳಿದಾಗ …ವರನ್ನು ಬಂಧಿಸಿ ಕೈಗೆ ಬೇಡಿ ಹಾಕಿಸಿ ಧಾರವಾಡ …ಗೆ ತಳ್ಳಲಾಯಿತು. ತೀರಾ ಇತ್ತೀಚೆಗೆ ನೈಸ್ ಕಂಪನಿಗಾಗಿ …ನುವಾಗಿ ಸಾವಿರಾರು ಎಕರೆ ಭೂಮಿ ಕೊಡಿಸಲು … ತಯಾ ರಾಗಿದ್ದು ರಾಮನಗರ ರೈತರು ಪ್ರತಿಭಟಿಸಿದರೆ …ವನ್ನು ಸಹ ಅರೆಸ್ಟ್ ಮಾಡಿಸಿ ಜೈಲಿಗಟ್ಟಲಾಗಿದೆ. …ಂದು ಕಾಲದಲ್ಲಿ ಗುಂಡೂರಾವ್ ರೈತರ ಮೇಲೆ …ದ ದೌರ್ಜನ್ಯಗಳಷ್ಟೆ ಕೆಟ್ಟ ರೀತಿಯಲ್ಲಿ ಯಡ್ಡಿಯೂ …ವರ್ತಿಸುತ್ತಿದ್ದಾರೆ.

…ಭಿನ್ನಮತ-ಮುಗಿಯದ ಗೋಳು

…ಯಡ್ಡಿ ಸಿಎಂ ಆದ ದಿನದಿಂದಲೇ ಶುರುವಾದ …ಪಯೊಳಗಿನ ಮುಸುಕಿನ ಗುದ್ದಾಟ 2009 ರ …ಟೋಬರ್-ನವೆಂಬರ್‌ನಲ್ಲಿ ತಾರಕಕ್ಕೇರಿತ್ತು. ಆಗ ತನ್ನ …ಹಿಡಿದಿದ್ದವರನ್ನು ನಡುನೀರಿನಲ್ಲಿ ಕೈಬಿಟ್ಟ ಯಡ್ಡಿ ತನ್ನ …ಳೆಯುತ್ತಿದ್ದವರ ಕಾಲನ್ನೇ ಹಿಡಿದು ಹೇಗೊ ಕುರ್ಚಿ …ಸಿಕೊಂಡಿದ್ದರು. ಹೋಗಲಿ ಆಮೇಲಾದರೂ ಈ …ಮತೀಯರ ಗೋಳುಗಳು ಮುಗಿದವಾ ಎಂದು …ಬಿದರೆ ಅದು ನಾಳೆಗೂ ನಿಲ್ಲುವಂತೆ ಕಾಣುತ್ತಿಲ್ಲ. ಈ …ವೇಕಿಗಳ ಗದ್ದಲದಲ್ಲಿ ಯಡ್ಡಿಗೆ ಆಡಳಿತದ ಮೇಲಿನ …ರ್ಣ ನಿಯಂತ್ರಣವೇ ತಪ್ಪಿಹೋಗಿದೆ.

…ಪ್ರವಾಹದ ಹಾನಿ ಗಂಭೀರವಾಗಿದ್ದಾಗ ಕೇಂದ್ರ ಸರ್ಕಾರ …ಸಾವಿರ ಕೋಟಿ ಕೊಡಲಿ, 10 ಸಾವಿರ ಕೋಟಿ …ಹಾರ ಬೇಕು ಎಂದೆಲ್ಲಾ ಗುಟುರು ಹಾಕಿದ್ದ ಇದೇ … ಈಗ ಅಪ್ಪಿತಪ್ಪಿಯೂ ಪರಿಹಾರ ಕಾಮಗಾರಿಗಳ … ಮಾತನಾಡುತ್ತಿಲ್ಲ. ಅಧಿಕಾರಿಗಳು ಹಾಗೂ …ಸರು ಒಟ್ಟಾಗಿ ಪರಿಹಾರ ಕೇಳಿಬರುತ್ತಿರುವ ರೈತರನ್ನು …ದು ಬಾರಿಸಿ ದೂರ ತಳ್ಳುತ್ತಿದ್ದಾರೆ. ಕೆಲವೆಡೆ ಸಂತ್ರಸ್ತರಿಗೆ ತಲಾ ಇನ್ನೂರು ರೂಪಾಯಿ ನಗದು ಪರಿಹಾರ ನೀಡಲಾಗುತ್ತಿದೆ. ಎಂದರೆ ಇದೆಂತಹ ಅದ್ವಾನಗಳ ಸರ್ಕಾರವಿರಬೇಕು ಯೋಚಿಸಿ?

ಈ ನಡುವೆ ರಚ್ಚೆ ಹಿಡಿದು ಗ್ರಾಮೀಣಾಭಿವೃದ್ಧಿ ಮಂತ್ರಿಯಾಗಿರುವ ಜಗದೀಶ್ ಶೆಟ್ಟರ್ ಪ್ರವಾಹಪೀಡಿತರತ್ತ ಒಮ್ಮೆಯೂ ತಿರುಗಿ ನೋಡಿಲ್ಲ. ಭಿನ್ನಮತೀಯರ ಸಮಾಧಾನಕ್ಕೆ ರಚನೆಯಾದ ಸಮನ್ವಯ ಸಮಿತಿ ಎಲ್ಲಿದೆ? ಯಾಕಿದೆ? ಎಂಬುದೇ ಯಾರಿಗೂ ಗೊತ್ತಾಗುತ್ತಿಲ್ಲ. ಈಗಿನ ಲೇಟೆಸ್ಟ್ ತಮಾಷೆಯ ಬೆಳವಣಿಗೆ ಯಾವುದೆಂದರೆ "ಐದು ವರ್ಷ ಪೂರ್ತಿ ಅಧಿಕಾರ ನಡೆಸುವುದೇ ನಮ್ಮ ಗುರಿ" ಎಂದು ಬಿಜೆಪಿಗಳು ಹೇಳುತ್ತಿದ್ದಾರೆ! ಹೊಸ ಸರ್ಕಾರ, ಹೊಸ ಬದಲಾವಣೆ, ಅಭಿವೃದ್ಧಿ ಎಂದೆಲ್ಲಾ ಸ್ಲೋಗನ್ ಹಾಕಿ ಅಧಿಕಾರಕ್ಕೆ ಬಂದ ಯಡ್ಡಿಯ ದುಃಸ್ಥಿತಿ ಇದು.

ನರ್ಸ್ ರೇಣುಕನ ನರ್ಸಿಂಗ್‌ಹೋಂನಲ್ಲಿ ಪೇಷಂಟ್ ಯಡ್ಡಿ

ಯಾವುದು ಸಾಧ್ಯ ಎನಿಸಿತ್ತೋ ಅದನ್ನು ಅಸಾಧ್ಯವಾಗಿಸುವುದು ಅದೇರೀತಿ ಯಾವುದು ಅಸಾಧ್ಯ ಎಂದಾಗಿತ್ತೋ ಅದನ್ನೇ ಸಾಧ್ಯ ಎನಿಸಿಬಿಡುವುದು ಸಿಎಂ ಯಡ್ಡಿಯ ಬಹುಮುಖ್ಯ ಸಾಧನೆಯಾಗಿದೆ.

ಕಾಂಗ್ರೆಸ್-ಜೆಡಿಎಸ್‌ಗಳಿಂದ ಹೇಳಿಕೊಳ್ಳುವಂತಹ ಪ್ರತಿರೋಧ ಇರದಿದ್ದಾಗ, ಬಿಜೆಪಿಗೆ ಸಿಂಪಲ್ ಮೆಜಾರಿಟಿ ಇರುವಾಗ ಯಡಿಯೂರಪ್ಪ ಒಳ್ಳೆಯ ಸರ್ಕಾರ ಕೊಡಬಲ್ಲರೆಂಬ ನಿರೀಕ್ಷೆ ಎಲ್ಲರಲ್ಲೂ ಇತ್ತು, ಕೊಂಚಮಟ್ಟಿಗೆ ಅದು ಸಾಧ್ಯವೂ ಇತ್ತು. ಆದರೆ ಈಗ ಅದನ್ನು ಅಸಾಧ್ಯವಾಗಿಸಿದ್ದಾರೆ ಯಡ್ಡಿ.

ವರ್ಗಾ ದಂಧೆ, ಲ್ಯಾಂಡ್‌ಡೀಲ್‌ಗಳು, ಯಡ್ಡಿ ಮಗ ವಿಜಯೇಂದ್ರನ ಡಿ ನೋಟಿಫಿಕೇಶನ್ ಡೀಲುಗಳು, ಭಿನ್ನಮತಿಯರ ಅಧಿಕಾರದಾಹ ಹಾಗೂ ಯಡ್ಡಿಯ ಸ್ವಜಾತಿ ಪ್ರೇಮ ಆಳುವ ಬಿಜೆಪಿ ಸರ್ಕಾರದ ಚರಿಷ್ಮಾವನ್ನು ನೆಲ ಮುಟ್ಟಿಸಿವೆ. ಮತ್ತೊಂದೆಡೆ, ರೇಣುಕಾಚಾರ್ಯನಂತಹ ಮಾನಗೇಡಿ ಭಂಡನನ್ನು ಕರೆದು ಮಂತ್ರಿ ಮಾಡಿ ತಮ್ಮ ಪಕ್ಕ ಕೂರಿಸಿಕೊಂಡು ಅವನಿಗಿಂತ ಭಂಡತನ ತೋರಿಸಿದ್ದಾರೆ ಯಡಿಯೂರಪ್ಪ. ಕಳೆದ ಒಂದೂವರೆ ವರ್ಷದಲ್ಲಿ ಯಡ್ಡಿ ಸಾಧಿಸಿದ್ದೇನೆಂದು ನೋಡಿದರೆ ಕಾಣಸಿಗುವುದು ಬರೀ ಲೋಳಲೊಟ್ಟೆ ಮಾತ್ರ.

ಯಡಿಯೂರಪ್ಪ ಎಂದಿದ್ದ ಹೆಸರನ್ನು ಯಡ್ಯೂರಪ್ಪ ಎಂದು ಬದಲಾಯಿಸಿಕೊಂಡಿದ್ದೊಂದೆ ಈತನ ಸಾಧನೆ. ●



…ರೆಸಾರ್ಟ್‌ನೊಳಗೆ ಕೇಳಿಸಿದ ರಹಸ್ಯ ಮಾತುಗಳು

…ಬಿಜೆಪಿ ಅತೃಪ್ತ ಶಾಸಕರ ಹಾಗೂ ಪ್ರಮುಖ …ಮುಖರ ರಹಸ್ಯ ಸಭೆ ಇದೇ ಜನವರಿ 3 ರಂದು …ಲ್ಡನ್ ಪಾಮ್ ರೆಸಾರ್ಟ್‌ನಲ್ಲಿ ನಡೆಯಿತಲ್ಲವೆ? …ಹೆಸರಿಗೆ ಇದೊಂದು ರಹಸ್ಯ ಸಭೆ ಅನಿಸಿಕೊಂಡಿ… ಸಹ ಅಲ್ಲಿಂದ ಹೊರಬಂದಮೇಲೆ ಸ್ವತಃ ಬಿಜೆಪಿ …ಕರುಗಳೇ ಅಲ್ಲಿ ಏನೇನು ಮಾತುಕತೆ ಆಯಿತೆಂದು …ಟಾಂ ಹೊಡೆದುಕೊಂಡು ಹೇಳುತ್ತಿದ್ದಾರೆ.

…ಅವರ ಕೆಲವು ಅಣಿಮುತ್ತುಗಳು ಇಲ್ಲಿವೆ.

ಚಿಕ್ಕನಗೌಡ್ರು

ಕಲಘಟಗಿ ಶಾಸಕ

…ಸ್ವಾಮಿ.... ಯಡಿಯೂರಪ್ಪನೋರೆ, ಅವತ್ತು ನೀವು …ಗ್ರೆಸ್ ಸೇರ್‍ತೀನಿ ಅಂತಾ ಹೊರಟದ್ರಿ, ಆಗ ನಾನೇ …ನ್ನು ತಡೆದೆ. ಬಿಜೆಪಿಲಿ ಇರಿ ಅಂದಿದ್ದೆ, ಈಗ …ಡಿದ್ರೆ ನೀವು ನನ್ನೇ ಮೂಲೆಗೆ ತಳ್ಳಿದ್ದಿರಾ?

ಬೆಳ್ಳುಬ್ಬಿ

ಬಸವನಬಾಗೇವಾಡಿ ಶಾಸಕ

…ರೆ ವಿಚಾರ ನನಗೆ ಬೇಡ, ನಾನು ಮಂತ್ರಿ …ಬೇಕು. ನನ್ನ ಮಂತ್ರಿ ಮಾಡಿ.....!

ಚಂದ್ರಕಾಂತ್ ಬೆಲ್ಲದ್

ಹುಬ್ಬಳ್ಳಿ ಶಾಸಕ

ಅಂತಾ ರೇಣುಕಾಚಾರ್ಯನೇ ಮಂತ್ರಿ ಆಗಿದ್ದಾನೆ. ನೀವ್ಯಾಕೆ ಮಿನಿಸ್ಟರ್ ಆಗಬಾರದೂಂತ ನನ್ನ ಸಪೋರ್ಟರ್ಸ್ ಕೇಳುತ್ತಿದ್ದಾರೆ. ಈಗ ನೀವೇ ಹೇಳಿ, ರೇಣುಕಾಚಾರ್ಯ ಮಿನಿಸ್ಟರ್ ಆಗೋದಾದ್ರೆ ನಾನ್ಯಾಕೆ ಮಿನಿಸ್ಟರ್ ಆಗಬಾರದು?

ಸಿ.ಟಿ. ರವಿ

ಚಿಕ್ಕಮಗಳೂರು ಶಾಸಕ

ಈ ಸರ್ಕಾರದಲ್ಲಿ ಮೊದಲು ನಿಷ್ಠಾವಂತರಿಗೆ ಜಾಗ ಕೊಡಿ, ನನಗೆ ಈ ಎಂಎಲ್‌ಎಗಿರಿ ಯಾರಿಗೆ ಬೇಕು ಅನ್ನಿಸಿಬಿಟ್ಟಿದೆ.

ನಾರಾಯಣಸ್ವಾಮಿ


ಆನೇಕಲ್ ಶಾಸಕ

'ನಾನು ಮನೆಮನೇಲೂ ಹತ್ತತ್ತು ರೂಪಾಯಿ ಕಲೆಕ್ಟ್ ಮಾಡಿ ಎಲೆಕ್ಷನ್ ಗೆದ್ದೆ. ನಾನು ಸೀನಿಯರ್ ಎಂಎಲ್‌ಎ ಆದ್ರೆ ನನಗೆ ಇಲ್ಲಿ ಬೆಲೆನೇ ಸಿಕ್ತಿಲ್ಲ'

–ಆಹಾ.... ಈ ಶಾಸಕರಿಗೆ ಎಂತಾ ಕಳಕಳಿ. ಕಾಳಜಿ ಇದೆ ನೋಡಿ ತಮ್ಮ ತಮ್ಮ ಕುರ್ಚಿಗಳ ಬಗ್ಗೆ. ಅಂದಹಾಗೆ ಒಂದು ಕೋಟಿ ರೂಪಾಯಿ ಖರ್ಚು ಮಾಡಿ ನಡೆಸಿದ ಈ ಶಾಸಕರ ಸಭೆಯಲ್ಲಿ ಒಬ್ಬನೂ ಪ್ರವಾಹ ಪರಿಹಾರ, ರೈತರ ಸಮಸ್ಯೆ ಬಗ್ಗೆ ಚರ್ಚಿಸಲಿಲ್ಲ, ಇದಲ್ಲವೆ ವಿಪರ್ಯಾಸ?

ರೇಣುಕಾಚಾರಿ ಹೆಂಡತಿ ಬಗ್ಗೆ ಯೋಚನೆ ಮಾಡಿದ್ದಿರೇನ್ರಿ?

ರೇಣುಕಾಚಾರಿ ಎಂಬ ಕಾಚಾರಿ ಅಥವ ವ್ಯಭಿಚಾರಿಯನ್ನು ಮಂತ್ರಿ ಮಾಡಿ ದಕ್ಕಿಸಿಕೊಂಡ ಎಡೂರಪ್ಪ, ಜಯಲಕ್ಷ್ಮಿ ಎಂಬ ದಿಟ್ಟ ಮಹಿಳೆಯನ್ನು ದಕ್ಕಿಸಿಕೊಳ್ಳಲಾಗಿಲ್ಲವಂತಲ್ಲ, ರೇಣುಕಾಚಾರಿಯನ್ನು ಮಂತ್ರಿ ಮಾಡಿದ್ದಕ್ಕೆ ಹೊನ್ನಾಳಿಗೇ ಹೋಗಿ ಪ್ರತಿಭಟಿಸುತ್ತೇನೆ ಎಂದು ಜಯಲಕ್ಷ್ಮಿ ಗುಟುರು ಹಾಕಿದ ಕೂಡಲೇ, ಹೊನ್ನಾಳಿಯ ಸರ್ಕಾರಿ ಕರ್ಮಚಾರಿಗಳು "ಸಾರ್ ಜಯಲಕ್ಷ್ಮಿ ಹೊನ್ನಾಳಿಗೆ ಬರುತ್ತಾಳಂತೆ, ಏನು ಮಾಡಲಿ?" ಎಂದು ಕೇಳಲಾಗಿ, ಯಡಿಯೂರಪ್ಪ "ಹೊನ್ನಾಳಿಗೆ ನಿಷೇಧಾಜ್ಞೆ ಹೇರಿಬಿಡಿ, ಎಂದರಂತಲ್ಲಾ, ಇದರಿಂದ ಧೈರ್ಯಗೊಂಡ ಸರ್ಕಾರಿ ಜನ ಊರ ದಶದಿಕ್ಕಿಗೂ ಪಹರೆ ನಿಲ್ಲಿಸಿದ್ದೂ ಅಲ್ಲದೆ, ನಿಷೇಧಾಜ್ಞೆ ಹೇರಿ ನಿಟ್ಟುಸಿರು ಬಿಟ್ಟವಂತಲ್ಲಾ, ಇದರಿಂದ ಕುಪಿತಗೊಂಡ ಹೊನ್ನಾಳಿ ಜನ ಸಂಬಂಧಪಟ್ಟವರಿಗೆಲ್ಲಾ ಹೊನ್ನಾಳಿ ಹೊಡೆತ ಕೊಡಲು ತಯಾರಾಗುತ್ತಿದ್ದಂತೇ, ಬಿಜೆಪಿಯ ಬೃಹನ್ನಳೆಗಳು ತಮ್ಮ ಪಾರ್ಟಿಯ ಗಯ್ಯಾಳಿ ಹೆಂಗಸರನ್ನ ಮುಂದೆ ಬಿಟ್ಟುಕೊಂಡು ಜಯಲಕ್ಷ್ಮಿ ಎಂಬ ಬಿರುಗಾಳಿಯಿಂದ ಬಚಾವಾದವಂತಲ್ಲಾ, ಥೂತ್ತೇರಿ!




* * * * * * *

ಇತ್ತ ತನ್ನ ಕಾರಿನ ಸೈರನ್ ಆಫ್ ಮಾಡಿಕೊಂಡು ಕತ್ತಲೆಯಲ್ಲೇ ಅಲೆಯುವ ಈಶ್ವರಪ್ಪನೆಂಬ ಬಕ್ಕ ಟಗರು ತನ್ನ ಖಾತೆ ವಿಷಯ ಬಿಟ್ಟು ಇನ್ನೆಲ್ಲವನ್ನು ಮಾತನಾಡುತ್ತಿದ್ದಾನಂತಲ್ಲಾ, "ರೇಣುಕಾಚಾರಿಯನ್ನು ಮಂತ್ರಿ ಮಾಡದಿದ್ದರೆ ನಮ್ಮ ಸರ್ಕಾರವೇ ಬಿದ್ದುಹೋಗುತ್ತಿತ್ತು, ಆಗ ಎಡೂರಪ್ಪನ ಮುಖ್ಯಮಂತ್ರಿಗಿರಿ, ನನ್ನ ಗ್ಯಾಸ್ ಮಂತ್ರಿಗಿರಿ ಎಲ್ಲಾ ಹೋಗಿ ಬಿಡುತ್ತಿದ್ದವು. ಹಾಗಾಗಿದ್ದರೆ ನಿಮಗೆ ಸಮಾಧಾನವಾಗುತ್ತಿತ್ತೆ?" ಎಂದು ಪ್ರಶ್ನೆ ಕೇಳಿದವರನ್ನೆ ಗುದ್ದಲು ಬಂದನಂತಲ್ಲಾ, ಮುಂದುವರಿದು "ನೀವು ಆ ರೇಣುಕಾಚಾರಿಯ ಪ್ರೇಯಸಿ ಜಯಲಕ್ಷ್ಮಿ ಬಗ್ಗೆಯೇ ಪ್ರಶ್ನೆ ಕೇಳ್ತಿರಲ್ಲಾ, ರೇಣುಕಾಚಾರಿ ಹೆಂಡತಿ ಬಗ್ಗೆ ಯೋಚನೆ ಮಾಡಿದ್ದೀರೇನ್ರೀ. ಅವಳೂ ಹೆಣ್ಣಲ್ವ. ಪಾಪ ಕತ್ತಲೆ ಮನೇಲಿ ಒಬ್ಬಳೆ ಮಲಗ್ತಳಲ್ಲ, ಅವಳ ಸ್ಥಿತಿ ಏನಾಗಿರಬೇಕು" ಎಂದರಂತಲ್ಲಾ, ಆ ಕೂಡಲೆ ಪ್ರಶ್ನೆ ಕೇಳಿದವರು, "ಅವಳು ಕತ್ತಲೆಯಲ್ಲಿ ಮಲಗಿದ್ದನ್ನ ನೀನ್ಯಾವಾಗ ನೋಡಿದ್ದೆ?" ಎನ್ನಲಿಲ್ಲವಂತಲ್ಲಾ, ಥೂತ್ತೇರಿ!

* * * * * * *

ಕಸಾಪದಿಂದ ಒಳ್ಳೆಯ ಸುದ್ದಿ ಹೊರಬಿದ್ದಿದೆಯಲ್ಲಾ, ಉತ್ತರ ಕರ್ನಾಟಕದ ಹೃದಯ ಭಾಗ ಪ್ರವಾಹದಿಂದ ಹರಿದು ಜನಜಾನುವಾರು ಬೀದಿಯಲ್ಲೇ ಇರುವಾಗ ಲಕ್ಷಾಂತರ ರೂ.ಗಳ ಖರ್ಚಿನಲ್ಲಿ ಪೆಂಡಾಲಾಕಿ ಪಿಂಜರಾಪೋಲು ಸಾಹಿತಿಗಳು, ಕುಕವಿಗಳು ಮತ್ತು ಅರೆಹುಚ್ಚರೆಲ್ಲಾ ಸೇರಿ ಸಾಹಿತ್ಯ ಸಮ್ಮೇಳನವೆಂಬ ಜಾತ್ರೆಯನ್ನು ದೊಂಬಿ ಎಳಿಸಲು ತಯಾರಾಗಿ ಅದಕ್ಕೊಂದು ಉತ್ಸವ ಮೂರ್ತಿಯಾಗಿ ಗೀತಾ ನಾಗಭೂಷಣರನ್ನು ಆರಿಸಿಕೊಂಡವಂತಲ್ಲಾ, ಸಾಹಿತ್ಯ ಸಮ್ಮೇಳನ ಜರುಗುವುದು ಈ ನಾಡಿನ ಜನಸಾಮಾನ್ಯರ ಒತ್ತಡದಿಂದಲ್ಲ, ಬದಲಿಗೆ ಸಾಹಿತ್ಯೋಪ ಜೀವಿಗಳಾಗಿ ಬದುಕುತ್ತಿರುವ ಕೆಲವು ಲೋಭಿಗಳ ಭ್ರಷ್ಟಮನಸ್ಸನ್ನು ತಣಿಸಲೋಸ್ಕರ ಎಂದು ಸಾಹಿತಿಗಳನ್ನು ಕಂಡರಾಗದವರು ಆಡಿಕೊಳ್ಳುತ್ತಿರುವಾಗಲೇ ನಲ್ಲೂರು ಪ್ರಸಾದ್ ಎಂಬ ಆಸಾಮಿ ಚಿತ್ರದುರ್ಗದ ಕೆಟ್ಟ ಅನುಭವ ಮರೆಯಲು ಗದುಗಿನ ಸಮ್ಮೇಳನ ನಡೆಸಲೇಬೇಕು ಎಂಬ ಹಟದಿಂದ ಓಡಾಡುತ್ತಿದ್ದಾರಂತಲ್ಲಾ, ಥೂತ್ತೇರಿ!



* * * * * * *


ಅತ್ತ ಶಿವಮೊಗ್ಗದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನವೊಂದು ಜರುಗುತ್ತಿದ್ದು ಅದು ಸಂಪೂರ್ಣ ಬಿಜೆಪಿ ಮಯವಾಗಿದೆಯಂತಲ್ಲಾ, ಈ ಹಿಂದೆ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲಾಗದ ಬಿಜೆಪಿಗಳು ಈ ಸಮ್ಮೇಳನದಲ್ಲಿ ಸಕ್ರಿಯವಾಗಿ ತೊಡಗಿಕೊಂಡು ತಮಗಾಗದವರನ್ನು ದೂರ ಇಟ್ಟಿದ್ದಾರೆಂದು ಗೋಷ್ಠಿ ಕವಿಗೋಷ್ಠಿಗಳಲ್ಲಿ ಅವಕಾಶ ಸಿಗದ ಅಸಾಹಿತ್ಯಕ ಜನ ಬೊಬ್ಬೆ ಹಾಕುತ್ತಿದ್ದಾರಂತಲ್ಲಾ, "ಜನವಿರೋಧಿ, ಜೀವ ವಿರೋಧಿ ಜನಗಳೆಲ್ಲಾ ಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ವಿರಾಜಮಾನರಾಗುವುದಾದರೆ ಅಂತಹ ಸಮ್ಮೇಳನಗಳಿಂದ ದೂರವಿದ್ದು, ಜೇಬಲ್ಲಿನ ಪುಡಿಗಾಸನ್ನೆ ಸಂಗ್ರಹಿಸಿ ಸರಳವಾಗಿ ಸಾಹಿತ್ಯಗೋಷ್ಠಿಗಳನ್ನು ನಡೆಸಿಕೊಳ್ಳಬಾರದೇಕೆ?" ಎಂದು ಸ್ವಾಭಿಮಾನಿ ಸಾಹಿತಿಗಳು ಮಾತನಾಡುತ್ತಿರುವ ಹೊತ್ತಲ್ಲೇ, ಚಂದ್ರಶೇಖರ ಪಾಟೀಲರು ವಿಕೃತ ಭಟ್ಟನ ಪತ್ರಿಕೆಗೆ ಕಾಲ ಬರೆಯತೊಡಗಿದ್ದಾರಂತಲ್ಲಾ . ಇದನ್ನು ಪಥನವೆನ್ನಬೇಕೊ ಉತ್ಥಾನವೆನ್ನಬೇಕೊ ತಿಳಿಯುತ್ತಿಲ್ಲವಲ್ಲಾ, ಥೂತ್ತೇರಿ!!

* * * * * * *

ಬರುಬರುತ್ತ ಜಿಲ್ಲಾ, ತಾಲ್ಲೂಕು, ಹೋಬಳಿ ಸಾಹಿತ್ಯ ಸಮ್ಮೇಳನಗಳು ಗಣಪತಿಯ ಉತ್ಸವದ ಕಾರ್ಯಕ್ರಮಗಳಾಗುತ್ತಿವೆಯಂತಲ್ಲಾ, ಇಂತಹ ಸಮ್ಮೇಳನಗಳಲ್ಲಿ ಭಾಗವಹಿಸುವ ಮರಿ ಪುಢಾರಿಗಳು ಕೂಡ ಸಾಹಿತ್ಯದ ಬಗ್ಗೆ ಮಾತನಾಡಲು ಯತ್ನಿಸುತ್ತಾ "ನಾವು ಕನ್ನಡಿಗರು, ಹೆದರಬಾರದು, ಏಳು ಜ್ಞಾನಪೀಠವನ್ನು ಸಂಪಾದಿಸಿದ್ದೇವೆ. ಅಷ್ಟಕ್ಕೇ ನಿಲ್ಲಬಾರದು. ಇನ್ನು ಏಳನ್ನು ಹೊಡೆದುಕೊಳ್ಳಬೇಕು. ನಮ್ಮ ಸಾಯಿತಿಗಳು ಸೋಮಾರಿಗಳಾಗದೆ ಬಿಡುವಿನ ವೇಳೆಯಲ್ಲಿ ಕತೆ, ಕಾದಂಬರಿ ಬರೀಬೇಕು. ದಿನಕ್ಕೆ ಒಂದು ಪುಟ ಬರದ್ರು ವರುಷಕ್ಕೆ ಮುನ್ನರ ಅರವತ್ತೈದು ಪುಟ ಆಯ್ತು, ಅದೇ ತರ ನಮ್ಮ ಕನ್ನಡನಾಡಿನ ಎಲ್ಲಾ ಸಾಯಿತಿಗಳು ಬರದ್ರೆ ಬೇರೆ ಭಾಸೆ ಸಾಯಿತಿಗಳನ್ನು ಸುಲಭವಾಗಿ ಸೋಲಿಸಬವುದು. ಇವತ್ತು ನಾವು ಐಟಿ-ಬಿಟಿಲಿ ಮುಂದಿದ್ದೇವೆ. ಅದೇ ತರ ಸಾಯಿತ್ಯದಲ್ಲೂ ಮುಂದೆ ಬರಬೇಕಾದ್ರೆ ಎಲ್ಲಾ ಸಾಯಿತಿಗಳು ತ್ಯಾಗ ಬಲಿದಾನದಿಂದ ತಮ್ಮ ಬರವಣಿಯನ್ನು ಮುಂದುವರೆಸಬೇಕು. ಪ್ರತಿ ಮನೆಲೂ ಭೈರಪ್ಪನಂತವರು ಹುಟ್ಟಿ ಬರಬೇಕು. ದೇವೇಗೌಡರಂಥೋರು ಹುಟ್ಟಬರಬೇಕು. ಜಗ್ಗೇಶನಂಥ ಕಲಾವಿದರು ಹುಟ್ಟಬರಬೇಕು" ಎಂದು ಭಾಷಣ ಬಿಗಿಯುತ್ತಿದ್ದಾರಂತಲ್ಲಾ, ಥೂತ್ತೇರಿ! ●

ಬಿಜೆಪಿಗೆ 'ದಲಿತರು ದರಿದ್ರರು'

ಯಡಿಯೂರಪ್ಪನ ಸರ್ಕಾರದಲ್ಲಿ ರೈತರಿಗೂ ಬೆಲೆ ಇಲ್ಲ, ದಲಿತರಿಗಂತೂ ಚಿಕ್ಕಾಸಿನ ಬೆಲೆ ಇಲ್ಲ. ಈ ಹಿಂದಿನ ಸರ್ಕಾರಗಳು ಮಂತ್ರಿಮಂಡಲ, ನಿಗಮ-ಮಂಡಳಿಗಳಲ್ಲಿ ದಲಿತರಿಗೆ ಸೂಕ್ತ ಸ್ಥಾನ ನೀಡುತ್ತಿದ್ದವು. ಆದರೆ ಎಲ್ಲ ಬಿಟ್ಟಂತಿರುವ ಈ ಸರ್ಕಾರದಲ್ಲಿ ಉನ್ನತ ಜಾತಿಯವರಿಗೆ, ಆರೆಸ್ಸೆಸ್ ಮೂಲದವರಿಗೆ ಇನ್ನಿಲ್ಲದ ಮಹತ್ವ ಸಿಗುತ್ತಿದೆ.


ಮಡಿಯಾಳ್

ಜನರಿಂದ ಚುನಾಯಿತಗೊಂಡ ಸರ್ಕಾರವನ್ನು ನಿಯಂತ್ರಿಸಲೆಂದೇ ರಚಿಸಲಾದ ಸಮನ್ವಯ ಸಮಿತಿಯಲ್ಲಿ ಒಬ್ಬರೇ ಒಬ್ಬ ದಲಿತರು ಇಲ್ಲದಿರುವುದೇ ಇದಕ್ಕೆ ಸಾಕ್ಷಿ. ಇದರ ವಿರುದ್ಧ ಬಿಜೆಪಿಯ ದಲಿತ ಶಾಸಕ, ಎಂಪಿಗಳು ಧ್ವನಿ ಎತ್ತಿ ತಣ್ಣಗಾಗಿದ್ದಾರೆ. ಆದರೆ ಹಿರಿಯ ಸಂಸದ ರಮೇಶ ಜಿಗಜಿಣಗಿ ಎತ್ತಿರುವ ಪ್ರಶ್ನೆ, ಬಿಜೆಪಿಯಲ್ಲಿ ದಲಿತರು ದರಿದ್ರರಾ?' ಎಂಬುದನ್ನು ಸಾಬೀತು ಮಾಡಿದೆ.


ಈರಯ್ಯ ಮಠ್

ಪರಿಶಿಷ್ಟ ಮೀಸಲು ಹಂಚಿಕೆ ತಾರತಮ್ಯ ವಿಚಾರಣಾ ಆಯೋಗಕ್ಕೆ ಯಡ್ಡಿ ಸಹಕಾರ ಕೊಡದಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಈ ಹಿಂದೆ ವಿರೋಧಪಕ್ಷದಲ್ಲಿದ್ದಾಗ ಇಂತಹ ಏಕಸದಸ್ಯ ಆಯೋಗ ರಚಿಸಲು ನೆಲ-ಮುಗಿಲು ಒಂದುಮಾಡುವಂತೆ ಇದೇ ಯಡ್ಡಿ ಹಾರಾಡಿದ್ದರು. ಆದರೀಗ ಈ ಆಯೋಗದ (ನ್ಯಾಯಮೂರ್ತಿ ಸದಾಶಿವ ಆಯೋಗ) ಕಾರ್ಯಕಲಾಪಗಳು ನಡೆಯದ ಹಾಗೆ ಮಾಡಿಟ್ಟಿದೆ ಈ ಸರ್ಕಾರ. ಆಯೋಗದ ಕಾರ್ಯ-ಕೆಲಸಗಳಿಗೆ 15 ಕೋಟಿ ರೂ. ನೀಡಬೇಕಾದ ಸರ್ಕಾರಗಳು ಇಲ್ಲಿವರೆಗೆ ನೀಡಿದ್ದು ಬರೀ ಎರಡು ಕೋಟಿ ಮಾತ್ರ. ಇದು ಪರಿಶಿಷ್ಟರ ಬಗ್ಗೆ ಬಿಜೆಪಿಗಿರುವ ಕಾಳಜಿಗೆ ಒಂದು ಸಣ್ಣ ನಿದರ್ಶನ ಮಾತ್ರ.


ಚನ್ನಮಲ್ಲಯ್ಯ

ಉಪಮುಖ್ಯಮಂತ್ರಿಯಾದ ಕೂಡಲೇ ತನ್ನ ಕಚೇರಿಯಿಂದ ಅಂಬೇಡ್ಕರ್ ಭಾವಚಿತ್ರವನ್ನು ಹೊರಹಾಕಿ ದಲಿತರ ವಿರೋಧ ಕಟ್ಟಿಕೊಂಡಾಗ ಈ ಯಡ್ಡಿಯ ನೆರವಿಗೆ ಬಂದದ್ದು ದಲಿತ ಸಂಸದ ರಮೇಶ್ ಜಿಗಜಿಣಗಿ. ಮಾದಿಗರಿಗೆ ಸೂಕ್ತ ಸೌಲಭ್ಯ ಕಲ್ಪಿಸುವುದಾಗಿ ಅಂದು ಬಾಯಿ ಬಿಟ್ಟಿದ್ದ ಯಡ್ಡಿ ಇವತ್ತಿಗೂ ಏನೂ ಮಾಡಿಲ್ಲ.

ರಾಜ್ಯದಲ್ಲಿ 101 ಕೆಳ ಸಮುದಾಯಗಳು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿವೆ. ಅವುಗಳ ಜನಸಂಖ್ಯೆಗನುಗುಣವಾಗಿ ಆರ್ಥಿಕ ಶೈಕ್ಷಣಿಕ ರಾಜಕೀಯ ಅವಕಾಶ, ಸೌಲಭ್ಯಗಳ ಹಂಚಿಕೆಯಾಗಬೇಕು ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿ ಹನ್ನೆರಡು ವರ್ಷಗಳ ಕಾಲ ಹೋರಾಟ ಮಾಡಿದ ಫಲವಾಗಿ 2001ರಲ್ಲಿ ನ್ಯಾಯಮೂರ್ತಿ ಸದಾಶಿವ ಆಯೋಗ ಸ್ಥಾಪಿಸಲಾಯ್ತು, 2001ರ ಜನಗಣತಿ ಪ್ರಕಾರ, ರಾಜ್ಯದಲ್ಲಿ 1.20 ಕೋಟಿ ಪರಿಶಿಷ್ಟ ಜಾತಿಯ ಜನರಿದ್ದು, ಇವರಲ್ಲಿ ಶೇ. 70ಕ್ಕೂ ಅಧಿಕ ಸಂಖ್ಯೆಯಲ್ಲಿ ಮಾದಿಗರಿದ್ದಾರೆ ಎಂದು ಆಯೋಗ ವರದಿ ಮಾಡಿದೆ. ಇಷ್ಟು ಸಂಖ್ಯೆಯಲ್ಲಿರುವ ಮಾದಿಗರಿಗೆ ಪರಿಶಿಷ್ಟ ಜಾತಿಯ ಸೌಲಭ್ಯಗಳಲ್ಲಿ ಶೇ. 2ರಷ್ಟು ಮಾತ್ರ ಸಿಗುತ್ತಿವೆ ಎಂಬುದನ್ನು ಮಾದಿಗ ಹೋರಾಟ ಸಮಿತಿಯ ರಾಜ್ಯ ಕಾರ್ಯದರ್ಶಿ ಮುತ್ತಣ್ಣ ಚೆಣ್ಣೂರ್ ಸರ್ಕಾರಕ್ಕೆ ನೆನಪಿಸುತ್ತಲೇ ಬಂದಿದ್ದಾರೆ. ಆದರೆ ಯಡ್ಡಿ ಮಾತ್ರ ಇದಕ್ಕೊಂದೂ ಕಿವಿಗೊಟ್ಟಿಲ್ಲ.

ರಾಜ್ಯದ ಮಾದಿಗರಿಗೆ ಒಳಮೀಸಲಾತಿ ಸೌಲಭ್ಯ ಕಲ್ಪಿಸಬೇಕಾದ ಸರ್ಕಾರ ಪರಿಶಿಷ್ಟರಲ್ಲೇ ಒಂದಿಷ್ಟು ಪ್ರಬಲವಾದ ಲಾಬಿಗಳಿಗೆ ಅಡ್ಡಬೀಳುತ್ತಿದೆ.

ಇದನ್ನೆಲ್ಲ ವಿರೋಧಿಸಿ ಹೋರಾಟ ಸಮಿತಿ ಇತ್ತೀಚೆಗೆ ಬಾಗಲಕೋಟೆಗೆ ನೆರೆ ಪರಿಹಾರ ಕಾರ್ಯ ವೀಕ್ಷಣೆಗೆ ಬಂದಿದ್ದ ಯಡ್ಡಿಯನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿತ್ತು, ಒಂದು ವಾರದ ಗಡುವು ನೀಡಿ ಪಾರಾದ ಯಡ್ಡಿ ಆಮೇಲೆ ತನ್ನ ಕುರ್ಚಿ ಉಳಿಸಿಕೊಳ್ಳುವುದರಲ್ಲೇ ಮುಳುಗಿಹೋದರು. ಡಿಸೆಂಬರ್ 22ರಂದು ಬಾಗಲಕೋಟೆಯಲ್ಲಿ ಬೃಹತ್ ಪ್ರತಿಭಟನಾ ಸಭೆ ನಡೆಸಿದ ಉತ್ತರ ಕರ್ನಾಟಕದ ಮಾದಿಗರು ಯಡ್ಡಿಯ ಪ್ರತಿಕೃತಿ ಸುಟ್ಟುಹಾಕಿದರು. ಆಗಲೂ ಯಡ್ಡಿಗೆ ಇದು ತಾಗಲೇ ಇಲ್ಲ.

ಉತ್ತರ ಕರ್ನಾಟಕದ ಹಿರಿಯ ಮಾದಿಗ ರಾಜಕಾರಣಿಗಳ ಪೈಕಿ ಒಬ್ಬರಾಗಿರುವ ಬಿಜೆಪಿಯ ಸಂಸದ ರಮೇಶ ಜಿಗಜಿಣಗಿ ಹಿಂದೆ 30ಕ್ಕೂ ಹೆಚ್ಚು ಪರಿಶಿಷ್ಟ ಜಾತಿಯ ಶಾಸಕರಿದ್ದಾರೆ. ಅವರೆಲ್ಲ ಈಗ ಜಿಗಜಿಣಗಿ ಮೂಲಕ ಸಣ್ಣಗೆ ಕಿಡಿಕಾರತೊಡಗಿದ್ದಾರೆ.


ರಾಜ್ಯದಲ್ಲಿ 36 ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರಗಳಿವೆ.

13 ಜನ ಬೋವಿ ಶಾಸಕರು, 11 ಜನ ಛಲವಾದಿ (ಎಡಗೈ) ಶಾಸಕರು, 6 ಜನ ಲಂಬಾಣಿ ಶಾಸಕರು, 5 ಜನ ಮಾದಿಗ ಶಾಸಕರಿದ್ದಾರೆ. ಈ ಸರ್ಕಾರದಲ್ಲಿ ಬೋವಿ ಜನಾಂಗದ ಶಾಸಕರಿಗೆ ಮಾತ್ರ ಪ್ರಾತಿನಿಧ್ಯ ಸಿಕ್ಕಿದೆ. ಪರಿಶಿಷ್ಟರ ಪೈಕಿ ಜಾಸ್ತಿ ಇರುವ ಮಾದಿಗರ ಪ್ರತಿನಿಧಿಯಾಗಿ ಗೋವಿಂದ ಕಾರಜೋಳಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದೆ. ಮಾದಿಗ ಅಧಿಕಾರಿಗಳಿಗೆ ಆಯಕಟ್ಟಿನ ಸ್ಥಾನಗಳನ್ನೂ ನೀಡಿಲ್ಲ, ನಿಗಮ-ಮಂಡಳಿಗಳಲ್ಲೂ ಮಾದಿಗರಿಗೆ ಅನ್ಯಾಯವಾಗುತ್ತಲೇ ಇದೆ. ಯಾವುದೇ ವಿಶ್ವವಿದ್ಯಾಲಯದಲ್ಲಿ ಮಾದಿಗ ಚನ್ನಯ್ಯನ ಅಧ್ಯಯನ ಪೀಠವೇ ಇಲ್ಲ.

ಮಾದಿಗರನ್ನು ತುಳಿಯಲು ಕೆಲ ಪಟ್ಟಭದ್ರ ಬೋವಿ (ಲಿಂಬಾವಳಿ ತರಹದವರು) ಲಂಬಾಣಿ ನಾಯಕರನ್ನು ಬಳಸಿಕೊಳ್ಳುತ್ತಿರುವ ಈ ಮನುವಾದಿ ಸರ್ಕಾರ ಮೂಲಸ್ಪೃಶ್ಯರಾದ ಮಾದಿಗರ ವಿರುದ್ಧ ಇತರ ಅಸ್ಪೃಶ್ಯರನ್ನು ಎತ್ತಿ ಕಟ್ಟಲು ಹವಣಿಸುತ್ತಿದೆ. ಇದು ಕೇವಲ ಮಾದಿಗರಷ್ಟೇ ಅಲ್ಲ, ಎಲ್ಲ ದಮನಿತ ಜಾತಿಗಳ ವಿರುದ್ಧ ನಡೆದಿರುವ ದ್ರೋಹವಾಗಿದೆ.

ಜಿಗಜಿಣಗಿ, ಕಾರಜೋಳರು ಈಗಲಾದರೂ ಮಾದಿಗರ ಹೋರಾಟಕ್ಕೆ ಸಕ್ರಿಯ ಶಕ್ತಿ ತುಂಬುವಂತಾಗಲಿ.

● ಮೇಘರಾಜ್



ಬಿಜಾಪುರ

ಯತ್ನಾಳ್ ಜೆಡಿಎಸ್‌ಗೆ ಬಿಜೆಪಿ ಹಿನ್ನಡೆಗೆ...

ಈ ವರದಿ ಪ್ರಿಂಟಾಗಿ ನಿಮ್ಮ ಕೈ ತಲುಪುವ ಮೊದಲೇ ಬಿಜಾಪುರದ ಬಸನಗೌಡ ಪಾಟೀಲ್ ಯತ್ನಾಳ್ ಬಿಜೆಪಿ ತೊರೆದು ಜೆಡಿಎಸ್ ಸೇರಲಿರುವುದು ಬಹುತೇಕ ಖಚಿತವಾಗಿದೆ. ಅಲ್ಲಿಗೆ ಇಲ್ಲಿನ ಬಿಜೆಪಿಯ ಬೆನ್ನೆಲುಬಲ್ಲೇ ಬಿರುಕು ಬಿಟ್ಟಂತಾಗಲಿದೆ.

ಕಳೆದ ಎರಡು ವರ್ಷಗಳಿಂದ ಬಿಜೆಪಿಯಲ್ಲಿ ಯತ್ನಾಳ್ 'ಅನ್ಯ' ಮನುಷ್ಯನೆಂದೇ ಗುರುತಿಸಲ್ಪಟ್ಟಿದ್ದರು. ಒಳಗೊಳಗೆ ಸಂಸದ ಅನಂತಕುಮಾರರ ಸಪೋರ್ಟ್ ಇದ್ದರೂ ಯತ್ನಾಳ್ ಮಾತಿಗೆ ಬಿಜಾಪುರ ಬಿಜೆಪಿಯಲ್ಲಿ ನಯಾಪೈಸೆ ಕಿಮ್ಮತ್ತಿರಲಿಲ್ಲ. ಇತ್ತ ಬಿಜಾಪುರ ಶಾಸಕ ಅಪ್ಪುಪಟ್ಟಣಶೆಟ್ಟಿ, ಸಿಎಂ ಯಡ್ಡಿಯ ಬೆಂಬಲದಿಂದ ಹೂಂಕರಿಸುತ್ತಲೇ ಬರುತ್ತಿದ್ದು ಇದೂ ಯತ್ನಾಳ್‌ಗೆ ತಲೆನೋವಾಗಿತ್ತು. ಇಂದೋ ನಾಳೆಯೋ ಯತ್ನಾಳ್ ಜೆಡಿಎಸ್‌ಗೆ ಎಂಬ ಸುದ್ದಿ ಆಗಾಗ ಬಂದಿತ್ತಾದರೂ, ಈಗದು ಬರೀ ಸುದ್ದಿಯಾಗಷ್ಟೇ ಉಳಿಯದೇ ಕ್ಲೈಮ್ಯಾಕ್ಸ್ ಹಂತ ತಲುಪುತ್ತಿದೆ.

1990ಕ್ಕೂ ಮುಂಚೆ ಜನತಾ ಪರಿವಾರದ ಭದ್ರಕೋಟೆಯಾಗಿದ್ದ ಬಿಜಾಪುರದಲ್ಲಿ ಬಿಜೆಪಿಯ ಕಮಲದ ಧ್ವಜ ಹಾರಿಸುವಲ್ಲಿ ಯತ್ನಾಳ್ ಸಾಕಷ್ಟು 'ಕೆಲಸ' ಮಾಡಿದ್ದರು. ವಿದ್ಯಾರ್ಥಿದೆಸೆಯಿಂದಲೂ ಚೆಡ್ಡಿ ಸಿದ್ಧಾಂತವನ್ನು ತಲೆಗೇರಿಸಿಕೊಂಡೇ ಬಂದಿರುವ ಯತ್ನಾಳ್ ಆರೆಸ್ಸೆಸ್‌ನ ಕುಟಿಲ ತಂತ್ರಗಳನ್ನು ಜಾರಿಗೆ ತಂದು ಇಲ್ಲಿ ಬಿಜೆಪಿಗೆ ಭದ್ರ ನೆಲೆ ಒದಗಿಸಿದ್ದರು. ಬಿಜೆಪಿಯಿಂದ ಎಂಎಲ್‌ಎ, ಎಂಪಿ ಆದದ್ದಲ್ಲದೇ ಕೇಂದ್ರ ಸಚಿವಗಿರಿಯನ್ನೂ ಪಡೆದಿದ್ದ ಯತ್ನಾಳ್ ಇತ್ತೀಚಿನ ವರ್ಷಗಳಲ್ಲಿ ಯಡ್ಡಿ ವಿರೋಧ ಕಟ್ಟಿಕೊಂಡು ಬಿಜೆಪಿಯಲ್ಲಿ ಅನಾಥರಾಗತೊಡಗಿದರು.

1994ರಲ್ಲಿ ತನ್ನ ಚೆಡ್ಡಿ ಸಿದ್ಧಾಂತದಿಂದ ಎಂಎಲ್‌ಎ ಆದ ಯತ್ನಾಳ್, 1998ರಲ್ಲಿ ಟಿಕೆಟ್ ಸಿಗದೇ ಒದ್ದಾಡಿದರು. 1999ರಲ್ಲಿ ತನ್ನ ಲಿಂಗಾಯತ ಜಾತಿ ಮತ್ತು ಹಣದ ದರ್ಪದಿಂದ ಎಂಪಿ ಆದ ಯತ್ನಾಳ್ ಅಷ್ಟೊತ್ತಿಗೆ ಪಕ್ಕಾ ಸ್ವಾರ್ಥಿಯಾಗಿದ್ದರು. 2004ರ ಎಂಪಿ ಚುನಾವಣೆ ಗೆದ್ದು ಕೇಂದ್ರದಲ್ಲಿ ಸಹಾಯಕ ರೈಲ್ವೇ ಮಂತ್ರಿಯಾದರೂ ಬಿಜಾಪುರದ ಬ್ರಾಡ್‌ಗೇಜ್ ಕಾಮಗಾರಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಲೇ ಇಲ್ಲ. ಸದ್ಯ ಅದ್ಹೇಗೋ ಬಿಜಾಪುರ ರೈಲ್ವೇ ಕಾಮಗಾರಿ ಮುಗಿಯಿತಾದರೂ ಈ ವಿಷಯದಲ್ಲಿ ಜನರಿಗೆ ಯತ್ನಾಳ್ ಮೇಲೆ ಒಂದಿಷ್ಟು ಮುನಿಸು ಇದ್ದೇ ಇದೆ.

ಅನಂತಕುಮಾರ್ ಹಿಂದೆ ಬಿದ್ದು ಯಡ್ಡಿಯ ವಿರೋಧ ಕಟ್ಟಿಕೊಂಡ ಯತ್ನಾಳ್ ಬಿಜಾಪುರದ ಬಿಜೆಪಿಯಲ್ಲಿ ಅತಂತ್ರರಾಗತೊಡಗಿದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸುವ ಉಮೇದು ತೋರಿಸಿ ಸುಮ್ಮನಾದ ಯತ್ನಾಳ್ ಆಗಿಂದಲೇ ಜಿಲ್ಲೆಯಲ್ಲಿ ಬಿಜೆಪಿಯ ನೆಲೆ ನಾಶ ಮಾಡುವ ಕೆಲಸವನ್ನು ಆರಂಭಿಸಿದ್ದರು.

ಈಗ ರಾಜ್ಯದಲ್ಲಿ ಬಿಜೆಪಿ ಸರ್ಕಾರದ ವಿರೋಧಿ ಅಲೆ ಎದ್ದಿರುವಾಗ, ಬಿಜಾಪುರದ ಲಿಂಗಾಯತರೆಲ್ಲ ಬಿಜೆಪಿಗೆ [illegible] ಹಾಕುತ್ತಿರುವಾಗ ಜೆಡಿಎಸ್‌ನ ದೊಡ್ಡಗೌಡರು ಯತ್ನಾಳ್‌ಗೆ ಕೈಬೀಸಿ ಕರೆದಿದ್ದಾರೆ.

ಯತ್ನಾಳ್ ಜೆಡಿಎಸ್ ಸೇರಿದರೆ ಬಿಜೆಪಿಗೆ ನಷ್ಟ ಖಚಿತ. ಆದರೆ ಇದರ ಲಾಭ ಜೆಡಿಎಸ್‌ಗೆ ಹೋಗುವ ಬದಲು ಕಾಂಗ್ರೆಸ್ಸಿಗೆ ಹೋಗುವ ಸಾಧ್ಯತೆಯೇ ಹೆಚ್ಚಾಗಿದೆ. ಒಟ್ಟಿನಲ್ಲಿ ಬಿಜಾಪುರದಲ್ಲಿ ಬಿಜೆಪಿಯ ಬೆನ್ನೆಲುಬು ಮುರಿಯುವುದಂತೂ ಗ್ಯಾರಂಟಿ ಆಗುತ್ತಿದೆ. ಸದ್ಯ ಅಷ್ಟು ಸಾಕಲ್ಲವೇ?

● ಆಲಬಾಳ

ಕಿವುಡು-ಕುರುಡು ಸರ್ಕಾರ ಎಂದರೆ ಇದೇ ಅಲ್ಲವೆ?

ಸಮಾಜದಲ್ಲಿ ಇವತ್ತಿಗೂ ಬಡವರಾಗಿದ್ದು, ಅವರು ಹಿಂದುಳಿದವರಾಗಿದ್ದರಂತೂ ಯಾರೂ ಕೇಳುವವರೇ ಗತಿ ಇರುವುದಿಲ್ಲ. ಅವರ ಕಣ್ಣೀರು ಒರೆಸುವುದಿರಲಿ, ಅತ್ತಿದ್ದಕ್ಕೂ ಯಾಕೆ ಅಳುತ್ತಿದ್ದಿ ಎಂದು ಕೇಳುವವರೇ ಇರುವುದಿಲ್ಲ. ಇಂಥ ಅನಾಥ ಸ್ಥಿತಿಯಿಂದ ಕಂಗಾಲಾಗಿರುವ ಕುಟುಂಬವೊಂದರ ದಾರುಣ ಚಿತ್ರ ಮನುಷ್ಯತ್ವ ಇರುವ ಎಂಥವರಲ್ಲೂ ನಡುಕ ಹುಟ್ಟಿಸುವಂಥದ್ದು. ಆದರೆ ಇದನ್ನು ಕೇಳುವ ಪುರುಸೊತ್ತು, ನೋಡುವ ದೃಷ್ಟಿ ನಮ್ಮ ಆಳುವ ಸರ್ಕಾರಕ್ಕೆ ಹಾಗೂ ಆಡಳಿತಕ್ಕೆ ಇಲ್ಲದೇ ಇರುವುದು ನಮ್ಮೆಲ್ಲರ ದುರಂತ ಎಂದು ಹೇಳಲೇಬೇಕಾಗಿದೆ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಕೊಂಕಲ್ ಎಂಬ ಕುಗ್ರಾಮದಲ್ಲಿ ನವೆಂಬರ್ 16, 2009 ರಂದು ಭೀಕರವಾದ ದುರ್ಘಟನೆಯೊಂದು ಜರುಗಿಹೋಗಿದೆ. ಕಾವಲಿ ಹಾಗೂ ಬಾವುರ ಕುಟುಂಬದ ಒಟ್ಟು ಏಳು ಜನ ನತದೃಷ್ಟರು ಮಂಡಕ್ಕಿ ಒಗ್ಗರಣೆ ತಿಂದ ಕಾರಣ ಮಾತ್ರದಿಂದಲೆ ನಿಗೂಢ ರೀತಿಯಲ್ಲಿ ಅಕ್ಷರಶಃ ಹುಳು - ಹುಪ್ಪಡಿಗಳಂತೆ ಸತ್ತುಹೋಗಿದ್ದಾರೆ. ಮಂಡಕ್ಕಿಯನ್ನು ತೋಯಿಸಲು ಇಟ್ಟಿದ್ದ ನೀರು ಹೊರಗೆ ಚೆಲ್ಲುತ್ತಲೇ ತಿಪ್ಪೆಯಲ್ಲಿರುವ ಹುಳುಗಳೂ ಕ್ಷಣಾರ್ಧದಲ್ಲಿ ವಿಲಿವಿಲಿ ಒದ್ದಾಡಿ ಸತ್ತುಹೋಗಿವೆ. ಒಗ್ಗರಣೆ ತಿಂದ ಕೋಳಿ -ನಾಯಿಗಳೂ ಇಹಲೋಕ ತ್ಯಜಿಸಿವೆ.

ಇದಕ್ಕೆಲ್ಲ ವಿಷಪೂರಿತ ಆಹಾರವೇ ಕಾರಣ ಎಂದು ದನಕಾಯುವ ಹುಡುಗ ಸಹ ಕ್ಷಣಾರ್ಧದಲ್ಲಿಯೆ ಹೇಳಿಬಿಡಬಲ್ಲ. ಆದರೆ ಮಾನ - ಮರ್ಯಾದೆ ಎಂಬುದೇ ಇಲ್ಲದ ಚೆಡ್ಡಿಗಳ ಹೆತ್ಲಾಂಡಿ ಸರ್ಕಾರದ ನಾಮರ್ಧ ಅಧಿಕಾರಿಗಳು ಇವತ್ತಿಗೂ ಕಣ್ಣ ಮೇಲೆ ಕೌದಿ ಹೊದ್ದುಕೊಂಡು ಗಡದ್ದಾಗಿ ನಿದ್ದೆ ಮಾಡುತ್ತಿದ್ದಾರೆ.

ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಈ ದುರ್ಘಟನೆ ಜರುಗಿಹೋಗಿ ಒಂದೂವರೆ ತಿಂಗಳುಗಳೆ ಗತಿಸಿಹೋಗಿದ್ದರೂ ಇವತ್ತಿಗೂ ಯಾವುದೇ ಸಣ್ಣ ಕೇಸು ಕೂಡ ದಾಖಲೆಯಾಗಿಲ್ಲ ಎಂಬುದು. ಅಳಿದುಳಿದ ಕಾವಲಿ - ಬಾವುರ ಕುಟುಂಬದ ಸದಸ್ಯರು ಪೊಲೀಸ್ ಠಾಣೆಗೆ ಎಡತಾಕಿದರೂ ಅವರು ಕ್ಯಾರೆ ಎನ್ನುತ್ತಿಲ್ಲ. ಹೋಗಲಿ ಇವರು ಬರೆದುಕೊಂಡ ಬಂದ ಅರ್ಜಿಯನ್ನು ಕಣ್ಣೆತ್ತಿ ನೋಡುವುದಕ್ಕೂ ತಯಾರಿಲ್ಲ.

ಇದೆಲ್ಲದರಿಂದ ಇಡೀ ಜಿಲ್ಲೆಯ ಜನತೆ ಸರಕಾರದ ಮೇಲಿನ ವಿಶ್ವಾಸವನ್ನು ಕಳೆದುಕೊಂಡು ಅನಾಥಪ್ರಜ್ಞೆಯಿಂದ ಬಳಲುತ್ತಿದ್ದಾರೆ. ಕನಿಷ್ಠ ಪಕ್ಷ ಮಾನವ ಹಕ್ಕುಗಳ ಆಯೋಗವಾದರೂ ಈ ಗ್ರಾಮದ ನತದೃಷ್ಟ ಕುಟುಂಬದತ್ತ ಕಣ್ಣು ಹರಿಸಿ ನಿಗೂಢ ಸಾವಿಗೆ ಮೂಲ ಕಾರಣರ್ಯಾರು ಎಂದು ಪತ್ತೆ ಮಾಡುವುದೆ?

● ವಿಶ್ವಾರಾಧ್ಯ ಸತ್ಯಂಪೇಟೆ

ಹುಬ್ಬಳ್ಳಿ: 'ಗೋಮಾತೆ'ಯ ಹೆಸರಲ್ಲಿ ಸಗಣಿ ತಿನ್ನುವ ಚೆಡ್ಡಿಗಳು!

ರೈತರ ಜೀವನಾಡಿ ಗೋವು".

...ವ ಈ ಮಾತನ್ನು ರೈತರಿಗೆ ಯಾರೂ ಹೇಳಬೇಕಿಲ್ಲ. ಆದರೆ ಹಿಂದೂ ...ಪ ರಕ್ಷಣೆಯ ಗುತ್ತಿಗೆ ಹಿಡಿದವರಂತೆ ಮಾತನಾಡುವ, ಕೃಷಿ ಚಟುವಟಿಕೆಗಳ ...ಸಾತ್ಕಾರ ತೋರುತ್ತಲೇ ಬಂದಿರುವ, ಬಂಡವಾಳಶಾಹಿಗಳ ಪಾದಗಳನ್ನು ...ಲೇ ಇರುವ ಬಿಜೆಪಿಗಳು 'ಗೋಮಾತೆ'ಯ ಕುರಿತು ಕಾಳಜಿ ...ಸುವುದರ ಹಿಂದೆ, ಈ ಸಮಾಜವನ್ನೇ ಒಡೆಯುವ ಹುನ್ನಾರವಿದೆ. ...ಜನವಿರೋಧಿ ನಿಲುವಿನ ಬಿಜೆಪಿ, ...ಗಳು ಕೆಲ ಕಪಟಸ್ವಾಮೀಜಿಗಳನ್ನು, ...ಯುತ ಪುಢಾರಿಗಳನ್ನು ಮತ್ತು ...ಡಿ ಮನೆಹಾಳರನ್ನು ಮುಂದೆಬಿಟ್ಟು ...ಮಾತೆ'ಯ ಹೆಸರಲ್ಲಿ ಸೆಂಟಿಮೆಂಟ್ ...ತ್ತ ಗೋಮಾಂಸ ಸೇವನೆ ಪರಮಪಾಪ ಬಿಂಬಿಸುತ್ತ, ಗೋಮಾಂಸವನ್ನೇ ...ವ ಮುಸ್ಲಿಮರ ವಿರುದ್ಧ ಇತರರನ್ನು ...ಸುವ ಕೆಲಸ ಮಾಡುತ್ತಿದ್ದಾರೆ. ದನಗಳ ...ಭರ್ಜರಿ ವ್ಯಾಪಾರ ನಡೆಸುತ್ತಿರುವುದಕ್ಕೆ ...ಶ ಸ್ವಾಮೀಜಿಯೊಬ್ಬನೇ ಉದಾಹರಣೆ ...ಅಂತಹ ನೂರಾರು ಜನ 'ವ್ಯಾಪಾರಿ ...ಜ್ಯಾದ್ಯಂತ 'ಗೋರಕ್ಷಣೆ'ಯ ಹೆಸರಲ್ಲಿ ...ಜಮೀನು ಕಬಳಿಸುತ್ತ ಜನರ ದುಡ್ಡು ...ತ್ತ ನಡೆದಿದ್ದಾರೆ. ಅಂತಹ ಪ್ರಕರಣಗಳ ...ಲ್ಲಿ ಹುಬ್ಬಳ್ಳಿಯ ಗೋಗಳ್ಳರ, ಭೂಗಳ್ಳರ ...ವನ್ನು ವಿವರವಾಗಿ ನೀಡುತ್ತಿದ್ದೇವೆ.





...ಲ್ಲಿ 'ಗೋರಕ್ಷಕ'ನ ವೇಷಧರಿಸಿ ಹತ್ತಾರು ...ಂದ ಸರ್ಕಾರಿ ದುಡ್ಡನ್ನು ಲೂಟಿ ...ಯುತ್ತಿರುವ ಗುಂಪಿನ ನಾಯಕ ...ಹಿಂದೂವೀರ ಅರ್ಥಾತ್ ಸಮಾಜದ ಪಾಲಿನ ಕಂಟಕನ ಹೆಸರು ...ರಾಜ್ ಕವಾಡ. ಗೋವುಗಳ ಮುಖ ತೋರಿಸಿ ಫಂಡು ಎತ್ತುವ, ...ಗಳ ಪುನರ್ ವ್ಯವಸ್ಥೆಯ ಹೆಸರಲ್ಲಿ ಸರ್ಕಾರಿ ಭೂಮಿಯನ್ನು ಪುಗಸಟ್ಟೆ ...ಆದನ್ನು ಶ್ರೀಮಂತರಿಗೆ ಮಾರಿಕೊಳ್ಳುವ ಈ ಖದೀಮ ಕವಾಡ ...ರಕ್ಷಕ, ಗೋರಕ್ಷಕ ಚೆಡ್ಡಿಗಳ ಒಂದು ಸಾಂಕೇತಿಕ ರೂಪವಷ್ಟೇ ...ಂತ ಇಂತಹ ಹಲವು ಬಿಜೆಪಿ ಕ್ರಿಮಿಗಳಿದ್ದು ಅವು ಕರಾವಳಿ ...ಲ್ಲಿ 'ಗೋಮಾತೆ' ಹೆಸರಲ್ಲಿ ಇಡೀ ಸಮಾಜದ ಸ್ವಾಸ್ಥ್ಯ ಕೆಡಿಸುವಲ್ಲಿ ...ಗಿವೆ.

ಚೆಡ್ಡಿ ಕವಾಡನ ಕಪಟತನ

...ಗಳ ಹೆಸರಲ್ಲಿ ಈ ಹಿಂದೂತ್ವದ ದರ್ಪದ ಹಂದಿಗಳು ಹೇಗೆ ...ತ್ತವೆ ಎಂಬುದಕ್ಕೆ ಇದೊಂದು ನಿದರ್ಶನವಷ್ಟೇ. ಇದರ ಪೂರ್ತಿ ...ಯಲು ಒಂದಿಷ್ಟು ಹಿನ್ನೆಲೆಯ ಅಗತ್ಯವೂ ಇದೆ.

...ಹೀಗಿದೆ

...93ರಲ್ಲಿ ಬ್ರಿಟಿಷ್ ಅಧಿಪತ್ಯದಲ್ಲಿ ಕೆಲವು ಜನ ಪ್ರಾಣಿಪ್ರಿಯರು ಹುಬ್ಬಳ್ಳಿಯ ...ದ್ಯುತ್ ನಗರದ ಸಮೀಪ(ಸಮೀಪ) ಸಮೀಪ 11 ಎಕರೆ 30 ಗುಂಟೆ, ...ನ್ನು ಖರೀದಿಸಿ ಅಲ್ಲಿ ಬಿಡಾಡಿ ದನಗಳನ್ನು, ರೈತಾಪಿ ಜನ ಸಾಕಲಾಗದ ...ನುವಾರುಗಳನ್ನು ಸಾಕಲು ಒಂದು ಗೋಶಾಲೆ ಆರಂಭಿಸಿದರು. ...ಪಾಂಜರಪೋಳ ಸಂಸ್ಥೆ ಎಂಬ ಹೆಸರನ್ನು ಇಟ್ಟರು. ಆಗಿನ ಕೆಲ ...ತ ರೈತರು ಇದಕ್ಕೆ ಹಣದ ನೆರವು ನೀಡುತ್ತಿದ್ದರು. ಮುಂದೆ ...ನಂತರ ಕೇಂದ್ರ ಸರ್ಕಾರದ ಎನಿಮಲ್ ವೆಲ್‌ಫೇರ್ ಬೋರ್ಡ್ ಸಹ ...ಧನಸಹಾಯ ಮಾಡುತ್ತಾ ಬಂದಿತು. ಹೀಗೆ ಈ ಪಾಂಜರಪೋಳ ...ಚೆನ್ನಾಗಿ ನಡೆಯುವಾಗಲೇ ಅಲ್ಲಿ ಆರೆಸ್ಸೆಸ್ ಬುದ್ಧಿಯ 'ಗೋರಕ್ಷಕ'ರ ...ಯಿತು. ಮುಂದೆ ಅಲ್ಲಿ ನಡೆದಿದ್ದೆಲ್ಲ ಆಕಳ ಹೆಸರಿನ್ಯಾಗ ಆಸ್ತಿ ...ದೆ ಆಗಿಬಿಟ್ಟಿತು.

1950ರಲ್ಲಿ ಈ ಗೋಶಾಲೆಗೆ ಬೀಗ ಜಡಿದರು. ಹಾಗೆ ಬೀಗ ಜಡಿದು ಸುಮ್ಮನೇ ಕೂಡಲಿಲ್ಲ. 11 ಎಕರೆಯಲ್ಲಿ ಅರ್ಧಭಾಗವನ್ನು ಗ್ರಾನೈಟ್ ಕುಳಗಳಿಗೆ, ಪೆಟ್ರೋಲ್ ಬಂಕ್ ಮಾಲೀಕರುಗಳಿಗೆ 99 ವರ್ಷಗಳ ಲೀಸ್‌ಗೆ ಮಾರಿಕೊಂಡುಬಿಟ್ಟರು.

ಮತ್ತೊಂದೆಡೆ ಗೋವಿನ ಮುಖ ತೋರಿಸುತ್ತಾ ಪರಸಾಪೂರ ಗ್ರಾಮದ 51 ಎಕರೆ ಭೂಮಿಯನ್ನು ಕೇವಲ 20 ಸಾವಿರ ರೂಪಾಯಿಗಳಿಗೆ ಗಿಟ್ಟಿಸಿಕೊಂಡುಬಿಟ್ಟರು. ಗೋರಕ್ಷಣೆಯ ಹೆಸರಲ್ಲಿ ಈ ಧೂರ್ತರು ರೈತರಿಂದ ಸಸ್ತಾ ಬೆಲೆಗೆ ಕಿತ್ತುಕೊಂಡ ಈ ಭೂಮಿಯ ಬೆಲೆ ಇವತ್ತು ಹತ್ತು ಕೋಟಿ ರೂ.ಗಳ ಮೌಲ್ಯ ಹೊಂದಿದೆ. ಇಲ್ಲಿ ಅವರು ಯಾವ ಗೋಶಾಲೆಯನ್ನೂ ತೆರೆಯಲಿಲ್ಲ. ಈ ಖಾಲಿಭೂಮಿಯಲ್ಲಿ ನೂರಾರು ರೈತರು ಬೇಸಾಯ ಮಾಡುತ್ತ ಬಂದರು. ಆರು ವರ್ಷಗಳ ಹಿಂದೆ ಮತ್ತೇ ದಾಳಿಯಿಟ್ಟ 'ಗೋರಕ್ಷಕರು' ಈ ಭೂಮಿಯ ಮಾರಾಟದಲ್ಲಿ ಮುಳುಗಿದ್ದಾರೆ.

ಅಂದಂತೆ, ಈಗ ಈ ಎಲ್ಲ ಅಧ್ವಾನಗಳಲ್ಲಿ ಇಂಟರ್‌ವಲ್‌ನಲ್ಲಿ ಎಂಟ್ರಿ ಕೊಡುವ ಮೇಘರಾಜ ಕವಾಡ ಎಂಬ ವಿಲನ್‌ಗೆ ಈಗ 'ಗೋಮಾತೆ'ಯೇ ಲಕ್ಷ್ಮೀಮಾತೆ! 1979ರಲ್ಲಿ ಎಸ್.ಆರ್.ಬೊಮ್ಮಾಯಿ ಆಶೀರ್ವಾದದಿಂದ ಪಾಂಜರಪೋಳ ಸಂಸ್ಥೆಗೆ ಈ ಮೇಘರಾಜ ಕವಾಡ್ ವಕ್ಕರಿಸಿಬಿಟ್ಟ. ಈ ಪುಣ್ಯಾತ್ಮ ಈಗಾಗಲೇ ಗೋಶಾಲೆಯ ಆರು ಎಕರೆ ಭೂಮಿಯನ್ನು ಕಂಡಕಂಡ ಕಳ್ಳರಿಗೆ 99 ವರ್ಷಗಳವರೆಗೆ ಲೀಸ್ ಕೊಟ್ಟುಬಿಟ್ಟಿದ್ದಾರೆ.

ಒಂದು ಸ್ಯಾಂಪಲ್

ಆರ್.ವಿ.ದೇಶಪಾಂಡೆ ಶಿಷ್ಯ ದಾಂಡೇಲಿಯ ಮುನ್ನಾಭಾಯಿ ಎಂಬುವವನಿಗೆ ಹೋಟೆಲ್ ತೆರೆಯಲು ಪಾಂಜರಪೋಳ ಗೋಸಂಸ್ಥೆಯ ಜಾಗದಲ್ಲಿ 7 ಗುಂಟೆ ಭೂಮಿಯನ್ನು ಗುಂಟೆಗೆ ತಲಾ 4 ಲಕ್ಷದಂತೆ 28 ಲಕ್ಷಗಳಿಗೆ 99 ವರ್ಷ ಅವಧಿಗೆ ಲೀಸ್ ಕೊಡುತ್ತಾನೆ ಮೇಘರಾಜ್ ಕವಾಡ. ಪ್ರತಿ ತಿಂಗಳು ತನಗೆ ಐದುಸಾವಿರ ಎಕ್ಸಟ್ರಾ ರೊಕ್ಕವೂ ಬೇಕು ಎನ್ನುತ್ತಾನೆ ಈ ಕಪಟಿ ಕವಾಡ. ಆಗ ಎಚ್ಚೆತ್ತುಕೊಂಡ ಮುನ್ನಾಭಾಯಿ ಅದೇ ಸಂಸ್ಥೆಯ ಮುಖೇಶ್ ಪಟಾಡಿಯಾ ಎಂಬುವವನಿಗೆ ಪ್ರತಿ ಗುಂಟೆಗೆ 6 ಲಕ್ಷದಂತೆ ಲೀಸ್ ಕೊಟ್ಟುಬಿಟ್ಟ. ಅಂದರೆ ಇಲ್ಲಿ ರೈತರ ಭೂಮಿಯೊಂದಿಗೆ ಕವಾಡ, ಮುನ್ನಾಭಾಯಿ, ಪಟಾಡಿಯಾಗಳೆಲ್ಲ ಆಟ ಆಡುತ್ತಿದ್ದಾರೆ. ಸರಿಯಾದ ಕ್ರಮ ತೆಗೆದುಕೊಳ್ಳಬೇಕಾದ ಸರ್ಕಾರ ತೆಪ್ಪಗೆ ಬಿದ್ದಿದೆ. ಗೋವುಗಳ ಹೆಸರಲ್ಲಿ ಈ ಎಲ್ಲ ಗೋಮುಖ ವ್ಯಾಘ್ರಗಳು ಭೂದಂಧೆ ನಡೆಸುತ್ತಿವೆ...

ಹಿಂದೂತ್ವ ವೀರರು ಎಲ್ಲಿದ್ದಾರೆ?

ಗೋರಕ್ಷಣೆಯ ಹೆಸರಲ್ಲೇ ಪಕ್ಕಾ ದಂಧೆ ನಡೆಸುತ್ತಿರುವ ಮೇಘರಾಜ ಕವಾಡನ ಬೆಂಬಲಕ್ಕೆ ನಿಂತಿರುವ ಚೆಡ್ಡಿ ಪರಿವಾರ, ಊರೂರಲ್ಲಿ ಗೋಗ್ರಾಮ ಯಾತ್ರೆ ಎಂಬ ಫ್ಲಾಪ್ ಶೋ ಮಾಡುತ್ತಿದೆ. ಗೋರಕ್ಷಣೆಯ ಹೆಸರಲ್ಲಿ ಕೇಂದ್ರ ಸರ್ಕಾರದ ಪ್ರಾಣಿ ಅಭಿವೃದ್ಧಿ ಮಂಡಳಿಯಿಂದ ಹತ್ತು ಲಕ್ಷ ನುಂಗುವ ಕವಾಡನ ಗೋಶಾಲೆಯಲ್ಲಿ ನೆಪಮಾತ್ರಕ್ಕಿರುವ ಗೋವುಗಳಿಗೆ ಹಿಡಿ ಮೇವೂ ಸಿಗುತ್ತಿಲ್ಲ. ಈ ಸಂಸ್ಥೆಯಲ್ಲಿ ಕೆಲಸ ಮಾಡುವ 40 ಕಾರ್ಮಿಕರು, 10 ಆಫೀಸರುಗಳಿಗೆ ಸರಿಯಾದ ಸಂಬಳ-ಸವಲತ್ತುಗಳೂ ಇಲ್ಲ. ಆದರೆ 22 ಮಂದಿಯ ಬೋರ್ಡ್ ಮಾಡಿಕೊಂಡಿರುವ ಕವಾಡ ಮಾತ್ರ ಆಕಳು ಮುಖ ತೋರಿಸಿ ಗುಜರಾತ್, ರಾಜಸ್ತಾನ್, ಚೆನ್ನೈಗಳಿಂದ ಫಂಡು ಎತ್ತುತ್ತಲೇ ಇರುತ್ತಾನೆ. ಈ ಖದೀಮ ಕವಾಡನ ಬೋರ್ಡಿನಲ್ಲಿ ಶಂಕ್ರಣ್ಣ ಮುನವಳ್ಳಿ, ರಮೇಶ್, ಭಾಪಣಾ, ಪಾರಿಸಮಲ ಜೈನ್, ಮಹೇಂದ್ರ ಸಿಂಘಿ, ಛಡ್ಡಾ, ಮುಖೇಶ್ ಪಟಾಡಿಯಾರಂತಹ ಮಹಾಶಯ ಚೆಡ್ಡಿಗಳೇ ತುಂಬಿ ಹೋಗಿದ್ದಾರೆ.

ಪರಸಾಪೂರದ 51 ಎಕರೆಯಲ್ಲಿ ಗೋವುಗಳಿಗೆ ಅಂತಾ ಇರುವುದು ಬರೀ ಎರಡು ಎಕರೆ ಮಾತ್ರ. ಉಳಿದದ್ದೆಲ್ಲ ಕವಾಡನ ವ್ಯಾಪಾರಿ ಉದ್ದೇಶಗಳಿಗಾಗಿ ಬಳಕೆಯಾಗುತ್ತಿದೆ. ಈಗಿಲ್ಲಿ ಇರುವುದು 70 ಆಕಳು, 15 ಎತ್ತು, 6 ಕೋಣ, 2 ಎಮ್ಮೆ, 3 ಕುದುರೆ ಮಾತ್ರ. ಕೆಲವು ಜಾನುವಾರುಗಳು ಯಾವ ಪರಿಸ್ಥಿತಿಯಲ್ಲಿವೆ ಎಂದರೆ ಈ ವರದಿ ಅಚ್ಚಾಗುವ ಮುನ್ನ ಎಷ್ಟು ಪ್ರಾಣಿಗಳು ಸಾಯುತ್ತವೋ ಗೊತ್ತಿಲ್ಲ.

ಅಂದಂತೆ ಇಲ್ಲಿ ನಿತ್ಯ ಸಾಯುವ (ಕೊಲ್ಲಲ್ಪಡುವ) ಗೋವಿನ ಕತೆ ಕೇಳಿ.... ಪರಸಾಪೂರದಿಂದ ಅರ್ಧ ಕಿ.ಮೀ. ದೂರದಲ್ಲಿರುವಾಗಲೇ ನಿಮಗೆ ಗೋಶಾಲೆಯ ದಾರಿ ಸಿಕ್ಕುತ್ತದೆ. ಏಕೆಂದರೆ ಅಲ್ಲಿ ನಾಯಿಗಳು ಗೋವಿನ ಎಲುಬುಗಳೊಂದಿಗೆ ಭೋಜನ ನಡೆಸುತ್ತಿರುತ್ತವೆ. ಇನ್ನು ಗೋಶಾಲೆಯ ಒಳಹೊಕ್ಕರೆ ಕುಂಟುತ್ತಾ ನಿಂತಿರುವ ಆಕಳು, ಕೀವು ಸೋರಿಸುತ್ತ ಮಲಗಿರುವ ಕರು, ಸೊಂಟ ಮುರಿದು ಏಳಲಾರದ ಪರಿಸ್ಥಿತಿಯಲ್ಲಿ ಸಾವಿನ ದಿನಗಳನ್ನು ಎಣಿಸುತ್ತಿರುವ ಎತ್ತುಗಳು.... ಇತ್ಯಾದಿಯೆಲ್ಲ ಕಾಣಸಿಗುತ್ತವೆ. ಇಂಥದ್ದನ್ನೆಲ್ಲ ನೋಡಿದ 'ಲಂಕೇಶ್' ಚಿತ್ರಗಳ ಸಮೇತ ಈ 'ಗೋರಕ್ಷಕ'ರ ಹಡಬೆ ದಂಧೆಯನ್ನು ವಿವರಿಸುತ್ತಿದೆ.

ಇಲ್ಲಿ ಕವಾಡನ ಹಿಂಬಾಲಕ ವಿರೂಪಾಕ್ಷಿಯೇ ಮ್ಯಾನೇಜರ್. ದಿನಕ್ಕೆ 2-3 ದನ ಸಾಯುತ್ತವೆ ಎಂಬುದನ್ನು 'ಪತ್ರಿಕೆ' ಎದುರು ಒಪ್ಪಿಕೊಂಡ. ಈತ ದನಗಳ ಉಪಚಾರದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸದೇ ತಬ್ಬಿಬ್ಬು ಬೀಳುತ್ತಾನೆ. ಸತ್ತ ದನಗಳನ್ನು ಗೋಶಾಲೆಯಿಂದ ಅರ್ಧ ಕಿ.ಮೀ. ದೂರದಲ್ಲಿ ಹೂಳುವುದಾಗಿ ಈ ಕವಾಡನ ಭಂಟ ವಿರೂಪಾಕ್ಷಿ 'ಪತ್ರಿಕೆ'ಗೆ ಹೇಳಿದ. ಆದರೆ ನಾವು ಪರೀಕ್ಷಿಸಿದ ಮೇಲೆ ಗೊತ್ತಾಗಿದ್ದು; ಸತ್ತ ದನಗಳನ್ನೆಲ್ಲ ಗೋಶಾಲೆಯ ಒಳಗೆ ಹೂಳುತ್ತಾರೆ. ಒಮ್ಮೊಮ್ಮೆ ಅಲ್ಲಿ ಇಲ್ಲಿ ಬಿಸಾಡುತ್ತಾರೆ... ಹೇಗಿದೆ ದೈವಿಕ ಹಿಂದೂತ್ವದ ವೀರಾಧಿವೀರರ ಗೋಸೇವೆ?





ಹೀಗೆ ಈ ಕವಾಡನ ಚೆಡ್ಡಿ ಪರಿವಾರ ಎಸೆಯುವ ದನಗಳ ಹೆಣಗಳ ಚರ್ಮವನ್ನು ಹುಬ್ಬಳ್ಳಿಯ ಘೋಡಕೆ ಎಂಬಾತ ಸುಲಿದುಕೊಂಡು ಹೋಗುತ್ತಾನೆ. ಈ ಘೋಡಕೆ ಒಂದು ದನದ ಚರ್ಮ ಸುಲಿದರೆ ಮೇಘರಾಜ ಕವಾಡನ ಕಿಸೆಗೆ ನಾಲ್ಕುನೂರು ರೂಪಾಯಿ ಬಿದ್ದಂತೆಯೇ... ಹಾಗೆಯೇ ಗೋಶಾಲೆಯ 6 ಎಕರೆ ಜಾಗದಲ್ಲಿ ತೋಟ ಮಾಡಿ ತೆಂಗು, ಚಿಕ್ಕು, ಮಾವು, ತೇಗಿನ ಗಿಡಗಳನ್ನು ನೆಟ್ಟಿರುವ ಕವಾಡ ಸದ್ಯದಲ್ಲೇ ಇಲ್ಲೊಂದು ರೆಸಾರ್ಟ್ ಬೇರೆ ಶುರು ಮಾಡುತ್ತಾನಂತೆ!

ತಮಗೆ ಸಾಕಲು ಆಗದ ವೃದ್ಧ ಜಾನುವಾರುಗಳನ್ನು ಈ ಕವಾಡ ಎಂಬ ಕಟುಕನ ಕೈಗಿತ್ತ ರೈತರು ಈ ಗೋಶಾಲೆಯನ್ನೊಮ್ಮೆ ಹೊಕ್ಕು ನೋಡಿದರೆ ತಮ್ಮ ಜಾನುವಾರುಗಳ ದುಸ್ಥಿತಿ ಗೊತ್ತಾಗುತ್ತದೆ. ಇಲ್ಲಿ ಜಾನುವಾರುಗಳು ಅನುಭವಿಸುತ್ತಿರುವ ನರಕ ಯಾತನೆಯ ಕ್ಯಾಸೆಟ್ 'ಪತ್ರಿಕೆ'ಯ ಬಳಿಯಿದೆ.

ಸದ್ಯ ಗೋಹತ್ಯೆ ನಿಷೇಧ ಕಾಯ್ದೆ ಎಂಬ ಫ್ಯಾಸಿಸ್ಟ್ ಕಾಯ್ದೆ ತರಲು ಹೊರಟಿರುವ ಸರ್ಕಾರ ಪರಸಾಪೂರದ ಈ ಗೋಶಾಲೆಯನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವುದೇ?

ಬಡಜನರ ಆಹಾರ ಕ್ರಮದ ಮೇಲೂ ದಬ್ಬಾಳಿಕೆ ನಡೆಸಲು ಹೊರಟಿರುವ ಈ ಸರ್ಕಾರ ಗೋಮಾತೆಯ ಹೆಸರಲ್ಲಿ ಸಗಣಿ ತಿನ್ನುತ್ತಿದೆಯಷ್ಟೇ.

● ಹುಬ್ಬಳ್ಳಿಯಾಂವ

...ಪ್ಪಳ: ಖಾಸಗಿ ಶಾಲೆಗಳ 'ಎಂಜಲು ಪ್ರಸಾದ' ತಿನ್ನುವ ಪ್ರಹ್ಲಾದ್....


...ರ್ಕಾರಿ ಕನ್ನಡ ಶಾಲೆಗಳ ಬಗ್ಗೆ ಕಿಂಚಿತ್ತೂ ಗಮನ ಹರಿಸದ ಸರ್ಕಾರಗಳ ...ಂದಾಗಿ ಈಗ ಎಲ್ಲೆಡೆ ಖಾಸಗಿ ಶಾಲೆಗಳ ಹಾವಳಿ ಶುರುವಾಗಿದೆ. ...ಂದ 'ಕಾನ್ವೆಂಟು' ಶಾಲೆ ಎಂದು ಕರೆಸಿಕೊಳ್ಳುವ ಇವು ನಾಲ್ಕೈದು ...ಸ್ ಇಂಗ್ಲಿಷ್ ಶಬ್ದ ಕಲಿಸುತ್ತ ಮಕ್ಕಳಿಗೆ ಟೈ-ಬೂಟು ಹಾಕುತ್ತ ...ನ್ನೂ ಆಕರ್ಷಿಸುತ್ತಿವೆ. ಸರ್ಕಾರಿ ಶಾಲೆಗಳ ಅನಾರೋಗ್ಯಸ್ಥಿತಿ ಕಂಡ ...ಜನರು ಹೇಗೋ ಹೊಂದಾಣಿಕೆ ಮಾಡಿಕೊಂಡು ಈ ...ಟು'ಗಳಿಗೆ ತಮ್ಮ ಮಕ್ಕಳನ್ನು ಕಳಿಸಿ ಸಮಾಧಾನ ಪಡೆಯುತ್ತಿದ್ದಾರೆ. ...ಡದ ಜೊತೆಗೆ ಇಂಗ್ಲಿಷನ್ನು ಕೊಲ್ಲುತ್ತಿರುವ ಈ ಕಾನ್ವೆಂಟುಗಳು ...ವರ್ಗದವರ ರಕ್ತ ಹೀರುತ್ತಲೇ ಇವೆ. ಇಂತಹ ಖದೀಮ ...ಗೆ ಶಿಕ್ಷಣ ಇಲಾಖೆಯ ಬಹುತೇಕ ಅಧಿಕಾರಿಗಳು ಬೆಂಗಾವಲಾಗಿ ...ರೆ.

...ಪ್ಪಳದಲ್ಲಿ ಇಂತಹ ದುಷ್ಟಕೂಟದ ಲಾಭವನ್ನು ಎತ್ತುವಳಿ ...ರುವಾತನ ಹೆಸರು ಪ್ರಹ್ಲಾದ್ ಅಗಳಿ. ತಾನೂ ಖಾಸಗಿ ಶಾಲೆ ...ಈತ ಕೊಪ್ಪಳದ ಹೊಸ ಡಿಡಿಪಿಐ ರಾಜೇಂದ್ರ ಪ್ರಸಾದನನ್ನು ...ಹಾಕಿಕೊಂಡು ಇತರೆಲ್ಲ ಖಾಸಗಿ ಶಾಲೆಗಳನ್ನು ಮುಕ್ಕತೊಡಗಿದ್ದಾನೆ. ...ಹ್ಲಾದ್-ಪ್ರಸಾದ್ ಜೋಡಿಗೆ ಕೈ ಬೆಚ್ಚಗೆ ಮಾಡುವ ಖಾಸಗಿ ...ಅದನ್ನು ಸರಿದೂಗಿಸಿಕೊಳ್ಳಲು ಮಕ್ಕಳ ಪಾಲಕರ ತಲೆಗೆ ಅನಗತ್ಯ ...ಡೊನೇಷನ್‌ಗಳನ್ನು ಕಟ್ಟಲಾರಂಭಿಸಿವೆ.

ಈ ಹಿಂದೆ ಕೊಪ್ಪಳ ತಾಲ್ಲೂಕು ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷನಾಗಿ ಸಖತ್ 'ಪ್ರಸಾದ' ನುಂಗಿದ ಪ್ರಹ್ಲಾದ್‌ನೀಗ ಜಿಲ್ಲಾ ಒಕ್ಕೂಟಕ್ಕೆ ಅಧ್ಯಕ್ಷನಾಗಲು ಭರದ ಸಿದ್ಧತೆ ನಡೆಸಿದ್ದಾನೆ. ಡಿಡಿಪಿಐ ರಾಜೇಂದ್ರ ಪ್ರಸಾದ್ ಎಂದಿನಂತೆ ಪ್ರಹ್ಲಾದನ ಪರ ನಿಂತಿದ್ದಾನೆ. ಇದರಲ್ಲಿ ಈ ಜೋಡಿ ಸಕ್ಸಸ್ ಆದರೆ ಖಾಸಗಿ ಶಾಲೆಗಳ ಕತೆ ಮುಗಿದಂತೆಯೇ ಸರಿ!

ಪ್ರಹ್ಲಾದನ ಹಲ್ಕಾ ಹಿನ್ನೆಲೆ

8 ವರ್ಷಗಳ ಹಿಂದೆ ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಖಾಸಗಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಅದೇನೋ ಕೆಲಸ ಮಾಡಿಕೊಂಡಿದ್ದ ಪ್ರಹ್ಲಾದ್ ಓದಿದ್ದು ಅರ್ಧಂಬರ್ಧ ಎಂ.ಎಸ್ಸಿ. ಕೆಲಕಾಲ ಫಾರ್ಮಾಫೀಲ್ಡ್‌ನಲ್ಲಿ ಎಂ.ಆರ್. ಆಗಿ ತನ್ನ ಕಂತ್ರಿ ಬುದ್ಧಿಯ ಕಾರಣದಿಂದ ಅಲ್ಲಿಂದ ಹೊರದಬ್ಬಿಸಿಕೊಂಡ. ಮುಂದೆ ಐಟಿಐ ಕಾಲೇಜೊಂದಕ್ಕೆ ಸೇರಿಕೊಂಡ ಪ್ರಹ್ಲಾದ್ ಅಲ್ಲಿ ಅಡ್ಮಿಷನ್ ಕೊಡಿಸುವ ನೆಪದಲ್ಲಿ ವಿದ್ಯಾರ್ಥಿಗಳಿಂದ ಸಾಕಷ್ಟು ವಸೂಲಿ ಮಾಡಿ ಗೂಸಾ ತಿಂದ. ಆಗಲೇ ಇವನು ಕೊಪ್ಪಳಕ್ಕೆ ವಕ್ಕರಿಸಿ ಬಂದು ಶನಿಯಂತಾಗಿಹೋಗಿಬಿಟ್ಟ. ಸದ್ಯ ನ್ಯಾಷನಲ್ ಸ್ಕೂಲ್ ಎಂಬ ಬೋರ್ಡು ತಗುಲಿಸಿಕೊಂಡು ಅಕ್ಷರ ವ್ಯಾಪಾರ ಮಾಡುತ್ತಿರುವ ಈ ಪ್ರಹ್ಲಾದ್ ಸರ್ಕಾರ ಮತ್ತು ಖಾಸಗಿ ಶಾಲೆಗಳ ಮಧ್ಯೆ ದಲ್ಲಾಳಿಯಂತೆ ಕೆಲಸ ಮಾಡುತ್ತ ಸರ್ಕಾರ, ಸಮಾಜ, ಖಾಸಗಿ ಶಾಲೆ ಮೂರಕ್ಕೂ ಉಂಡೆನಾಮ ತಿಕ್ಕುತ್ತಿದ್ದಾನೆ. 'ಶಿಕ್ಷಣ'ದಾಚೆಗೂ ಕೈಹಾಕುವ ಈ ಭೂಪ ಭಾಗ್ಯನಗರ ಗ್ರಾಮಪಂಚಾಯತಿ ವ್ಯಾಪ್ತಿಯ ಸರ್ಕಾರಿ ಜಾಗದ ಮೇಲೂ ಕಣ್ಣು ಹಾಕಿ ಅಲ್ಲಿಯೂ ಜನರಿಂದ ಉಗಿಸಿಕೊಂಡಿದ್ದಾನೆ. ತನ್ನ ನ್ಯಾಷನಲ್ ಸ್ಕೂಲಿನ ಶಿಕ್ಷಕಿಯರನ್ನು ಗೋಳು ಹೊಯ್ದುಕೊಳ್ಳುವ ಈ ಪೀಡೆ ಇತರ ಖಾಸಗಿ ಶಾಲೆಗಳ ಶಿಕ್ಷಕಿಯರಿಗೂ ಕಂಟಕವಾಗಿದೆ.



ತಮಿಳುನಾಡಿನಲ್ಲಿ ಬಿದಿರಿನಿಂದ ನಿರ್ಮಾಣಗೊಂಡ ಶಾಲೆಯೊಂದು ಬೆಂಕಿಯಲ್ಲಿ ದಹಿಸಿ ನೂರಾರು ಮಕ್ಕಳು ಸತ್ತ ಘಟನೆ ನಡೆದ ಮೇಲೆ ಅಂತಹ ಬಿದಿರಿನ ಶಾಲೆ ನಿರ್ಮಿಸಬಾರದೆಂದು ಸುಪ್ರೀಂಕೋರ್ಟ್ ಆದೇಶ ಮಾಡಿತ್ತು. ಆದರೆ ಈಗಲೂ ಪ್ರಹ್ಲಾದನ ನ್ಯಾಷನಲ್ ಸ್ಕೂಲು ನಡೆಯುವುದು ಬಿದಿರಿನ ಗೂಡಿನಲ್ಲೇ!

ಡೊನೇಷನ್ ಬೇಡ, ಡಿಪಾಸಿಟ್ ಕೊಡಿ ಎಂದು ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಎತ್ತುವಳಿ ಮಾಡಿರುವ ಪ್ರಹ್ಲಾದ್ ಈಗ ಡಿಡಿಪಿಐ ರಾಜೇಂದ್ರ ಪ್ರಸಾದನ ನೆರವಿನೊಂದಿಗೆ ಖಾಸಗಿ ಶಾಲೆಗಳ ಜಿಲ್ಲಾ ಒಕ್ಕೂಟದ ಅಧ್ಯಕ್ಷನಾಗಲು ಪಿತೂರಿ ನಡೆಸಿದ್ದಾನೆ.

ಇಂತಹ ಭ್ರಷ್ಟನೊಂದಿಗೆ ತಿರುಗುತ್ತಿರುವ ಕೆಲ ಮಾನವಂತರು ಈಗಲಾದರೂ ಎಚ್ಚೆತ್ತುಕೊಳ್ಳಲಿ. ಹಾಗೆಯೇ ಡಿಡಿಪಿಐ ರಾಜೇಂದ್ರ ಪ್ರಸಾದ್ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಯೋಚಿಸಲಿ.

● ವಿನಯ್

ಸ್ವಗತವಾಗಿ ಕಾಡುವ 'ಸೌಗಂಧಿ'

ಬದುಕನ್ನು ಕಟ್ಟಿಕೊಳ್ಳುವ ಕಲೆ ಅರಿತ ನಿಮ್ಮ ಹೆಣ್ಣುಗಳು ಅನಕ್ಷರಸ್ಥರು, ಹಳ್ಳಿಗರು, ಆರ್ಥಿಕ ಸ್ವಾತಂತ್ರ್ಯದ ಪರಿಕಲ್ಪನೆಯಿಂದಲೇ ಹೊರಗಿರುವವರು ಆಗಿದ್ದಾರೆ. ಆದರೆ ನಿಮ್ಮ ಆ 'ಸೌಗಂಧಿ' ವಿದ್ಯಾವಂತೆ, ನಗರ ಕಂಡವಳು, ತನ್ನ ಕಾಲ ಮೇಲೆ ತಾನು ನಿಂತಿರುವವಳು ಆಗಿದ್ದೂ, ಅವಳಿಗ್ಯಾಕೆ ತನಗೆ ಸರಿ ಕಂಡಂತೆ, ತನ್ನ ಮನಸ್ಸು ಹಾತೊರೆದಂತೆ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ?



● ಅಕ್ಷತಾ.ಕೆ

ವೈದೇಹಿ,

ನಿಮ್ಮನ್ನು ಹಾಗೆ ಹೆಸರ್ಹಿಡಿದು ಕರೆಯೋದೆ ಚೆಂದ. 'ಮೇಡಂ' ಅಂತ ಕರೀಬಹುದೇನೋ ಆದರೆ ವೈದೇಹಿ ಅನ್ನುವಾಗ ಒಂದು ಭಾವ ಸ್ಫುರಿಸುತ್ತದಲ್ಲ ಅದು ನಿಮ್ಮನ್ನು ಮೇಡಂ ಅಂತ ಕರೆದಾಗ ವ್ಯಕ್ತ ಆಗೋದೆ ಇಲ್ಲ. ಕೆಲವು ಹೆಸರುಗಳೇ ಹಾಗೆ ಮುಕ್ಕಾಗಿಸದೇ, ಅರ್ಥ ಮಾಡದೇ ಅಥವಾ ಬೇರೆ ವಿಶೇಷಣ ಏನು ಸೇರಿಸದೇ ಕರೆದರೆ ಚೆನ್ನ. ಅಂಥದರ ಪಟ್ಟಿಯಲ್ಲಿ ನಿಮ್ಮ ಹೆಸರೇ ಮೊದಲು ವೈದೇಹಿ.


ನಾನು ಹುಟ್ಟುವ ಮೊದಲೇ ನಿಮ್ಮ ಮೊದಲ ಕಥಾಸಂಕಲನ 'ಗಿಡ ಮರ ಬಳ್ಳಿ' ಬಂದಾಗಿತ್ತು. ಸಾಹಿತ್ಯದ ಓದನ್ನು ಶುರು ಮಾಡುವ ಹೊತ್ತಿಗೆ ನೀವು ಕತೆ-ಕವಿತೆ-ನಾಟಕ ಎಲ್ಲ ಪ್ರಕಾರದಲ್ಲೂ ಬರೆದು ಹೆಸರು ಮಾಡಿದ್ದಿರಿ. ನಿನಾಸಂನಲ್ಲಿ ನಿಮ್ಮನ್ನು ಮೊದಲು ಕಂಡಾಗ ನಾನು ಎರಡನೇ ಬಿಎ ಓದುತ್ತಿದ್ದೆ. ಜೊತೆಗೆ ಕವಿ-ಕತೆಗಾರರೆಂದರೆ ನಮ್ಮಂಥವರು ನೋಡಲು ಸಾಧ್ಯವೇ ಇಲ್ಲದವರು, ಅವರೇನಿದ್ದರೂ ಪತ್ರಿಕೆ, ಪುಸ್ತಕಗಳಲ್ಲಿ ಫೋಟೊ ಮೂಲಕವೇ ಕಾಣಿಸಿಕೊಳ್ಳುವಂಥವರು ಎಂಬ ನನ್ನ ಕಲ್ಪನೆ ನಿಧಾನಕ್ಕೆ ದೂರವಾಗುತ್ತಿದ್ದ ಹೊತ್ತದು. ಆದಾಗಲೇ ನಿಮ್ಮ ಮೊದಲ ಕಥಾಸಂಕಲನವೂ ಸೇರಿದಂತೆ ಅಂತರಂಗದ ಪುಟಗಳು, ಗೋಲ ಸಂಕಲನಗಳನ್ನು ಮತ್ತು 'ಲಂಕೇಶ್ ಪತ್ರಿಕೆ'ಯಲ್ಲಿ ಜಾತ್ರೆ ಕುರಿತ ಲೇಖನಗಳನ್ನು ಓದಿದ್ದೆ. ನಿಮ್ಮ 'ಅಡುಗೆ ಮನೆಯ ಹುಡುಗಿ' ನಮಗೆ ಪಿಯುಸಿಯಲ್ಲಿ ಪಠ್ಯವಾಗಿತ್ತು. 'ಮುರಿಯುತ್ತ ಮೆಣಸಿನ ಚೊಟ್ಟು ಆಕಾಶದ ಸದ್ದಿಗೆ ಕಿವಿಯ ತೆರೆದಿಟ್ಟು ಕಳೆಯುವಳು ಆಯುಷ್ಯ ಚೊಟ್ಟುಚೊಟ್ಟು' ಅನ್ನುವ ಕೊನೆಯ ಸಾಲುಗಳಂತೂ ಸೈಯೇ ಸೈ. ಅವು ಸೇರಿದಂತೆ ಇಡೀ ಪದ್ಯವೇ ಬಾಯಿ ಪಾಠವಾಗಿ ಹೋಗಿತ್ತು. ಆ ಪದ್ಯವನ್ನು ಹಲವು ಸಾರಿ ಹೇಳಿಕೊಂಡೆವು. ಅದು ನಮ್ಮದೇ ಸ್ಥಿತಿ ಅಂತ ಮನದಟ್ಟಾಗಿತ್ತಾದರೂ ಅಡುಗೆಮನೆ ಹುಡುಗಿಯ ದುಸ್ಥಿತಿಗೆ ನಾವು ಮರುಗಿದೆವು. ಅವಳ ನೋವಿಗೆ ನಾವು ಕರಗಿದೆವು. ಅಂಥದೊಂದು ಪದ್ಯ ಬರೆದ ನಿಮ್ಮನ್ನು ನಿನಾಸಂನಲ್ಲಿ ನೋಡಿ ಕಣ್ತುಂಬಿಕೊಂಡೆ.

ಮೂರು ವರ್ಷದ ಹಿಂದೆ ಆಶಾದೇವಿ ಮೇಡಂ ಕರೆದು "ವೈದೇಹಿ ನಾಳೆ ಶಿವಮೊಗ್ಗಕ್ಕೆ ಬರ್‍ತಾ ಇದ್ದಾರೆ. ನಾನು ಇರೋದಿಲ್ಲ. ನೀನು ಅವರ ಜೊತೆ ಹೋಗಿ ಬಾ" ಅಂದ್ರು. ಮರುದಿನ ನಾನು ಕುವೆಂಪು ರಂಗಮಂದಿರಕ್ಕೆ ನಿಮ್ಮನ್ನು ಕಾಣಲು ಹೋದೆ. ನೀವು ನಗೆಮೊಗದಲ್ಲೇ ರಂಗಮಂದಿರದ ಬಾಗಿಲ ಬಳಿ ಎದುರಾದಿರಿ. ನೆಹರೂ ರಸ್ತೆಯಲ್ಲಿ ಸುಮ್ಮನೇ ನಾವಿಬ್ಬರೂ ನಡೆದೇಹೊರಟೆವು. ನೀವು ಪ್ರತಿಯೊಂದು ಅಂಗಡಿ-ಮುಂಗಟ್ಟುಗಳನ್ನು ಕಣ್ಣಲ್ಲಿ ತುಂಬಿಸಿ ಕೊಂಡು ನಡೆಯುತ್ತಿದ್ದಿರಿ. ಶಿವಮೊಗ್ಗೆಯ ಸೊಸೆ ನೀವು... "ಇದೆಲ್ಲ ನಾನು ನಡೆದಾಡಿದ ರಸ್ತೆಯೇ, ದುರ್ಗಿಗುಡಿಗೇ ಏನಾರೂ ಬೇಕಂದ್ರೆ ನಾವು ಬರ್‍ತಾ ಇದ್ದದ್ದು" ಎಂದು ಸಂಭ್ರಮಿಸಿದಿರಿ.

ನೆಹರೂ ರಸ್ತೆಯಲ್ಲಿ ನಿಮ್ಮ ಕೆಲಸ ಮುಗಿದನಂತರ ಒತ್ತಾಯದಿಂದ ನಿಮ್ಮ ಗೆಳತಿಯ ಮನೆಗೆ "ನಿನಗೊಬ್ಬ ಅಪೂರ್ವ ಸುಂದರಿಯನ್ನು ತೋರಿಸ್ತೇನೆ ಬಾ" ಅಂತ್ಹೇಳಿ ಕರೆದುಕೊಂಡು ಹೋದ್ರಿ. ಒಳಗೊಂಚೂರು ಗುಮಾನಿನೂ ಇಟ್ಕಳದೇ ಎಷ್ಟು ಸರಳ-ಸುಲಲಿತವಾಗಿ ಪದ-ವಾಕ್ಯಗಳನ್ನು ಕಟ್ಟೋಕೆ ಸಾಧ್ಯವಾಗತ್ತೆ ವೈದೇಹಿ ನಿಮಗೆ! ಬಂಗಲೆ ಮನೆ, ಚೆಂದದ ಕೈತೋಟ, ಮನೆಯೊಳಗೆ ನೀಟಾಗಿ ಜೋಡಿಸಿದ ಪೀಠೋಪಕರಣಗಳು ಎಲ್ಲದರ ನಡುವೆ ನಿಮ್ಮ ಗೆಳತಿಯಿದ್ದರು. ಮಕ್ಕಳು ವಿದೇಶದಲ್ಲಿದ್ದಾರೆ. ಗಂಡ ದೊಡ್ಡ ಉದ್ಯಮಿ, ಹೆಚ್ಚಾಗಿ ಕೆಲಸದ ನಿಮಿತ್ತ ಬೆಂಗಳೂರಿನಲ್ಲೆ ಇರುತ್ತಾರೆ ಎಂದರು. ನೀವು ಹೇಳಿದ ಹಾಗೆ ಆಕೆ ನಿಜಕ್ಕೂ ಸುಂದರಿಯಾಗಿದ್ದರು ಮತ್ತು ಅಂಥ ಏಕಾಕಿತನವನ್ನೂ ಅವರು ಗಾಢವಾದ ನಿರ್ಲಿಪ್ತತೆಯಿಂದ ಸಂಭಾಳಿಸುತ್ತಿರುವಂತೆ ಕಂಡಿತು. 'ನಡೆದಾಡುವ ಕಾವ್ಯ' ಎಂದು ಅವರನ್ನು ನೀವು ಬಣ್ಣಿಸಿದ್ದು ಅರ್ಥಪೂರ್ಣವಾಗಿತ್ತು. ಅವರ ಹೆಸರು ಸುಮಿತ್ರಾ. ನಿರ್ಲಿಪ್ತತೆಗೆ ಇನ್ನೊಂದು ಹೆಸರೇ ಸುಮಿತ್ರೆ... ಆ ನಿಮ್ಮ ಗೆಳತಿ ಸುಮಿತ್ರಾ ನನಗೆ ನಿಮ್ಮ ಯಾವುದೇ ಕತೆಯ ಪಾತ್ರದಂತೆ ತೋರಲಿಲ್ಲ, ಬದಲಿಗೆ ರಬೀಂದ್ರನಾಥ ಟಾಗೋರರ ಗಾಢ ವಿಷಾದವೇ ಮೈವೆತ್ತಿದಂತ (ಅಂಥ ವಿಷಾದದಲ್ಲೂ ಆಕೆಯ ವ್ಯಕ್ತಿತ್ವವಿರಲಿ, ಸೌಂದರ್ಯ ಕೂಡ ಚೂರೂ ಮಸುಕಾಗದಂಥ) ನಾಯಕಿಯರಂತೆ ಕಂಡರು. ನನ್ನನ್ನು ಮಧ್ಯೆ ಕೂರಿಸಿಕೊಂಡು ಅಕ್ಕಪಕ್ಕ ಕೂತು ಒತ್ತಾಯ ಮಾಡುತ್ತಾ ಸೇವಿಗೆ ಬಾತ್ ಕೊಟ್ಟು ಉಪಚರಿಸುವ ಹೊತ್ತಿನಲ್ಲಿ ಮಾತ್ರ ನೀವಿಬ್ಬರೂ ಗೆಳತಿಯರು ಒಂದೆ ಆಗಿ ಕಾಣುತ್ತಿದ್ದಿರಿ.

ಆಮೇಲೆ ನೀವು ನನ್ನ ಮೊದಲ ಕವನಸಂಕಲನಕ್ಕೆ ಬೆನ್ನುಡಿ ಬರೆದು ಕೊಟ್ಟಿರಿ. ನನ್ನ ಕವನಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಸ್ತಾಪವಾದಾಗ ಹಿರಿಯಕ್ಕನಂತೆ ಸಂಭ್ರಮಿಸಿದಿರಿ. ಒಂದೆರಡು ವಿಮರ್ಶೆಗಳಲ್ಲಿ 'ಕವಿಗಳ ಮೊದಲನೆ ಸಂಕಲನದಲ್ಲಿರುವ ಕ್ಲೀಷೆಗಳಿಂದ ಈ ಕವಿತೆಗಳು ಪಾರಾಗಿವೆ' ಎಂದು ಪ್ರಸ್ತಾಪವಾಗಿದ್ದನ್ನು ನೋಡಿದ ನಾನು "ಮೊದಲ ಕೃತಿ ಆ ಕವಿ ಪಡೆದ, ನೋಡಿದ ಅನುಭವಗಳಿಂದ ಹೊರಟದ್ದರಿಂದ ಸಹಜವಾಗೇ ಫ್ರೆಷ್ ಆಗಿರತ್ತೆ. ಹೋಗ್ತಾ ಹೋಗ್ತಾ ಬರಹ ಕ್ಲೀಷೆ ಆಗ ತೊಡಗತ್ತೆ. ಅಷ್ಟು ಅರ್ಥವಾಗಲ್ವಾ ಬರೆಯೋರಿಗೆ; ಎಂದು ನಿಮ್ಮ ಹತ್ತಿರ ಗೊಣಗಿದಾಗ "ಏಯ್ ಹಾಗೆಲ್ಲ ಎಂತ ಹೇಳಕ್ಕೋಗ್ಬೇಡ್ವೆ. ಅವರು ನಿನ್ನ ಪದ್ಯ ಗುರುತಿಸಿ ಬರೀತಿದ್ದಾರಲ್ಲ, ಉದ್ದೇಶ ಪೂರ್ವಕವಾಗಿ ಇದರ ಬಗ್ಗೆ ಬರೀಲೆ ಬಾರದು ಅಂತ ಬಿಟ್ಟಿಲ್ವಲ್ಲ. ಅವರು ಹ್ಯಾಗೆ ಗ್ರಹಿಸ್ತಾರೋ ಹಾಗೇ ಬರೀಲಿ. ನೀನು ಸುಮ್ಮನೆ ಓದಿ ಖುಷಿ ಪಡೋದು ನೋಡು. ನಿನ್ನ ಹಾದಿಗೆ ನೀನು ಬರವಣಿಗೆ ಮುಂದು ವರೆಸು" ಎಂದು ಬುದ್ಧಿಮಾತು ಹೇಳಿದಿರಿ. ಥೇಟ್ ಹಿರಿಯಕ್ಕನ ಶೈಲಿಯಲ್ಲಿ, ಅದೂ ನಮ್ಮ ಕನ್ನಡ ಸಾಹಿತ್ಯ ಲೋಕದ ಹಿರಿಯಕ್ಕ...

ವೈದೇಹಿ, ನಿಮ್ಮ ದೊಡ್ಡಮ, ಚಿಗಮ, ಅಕ್ಕು, ಲಿಲ್ಲಿಬಾಯಿ, ಪುಟ್ಟಮ್ಮತ್ತೆಯ ಮೊಮ್ಮಗಳು, ಮಾಂಕಾಳಿ, ಅಮ್ಮಚ್ಚಿ ಎಲ್ಲರನ್ನು ಓದುವಾಗಲೂ ಓದುಗರಾದ ನಮಗೆ ಒಂದು ಗಾಢ ವಿಷಾದ ಕವಿದುಕೊಳ್ಳುತ್ತದೆ. ಆದರೆ ಅಂಥದೊಂದು ವಿಷಾದವನ್ನು ನಮ್ಮಲ್ಲಿ ಹುಟ್ಟಿಸುವ ಆ ಜೀವಗಳು ತಮ್ಮ ಬಗ್ಗೆ ಎಲ್ಲೂ ವಿಷಾದದಿಂದ ಕೊರಗುವು ದನ್ನು ನಾವು ನೋಡೋದೆ ಇಲ್ಲ ನಿಮ್ಮ ಕತೆಗಳಲ್ಲಿ. ಬದಲಿಗೆ ಸಾಧ್ಯವಾದರೆ ಜಾಣತನದಲ್ಲಿ



ಸಾಧ್ಯವಾಗದಿದ್ದರೆ ಒಂದು ಬಗೆಯ ಹುಚ್ಚುತನದಲ್ಲಾದರೂ ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳುವ ಹೆಂಗುಸರು ನಿಮ್ಮ ಕತೆಯಲ್ಲಿ ರಾರಾಜಿಸುತ್ತಾರೆ.

ಜಾತ್ರೆಗೆ ಹೋದ್ರೆ ಕಾಲು ಮುರಿದು ಹಾಕ್ತೇನಿ ಎನ್ನುವ ಗಂಡನ ಮಾತನ್ನು ಮೀರಿ ಜಾತ್ರೆ ಮುಗಿಸಿ ಬಂದ ಮೇಲೆ ಕಂಡ್ಕೊಂಡ್ರಾಯ್ತು ಎಂದು ಮಕ್ಕಳನ್ನು ಕರೆದುಕೊಂಡು ಜಾತ್ರೆ ಮಾಡಿ ಬರುವ ದೊಡಮ, ಸಿನಿಮಾಕ್ಕೆ ಹೋಗುವುದನ್ನು ತಡೆದ ಗಂಡಸರಿಗೆ 'ಒಳ್ಳೆ ಕತೆ ಒಂದು ಸಿನಿಮಾ ನೋಡಲು ನಾಲಾಯಕಾ ದೇವೇ? ನೀವು ಹೇಳಿದ ಹಾಗೆ ಕೇಳಿದರೆ ಹೇಗೂ ಕುಣಿಸೀರಿ' ಎಂದು ಉತ್ತರ ಕೊಟ್ಟು ಸಿನಿಮಾ ನೋಡೆ ತೀರುವ ಹೆಂಗುಸರು ತಮ್ಮ ತಮ್ಮ ಲೋಕದಲ್ಲೇ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಬಿಡುತ್ತಾರೆ. ಆದರೆ ಅಲ್ಲೂ ಕೂಡಾ ಒಳ ಎಚ್ಚರ ಅವರಿಗೆ ಯಾವಾಗಲೂ ಇರುತ್ತದೆ. ಲೋಕದ ಮಾತನ್ನು ಧಿಕ್ಕರಿಸಿದ ಸಂದರ್ಭದಲ್ಲಿ ಕೂಡಾ ಅವರು ಒಳ ಎಚ್ಚರದ ಮಾತಿಗೆ ತುಂಬಾ ಬೆಲೆ ಕೊಡುವ ಘನತೆಯ ಹೆಣ್ಣುಗಳು. 'ಯಾಕೆ, ಮರ್ಯಾದೆ ಹೋಪುಕೆ ಬಿಡ್ಲಿಕ್ಕಿತ್ತಲೇ' ಎಂದು ಪುಟ್ಟಮ್ಮತ್ತೆ ಕಮಲಾವತಿಗೆ ಹೇಳಿದಾಗ 'ಎಂಥವರಿಂದ ಅದು ಹೋಯ್ಕ್ ಅಂತ ನಂಗೊತ್ತಿತ್' ಎಂದು ಕಮಲಾವತಿ ಕೊಡುವ ಉತ್ತರ ಇಂಥ ಒಳ ಎಚ್ಚರದ ಪ್ರಜ್ಞೆಗೆ ಸಾಕ್ಷಿ.


ವೈದೇಹಿ, ಇಷ್ಟೆಲ್ಲದರ ನಂತರವೂ ನನ್ನದೊಂದು ಪ್ರಶ್ನೆ. ಇಷ್ಟೆಲ್ಲ ಜಾಣೆಯರಾದ, ಗಟ್ಟಿಗಿತ್ತಿಯರಾದ, ಬದುಕನ್ನು ಕಟ್ಟಿಕೊಳ್ಳುವ ಕಲೆ ಅರಿತ ನಿಮ್ಮ ಹೆಣ್ಣುಗಳು ಅನಕ್ಷರಸ್ಥರು, ಹಳ್ಳಿಗರು, ಆರ್ಥಿಕ ಸ್ವಾತಂತ್ರ್ಯದ ಪರಿಕಲ್ಪನೆಯಿಂದಲೇ ಹೊರಗಿರುವವರು ಆಗಿದ್ದಾರೆ. ಆದರೆ ನಿಮ್ಮ ಆ 'ಸೌಗಂಧಿ' ವಿದ್ಯಾವಂತೆ, ನಗರ ಕಂಡವಳು, ತನ್ನ ಕಾಲ ಮೇಲೆ ತಾನು ನಿಂತಿರುವವಳು ಆಗಿದ್ದೂ ಅವಳಿಗ್ಯಾಕೆ ತನಗೆ ಸರಿ ಕಂಡಂತೆ, ತನ್ನ ಮನಸ್ಸು ಹಾತೊರೆದಂತೆ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ? ಅಂಥದೊಂದು ಪ್ರಕ್ರಿಯೆಯನ್ನು ಸಮಾಜ ವಿರೋಧಿಸುತ್ತಲೇ ಬರುತ್ತಿರಬಹುದು. ಆದರೆ ಮನಸ್ಸಿನ ವಾಂಛೆ ಸಾಮಾಜಿಕ ವಿರೋಧಕ್ಕಿಂತ ಶಕ್ತಿಯುತವಾದುದಲ್ಲವೇ? ಅಥವಾ ಸೌಗಂಧಿಯ ಒಳಗಿನ ವಾಂಛೆ ಸಾಮಾಜಿಕ ಕಟ್ಟುಪಾಡು ವಿರೋಧಗಳನ್ನು ಮೀರುವಷ್ಟು ಶಕ್ತಿಯುತವಾಗಿರಲಿಲ್ಲವೇ? ಅವಳ ಶಕ್ತಿಯನ್ನು ನಿರಾಸೆಯೇ ತಿಂದು ಹಾಕಿತ್ತೇ? ಈ ಎಲ್ಲ ಪ್ರಶ್ನೆಗಳು ಮತ್ತೆ ಮತ್ತೆ ಕಾಡುತ್ತಲೇ ಇರುತ್ತದೆ ವೈದೇಹಿ... ಸ್ವಗತಗಳಾಗಿ...

●

ವಿಜಯನಗರವೋ? ಮುಘಲರಾಳ್ವಿಕೆಯೋ?...

▶▶2

ಪಡೆಯಲು ಗೋವೆಯನ್ನು ವಶಪಡಿಸಿಕೊಳ್ಳಲು 1510ರಲ್ಲಿ ಆದಿಲ್‌ಶಾನ ವಿರುದ್ಧ ಯುದ್ಧ ಸಾರಿದರು. ಆಗ ಅವರಿಗೆ ಗೆಲ್ಲಲು ಸಹಾಯ ಮಾಡಿದ್ದು ಕೃಷ್ಣದೇವರಾಯನ ದಂಡನಾಯಕ ತಿಮ್ಮಯ್ಯ ಮತ್ತು ಗೇರುಸೊಪ್ಪೆಯ ವಿಜಯನಗರದ ಸಾಮಂತ ಮಲ್ಲಿರಾಯ. ಇದರಿಂದಾಗಿ ತಿಮ್ಮಯ್ಯ ತನಗೆ ಪೋರ್ಚುಗೀಸರು ಗೋವೆಯ ಉಸ್ತುವಾರಿ ವಹಿಸಬಹುದೆಂದು ಭಾವಿಸಿದ್ದ. ಆದರೆ ಆತನಿಗೆ ಪೋರ್ಚುಗೀಸರು ಕೇವಲ ಮಿರ್ಜಾನ ದುರ್ಗದ ಉಸ್ತುವಾರಿ ವಹಿಸಿದರು.



ಹೀಗೆ ಪೋರ್ಚುಗೀಸರು ಭಾರತದಲ್ಲಿ ಭದ್ರವಾಗಿ ನೆಲೆಯೂರಿದರು. ಮತ್ತೊಂದೆಡೆ ಗೋವಾದ ದಕ್ಷಿಣದ ಕರಾವಳಿಯ ಕಡೆ ಪೋರ್ಚುಗೀಸರು ಆಕ್ರಮಣ ಪ್ರಾರಂಭಿಸಿದರಲ್ಲದೆ ಮಂಗಳೂರು, ಬಸ್ರೂರು, ಉಲ್ಲಾಳಗಳ ಮೇಲೆ ಸತತವಾಗಿ ಹತ್ತಾರು ಬಾರಿ ಧಾಳಿಮಾಡಿ ಮುಸ್ಲಿಮ ವರ್ತಕರನ್ನು ಮತ್ತು ಹಿಂದೂ ಸಾಮಾನ್ಯರನ್ನು ಕಗ್ಗೊಲೆಮಾಡಿದರು. ಅಷ್ಟೇ ಅಲ್ಲ, ಈ ದೇಶದಲ್ಲಿ ವಸಾಹತುಶಾಹಿಗಳು ಬಲವಾಗಿ ಬೇರೂರಲು ನೆಲೆ ಒದಗಿಸಿದ್ದರಲ್ಲೂ ಕೃಷ್ಣದೇವರಾಯನ ಕೊಡುಗೆಯಿದೆ.

ಎಲ್ಲಾ ರಾಜರಂತೆ ಕೃಷ್ಣದೇವರಾಯ ಸಹ ಆ ಕಾಲದ ಶಕ್ತಿಗಳಾಗಿದ್ದ ಬ್ರಾಹ್ಮಣಶಾಹಿ ಭೂಮಾಲಿಕರ ಮತ್ತು ವರ್ತಕರ ಹಿತವನ್ನು ರಕ್ಷಿಸಲು ರಾಜ್ಯಭಾರ ಮಾಡಿದ. ಈ ಪ್ರಕ್ರಿಯೆಯಲ್ಲಿ ರೈತಾಪಿಯನ್ನು ಆ ಕಾಲದ ಎಲ್ಲಾ ರಾಜರಂತೆ ಅವನೂ ಸುಲಿದಿದ್ದ. ಇವ್ಯಾವುದೂ ಈ ರಾಜರುಗಳ ವ್ಯಕ್ತಿಗತ ದುಷ್ಟತನದಿಂದ ಸಂಭವಿಸಿದ್ದಲ್ಲ ಅಥವಾ ಇದರ ಹಿಂದೆ ಯಾವುದೇ ಕೋಮುವಾದಿ ಕಾರಾಸ್ಥಾನವಿತ್ತೆಂದೂ ಅಲ್ಲ. ಇತಿಹಾಸದ ಯಾವುದೇ ಕಾಲಘಟ್ಟದಲ್ಲಿ ಆಳುವ ಪ್ರಭುಗಳು ಆ ಕಾಲದ ಶೋಷಕ ವರ್ಗಗಳ ಪರವಾಗಿಯೇ ರಾಜ್ಯಭಾರ ಮಾಡುತ್ತಾರೆ. ಕೃಷ್ಣದೇವರಾಯನೂ ಅಷ್ಟೆ. ಯಡಿಯೂರಪ್ಪನೂ ಅಷ್ಟೆ. ಆದಿಲ್ ಶಾನೂ ಅಷ್ಟೆ. ಅಂದಿನ ಕಾಲಘಟ್ಟದ ಶೋಷಕ ವರ್ಗಗಳ ಹಿತವನ್ನು ಕಾಯ್ದ ಕೃಷ್ಣದೇವರಾಯ ಜನರು ಸಂಭ್ರಮಿಸಬೇಕಾದ ರಾಜನೇನೂ ಅಲ್ಲ. ಅವನ ಆಳ್ವಿಕೆ ಸುವರ್ಣಯುಗವೂ ಅಲ್ಲ. ಅದು ಬ್ರಾಹ್ಮಣಶಾಹಿ ಊಳಿಗಮಾನ್ಯತೆಯ ಸುವರ್ಣ ಯುಗ.

ಕೃಷ್ಣದೇವರಾಯ ಪ್ರತಿನಿಧಿಸುತ್ತಿದ್ದದ್ದು ಈ ಶಕ್ತಿಗಳನ್ನೇ. ಹೀಗಾಗಿ ಪ್ರಜಾಸತ್ತೆಯನ್ನು ಗೌರವಿಸುವ ಯಾರೂ ಅದೇ ಸಮಯದಲ್ಲಿ ಕೃಷ್ಣದೇವರಾಯನನ್ನಾಗಲೀ, ವಿಜಯನಗರ ಸಾಮ್ರಾಜ್ಯವನ್ನಾಗಲೀ ಸಂಭ್ರಮಿಸಲು ಸಾಧ್ಯವಿಲ್ಲ. ಏಕೆಂದರೆ ಪ್ರಜಾಸತ್ತೆ ಹುಟ್ಟಿದ್ದೇ ಈ ಶಕ್ತಿಗಳನ್ನು ನಾಶಮಾಡಿ. ಪ್ರಜಾಸತ್ತೆಯ ಇಂದಿನ ಕಾಲಘಟ್ಟದಲ್ಲಿ ನಾವು ಕಲಿಯಬೇಕಾದ ಪಾಠವೂ ಇದೇ. ಆದರೆ ಇಂದೂ ಶ್ರೀಕೃಷ್ಣದೇವರಾಯ ಮತ್ತು ಅವನ ಊಳಿಗಮಾನ್ಯ ರಾಜ್ಯಭಾರವನ್ನೇ ಸುವರ್ಣಯುಗವೆಂದು ಹೇಳುತ್ತಾ ಜನರನ್ನು ಮೋಸಮಾಡಲು ಹೊರಟಿರುವವರು ಮಾತ್ರ ಈ ಕಾಲಕ್ಕೂ ನಿಜವಾದ ವಿಲನ್‌ಗಳೇ ಆಗಿದ್ದಾರೆ.

●

...ರಕಂಡು ಗಾಯ ಮಾಡಿಕಳದ್ರಲ್ಲಿ ನಿಸ್ಸೀಮ ಕಣ ಇವನು

...ದ್ದಕ್ಕಿದ್ದಂತೆ ಶುರುವಾದ ಚಳಿಯಿಂದ ರಕ್ಷಣೆ ...ಲೋಸ್ಕರ ಕಾಳಮಾವ ಹಳೆಯ ಸ್ವೆಟರ್ ...ಂಡು, ಅದರ ಮೇಲೆ ಬಿಗಿಯಾಗಿ ರಗ್ಗೊದ್ದು ...ದ್ದ. ಹೆಚ್ಚುಕಮ್ಮಿ ಸೀರನೂ ಹಾಗೆಯೇ ಪ್ಯಾಕ್ ... ಜುಮ್ಮಿಯೂ ಹಸಿರುಬಣ್ಣದ ಸ್ವೆಟರ್ ಒಳಗೆ ...ಂಡು, ಹುಲ್ಲಿನ ಹೊರೆಯಂತೆ ಕಾಣುತ್ತಿದ್ದಳು. ...ಂದ ಉಗ್ರಿ,

...ಎಡೂರಪ್ಪ ಕಡಿಗೂ ರೈತರಿಗೆ ಬೇಡಿ ಹಾಕಿಸಿಬುಟ್ಟ ...ವ" ಎಂದ.

...ಯ ಉ ಸೀ ಮೆ

...ಕಟ್ಟೆಪುರಾಣ

▶ಬಿ. ಚಂದ್ರೇಗೌಡ

...ಗ್ಗಳಪ್ಪ ಅಲ್ಲಿಗಂಟ ಬಂದನೆ ಅಂಗರೆ" ಎಂದ ...

...ಬೇಡಿ ಹಾಕೊ ಅಂತ ಕ್ಯಲಸ ಏನು ಮಾಡಿದ್ರೂ?" ...ಕಾಳಮಾವ.

...ವರ ಜಮೀನ್ನಲ್ಲ ಸ್ವಾಧೀನ ಮಾಡಿಕಂಡು ಆ ...ಲ್ಲಿ ಕೈಗಾರಿಕೆ ಹಾಕಬೇಕು ಅಂತ ವಂಟಿದ್ರು. ...ತರು ವಿರೋಧಿಸಿದ್ರು. ಅದ್ಕೆ ಅವುರನ್ನಲ್ಲ ಹಿಡುದು ...ಕಿದ್ರು. ಜೈಲಲ್ಲಿ ಅವುರ್ನಲ್ಲ ಉಪಾಸ ಮಾಡಿ ...ಬ್ಬಂಗಾದ್ರು. ಆಗ ಅವುರನ್ನಲ್ಲ ತಗಂಡು ಆಸುಪತ್ರಿಗೆ ...ಕ್ಕೆ ಅಂತ ಹೋಗುವಾಗ ಬೇಡಿ ಹಾಕಿದ್ರಂತೆ!" ...ಲ್ಲಪ್ಪ ಉಸಾರಿಲ್ಲೋರೇನು ಓಡೋಯ್ತಿದ್ರೆ? ಅಥವ ...ನೋರ ಮ್ಯಾಲೆ ಹಲ್ಲೆ ಮಾಡಂಗಿದ್ರೆ?" ಎಂದ ...ವ.

...ದೇ ಕಣಮಾವ ನಾನೇಳದು. ರೈತ ಕುಟುಂಬಸ್ತ. ... ಅವುನ್ಯಾವತ್ತೂ ಅಪರಾಧ ಮಾಡಕ್ಕೆ ಹಿಂಜರಿತನೆ. ...ದ್ದರಲ್ಲಿ ಬೇಡಿ ಹಾಯ್ಕಂಡು ಆಸುಪತ್ರೆಗೆ ...ಯ್ತರೆ ಅಂದ್ರೆ, ಇವುರಿನ್ನಂಥಾ ದಡ್ಡ ಬಡ್ಡಿ ... ಅಂತ."

... ಎಡೂರಪ್ಪ ಕ್ಯರಕಂಡು ಗಾಯ ಮಾಡಿಕಳದ್ರಲ್ಲಿ ..."

...ಜ ಕಣಮಾವ. ಎಡೂರಪ್ಪ ಸಮುಸ್ಸೆಯ್ನ ...ಗಿ ಬುಡಸದ್ನೆ ಕಲ್ತಿಲ್ಲ. ಎಲ್ಲೋ ಮುಲಮುಲ ...ಅಂದ್ರು, ಸಾಕು ಪರಪರನೆ ಕ್ಯರದು ಗಾಯ ...ಬುಡ್ತನೆ. ಆಯ್ತು ಕ್ಯರಕಂಡ, ಗಾಯ ಮಾಡಿಕಂಡ, ...ಗೊ ಅಂತ ಮುಲಾಮುನಾದ್ರು ಹಚಗತ್ತನಾ ಅದೂಯಿಲ್ಲ, ಯಾರಾರ ಬಂದು ಉಸಾರು ಮಾಡಬೇಕು. ಅಂತ ಗಿರಾಕಿ ಇವುನು" ಎಂದ ಉಗ್ರಿ.

"ಇವುನಾಳಿಕೆಲಿ ರೈತರೆ ಕಂಡ್ರ ಬೀದಿಗೆ ಬಿದ್ದೋರು."

"ನಿಜ ಕಣಮಾವ. ಪಾಪ ಕೆ.ಆರ್. ನಗರದ ರೈತರೂ ಅಲ್ಲಿಂದ ಬೆಂಗಳೂರು ಗಂಟ ನ್ಯಡಕಂಡು ಬಂದ್ರು. ಅವುರು ಕಾಲಿಗೆ ಬ್ಯಾಂಡೇಜಾಕಿದ್ನ ನೋಡಕ್ಯಾಯ್ತಿರಲಿಲ್ಲ. ಯಾವಾಗ ಯರಡು ರೈತ ಸಂಘದೋರು ಒಂದಾಗಿ ಬುಟ್ರೊ ಆಗ ಎಡೂರಪ್ಪ, ಈಶ್ವರಪ್ಪ ಯಲ್ಲ ಬಿಡದಿಗಂಟ ಓಡೋಗಿ 'ತಪ್ಪಾಯ್ತು ಕಣ್ರಪ್ಪ ನೀವು ಹೇಳಿದಂಗೆ ಕೇಳ್ತಿವಿ' ಅಂದ್ರು. ಪಾಪ ರೈತರು ಎಷ್ಟೇ ಆಗ್ಲಿ ದೊಡ್ಡ ಮುನಿಸಿನೋರಲ್ಲವೇ, ಕ್ಷಮಿಸಿ ಕೆ.ಆರ್. ನಗರದ ಕಡೆ ಹೋದ್ರು. ಇತ್ತಗೆ ದಾವಣಗ್ಯರೆ ರೈತರಿಗೆ ಬೇಡಿ ಹಾಕಿದ್ರತ್ತಗೆ" ಎಂದ ಉಗ್ರಿ.

"ಬೇಡಿ ಹಾಕಿ ಅಂತ ಎಡೂರಪ್ಪ ಹೇಳಿದ್ನೆ?" ಎಂದ ಸೀರ.

"ಅವುನೇಳಕ್ಕೋದನೆ ಸೀರ ಮಾವ. ಅಧಿಕಾರಿಗಳು ಅಂಗೆ ಮಾಡ್ತರೆ."

"ಅಧಿಕಾರಿ ಸೂಳೆಮಕ್ಕಳು ಮಾಡಿದ್ರೆ ಎಡೂರಪ್ಪಂದೇನು ತಪ್ಪು ಅಂತ?"

"ನೀನೊಳ್ಳೆ ಸಿ.ಟಿ. ರವಿಯಂಗೆ ಮಾತಾಡ್ತಿಯಲ್ಲೊ ಮಾವ."

"ಅವುನ್ಯಾರ್ಲ ಸೀಟಿ ರವಿ?"

"ಸೀಟಿ ರವಿ ಅಂದ್ರೆ ಯಾವಾಗ್ಲು ಸಿಳ್ಳೆ ವಡಿಯೋನು ಅನ್ನಕಬ್ಯಾಡ. ಅವುನು ಚಿಕ್ಕಮಗಳೂರಿನ ಶಾಸಕ. ಈ ಮಲಯಾಳಿ ಮಂತ್ರಿಕರತ್ರ ಅಸಿಸ್ಟೆಂಟ್‌ಗಳಿರತರೆ ನೋಡು ಒಂಥರ ಐಟೆಕ್ ಅಸಿಸ್ಟೆಂಟು. ಅಂಗವುನೆ. ಅವುನು ನಿನ್ನಂಗೆ ಅಂದವುನೆ. ಅಧಿಕಾರಿ ಗಳು ಅವುರ ಕ್ಯಲಸ ಮಾಡಿದ್ರೆ ಎಡೂರಪ್ಪ ನದ್ದೇನು ತಪ್ಪು ಅಂದವುನೆ. ಇದಕೇನೇಳ್ತಿ?"

"ಎಡೂರಪ್ಪ ಯಂಗಿರತನೊ ಅಂಗೆ ಅಧಿಕಾರಿಗಳೂ ಇರತರೆ" ಎಂದ ಕಾಳ ಮಾವ.

"ಈಗಂಗೆ ಆಗ್ಯದೆ ಕಣಮಾವ. ರೈತರಿ ಗ್ಯಾಕೆ ಬೇಡಿ ಹಾಕ್ತರೆ ಅಂದ್ರೆ ಎಡೂರಪ್ಪ ನಿಗೂ ರೈತರಿಗೂ ಆಷ್ಟಕಷ್ಟೆಯಾ ಅಂತ ತಿಳಕಂಡು ಅಧಿಕಾರಿಗಳು ಸುಮ್ಮನಿರತರೆ. ಪಾಪ ತಲೆ ಏನೂ ಇಲ್ಲದ ಪ್ಯಾದೆಗಳು ಯಲ್ಲಾ ಕೈದಿಗಳನೂ ಕರಕಂಡೋಗಂಗೆ ಇವುರ್ನು ಬೇಡಿ ಹಾಯ್ಕಂಡು ಯಳಕಂಡೋಗ್ತುವುರೆ. ಯಾವಾಗ ಸುದ್ದಿ ಹರಡಿ ಎಡೂರಪ್ಪನವರಿಗೂ ಹೋಯ್ತೋ ಆಗ ಆ ಪ್ಯಾದೆಗಳ ಸಸ್ಪೆಂಡ್ ಮಾಡ್ತುವುರೆ. ನಿಜವಾಗ್ಲು ಸಸ್ಪೆಂಡಾಗಬೇಕಾದೋರು ಅಧಿಕಾರಿಗಳು."

"ಇನ್ನು ಮ್ಯಾಲೆ ಸಸ್ಪೆಂಡು ಇರಬಾರ್ದು ಕಣೊ ಉಗ್ರಿ. ಏನಿದ್ರು ಡಿಸ್‌ಮಿಸ್ ಇರಬೇಕು" ಎಂದುಕೊಂಡು ವಾಟಿಸ್ಸೆ ಬಂದ.

"ಡಿಸ್‌ಮಿಸ್ ಆದ್ರೆ ಅವುರೆಂಡ್ತಿ ಮಕ್ಕಳ ಕತೆಯೇಳೊ" ಎಂದ ಉಗ್ರಿ.

"ಹೆಂಡ್ತಿ ಮಕ್ಕಳ ಬಗ್ಗೆ ಯೋಚನೆ ಮಾಡೋನು ಸರಿಯಾಗಿ ಕ್ಯಲಸ ಮಾಡಬೇಕು ಕಣೊ, ಅಂಡರ್‌ಸ್ಟ್ಯಾಂಡ್."

"ಬಳ್ಳಾರಿ ಜಿಲ್ಲೆಲಿ ಯಾರಾರ ಸರಿಯಾಗಿ ಕ್ಯಲಸ ಮಾಡಕ್ಯಾಯ್ತದೇನೊ ನೀನೆ ಹೇಳು."

"ನಿಜ, ಬಳ್ಳಾರಿಲಿ ಯಾರೂ ಕೆ.ಸಿ.ಎಸ್.ಆರ್. ನಿಯಮದಂಗೆ ಕ್ಯಲಸ ಮಾಡಕ್ಯಾಗದಿಲ್ಲ. ಅಲ್ಲೇನಿದ್ರು ರೆಡ್ಡಿ ಎಸ್ಸಾರ್ ತರನೇ ಕ್ಯಲಸ ಮಾಡಬೇಕು. ಒಂದು ಖುಷಿ ಸಮಾಚಾರ ಏನಪ್ಪಾ ಅಂದ್ರೆ, ರೆಡ್ಡಿಗೆ ನಾನ್ ಬೇಲಬಲ್ ವಾರಂಟು ಬಂದದೆ. ನಿಜವಾಗ್ಲು ಅವುನ ಕೈಗೀಗ ಬೇಡಿ ಹಾಕಬೇಕಾಗಿತ್ತು, ಆದ್ರೆ ಉಸಾರಿಲ್ಲದ ರೈತರಿಗಾಕ್ತರೆ ಪೂಲಿಸ್ ಫೆಲೋಗಳು."

"ಈಗ ಅಗ್ಗವಾಗಿ ಸಿಗೋರೆ ರೈತರಲ್ವಾ?"



"ರೈತರೆ ಸರಕಾರಕ್ಕೆ ಹಗ್ಗವಾದಾಗ ಗೊತ್ತಾಯ್ತದೆ."

"ಏನು ಗೊತ್ತಾದ್ರು ತಾನೆ ಏನೊ. ಎಡೂರಪ್ಪ ಯಾಕೊ ನಿಶ್ಯೆಸಿಕೊಂಡೋ ನಂಗೆ ಕಾಣ್ತನೆ. ಅವುನ ಮಕದಲ್ಲಿ ಮದ್ದು ಕಿಡಿಲ್ಲ."

"ನಾನು ನೋಡಿದ್ದಿನಿ ಕಣೊ ಉಗ್ರಿ. ಯಾವ ಮನುಸನ ಮಕದಲ್ಲಿ ಕಿಡಿ ಇರದಿಲ್ಲಾ ಅವುನು ಹೆಚ್ಚುಕಮ್ಮಿ ಅರ್ಧ ಸತ್ತಂಗಿರತರೆ" ಎಂದು ಜುಮ್ಮಿ ಕಡೆ ನೋಡಿದ ವಾಟಿಸ್ಸೆ. ಹಟಾತ್ತನೆ,

"ಇದ್ಯಾಕಕ್ಕ ದಲ್ಲಾಗಿದ್ದೀ?" ಎಂದ.

"ಯಾಕೊ ಒಂಥರ ಬೇಜಾರು ಕಂಡ್ಯ."

"ಓಹೊ, ನಿನ್ನ ಬೇಜಾರಿಗೆ ಕಾರಣ ಏನು ಅಂತ ಗೊತ್ತಾಯ್ತು. ನೋಡಕ್ಕ, ಅಂತಾ ಭಾರತಿನೇ ಚೇತರಿಸಿಕೊಂಡು ಮನಿಗೆ ಬಂದೋರಿಗೆ ಕಾಫಿ ಕೊಟ್ಟು ಕಳುಸ್ತಯಿದ್ದಳಂತೆ. ಅಂತದ್ರಲ್ಲಿ ನೀನ್ಯಾಕಕ್ಕ ದಲ್ಲಾಗಿದ್ದೀ?"

"ಇದ್ದಕ್ಕಿದ್ದಂತೆ ಹೋಗಿಬುಟ್ನಲ್ಲ ಅದ್ಕೆ ನ್ಯನಿಪಿಗೆ ಬತ್ತದೆ ಕಂಡ್ಯ."

"ಇದ್ದಕ್ಕಿದ್ದಂಗೆ ಎಲ್ಲೋಗಿದ್ದನಕ್ಕಾ? ಒಪ್ಪಿಗೊಂಡ ಸಿನುಮಾದ ಕ್ಯಲಸ ಮುಗಿಸಿ ಹೋಗ್ಯವುನೆ. ಅಷ್ಟುಕೂ ಅವುನಾಗ್ಲೆ ಆ ಕಡಿಕೆ ಹ್ವಂಟಿದ್ನಂತೆ ಕಣಕ್ಕ. ಅಂತ್ರದಲ್ಲಿ ನೀನ್ಯಾಕಕ್ಕ ಬೇಜಾರಾಯ್ತಿ? ಇವತ್ತು ವಿಷ್ಣು ನಾಳೆ ನಮ್ಮ ಕಾಳದ್ವಡಪ್ಪ ಅಮ್ಯಾಲೆ ಸೀರಚಿಗಪ್ಪ ಅಮ್ಯಾಲೆ ಎಡೂರಪ್ಪ ಹಿಂಗೆ."

"ಥೂ, ಥೂ ಎಡೂರಪ್ಪನಿಗ್ಯಾಕಂಗಂತಿಯೊ? ಪಾಪ ಅವುನು ಯಂಗೋ ಕಾಲ ಮಾಡ್ತ ಅವ್ನೆ."

"ಅದ್ಕೆ ಕಣೊ ನಾನೇಳಿದ್ದು. ಯಂಗೋ ಕಾಲ ಹಾಕೋರು ಕಾಲನ ಕರೆಗೆ ಕಾಯ್ತಾಯಿರತರೆ. ಪರೆಗ್ ಜಾಂಪಲ್...."

"ಅದ್ಯಲ್ಲ ಬ್ಯಾಡ. ಎಡೂರಪ್ಪ ವಸವರ್ಸದಿಂದ ವಸಮನಸಾಗಿದ್ದನಂತೆ. ವಿಸ್ನಾರ ಮಾಡ್ತನಂತೆ."

"ನಿಜ, ಮಾಡೇ ಮಾಡ್ತನೆ. ವಿಷ್ಣು ತೀರೋದೇಟಿಗೆ ಅವುನ ಸಮಾದಿಗೆ ಹತ್ತು ಕೋಟಿ ಕೊಡ್ತಿನಿ ಅಂದವುನೆ. ನನಗಿರೊ ಡವುಟ್ ಪ್ರಕಾರ, ಸಾಮಾನ್ಯವಾಗಿ ಜೇಬಲ್ಲಿ ದುಡ್ಡಿಲ್ಲದೋನು ಬಿಲ್ಲು ಕೊಡಕ್ಕೆ ಹಾತೊರಿತನೆ. ಎಡೂರಪ್ಪ ಹತ್ತು ಕೋಟಿ ಅಂದೇಟಿಗೆ ನನಿಗಿಂತ ಅನುಮಾನ ಬತ್ತು."

"ಬ್ಯಳೆ ಹಾಳಾಗಿ ಬೀದಿಗೆ ಬಿದ್ದ ರೈತರ ಕಷ್ಟಕೆ ಎಡೂರಪ್ಪ ಐದು ಕೋಟಿ ಕೊಟ್ರು ಸಾಕಪ್ಪ, ಬದಿ ಕೋಯ್ತರೆ. ಅಂತ್ರದಲ್ಲಿ ಒಂದು ಸಿನುಮಕೆ ಅರವತ್ತು ಲಕ್ಷ ತಗಂಡಿರೊ ವಿಷ್ಣು ಸಮಾದಿಗೆ ಹತ್ತು ಕೋಟಿ ಕೊಡ್ತಿನಿ ಅಂತನಲ್ಲಾ ಜನ ನಗಲ್ವೇ? ವಿಷ್ಣು ಅಭಿಮಾನಿಗಳು ನಗಲ್ವೆ?"

"ಇಷ್ಣುವರ್ದನ ಆಟೊಂತರ ದುಡ್ಡು ತಗಂಡ ನೇನ್ಲ?"

"ಊ ದ್ವಡಪ್ಪ ಸಿನುಮ ಯೀರೋಗಳ ಏನಂತ ತಿಳಕಂಡಿದ್ದಿ ನೀನು. ಅದ್ಯಾವುದೂ ಗೊತ್ತಿಲ್ಲದೆ ಎಡೂರಪ್ಪ ಹತ್ತು ಕೋಟಿ ಕೊಡ್ತಿನಿ ಅಂದುಬುಟ್ಟ."


"ಕಾಳಮಾವ ಹೇಳಿದ್ದ ಕಣೊ. ಕ್ಯರಕಂಡು ಗಾಯ ಮಾಡಿಕಳದ್ರಲ್ಲಿ ಎಡೂರಪ್ಪ ನಿಸ್ಸೀಮ ಅಂತ. ಇನ್ನೊ ತಿಥಿಗೋದ್ರೆ 10 ಕೋಟಿ ಬರಲಿಲ್ಲ ಅಂತ ವಿಷ್ಣು ಅಭಿಮಾನಿಗಳು ಗಲಾಟಿ ಮಾಡ್ತರೆ. ಆಗ ಪೊಲೀಸ್ ನೋರು ಲಾಟಿ ಚಾರ್ಜು ಮಾಡ್ತರೆ. ಜೋರಾಗಿ ವಿಟು ತಿಂದವು ಆಸುಪತ್ರಿಗೋಯ್ತವೆ. ಕೆಲವು ಜೈಲಿಗೂ ಹೋಯ್ತವೆ. ಜೈಲಲ್ಲಿ ಇದ್ದವ ಕೋರ್ಟಿಗೆ ತರಬೇಕಾದ್ರೆ ಬೇಡಿ ಹಾಕ್ತರೆ. ಆಗ ನೋಡಪ್ಪ ಇರದು. ಇಂತವೇ ಕ್ಯಲಸ ಎಡೂರಪ್ಪನವು. ಇದನ್ನಲ್ಲ ನೋಡಿದ್ರೆ ಅವುನಿಗೆ ಸಲಹೆ ಕೊಡಕ್ಕೆ ವಳ್ಳೆ ಜನ ಇಟಗಂಡಿಲ್ಲ ಅಂತ ಕಾಣ್ತದೆ."

"ಎಜ್ಜಾಟ್ಲಿ ಕರಟ್." ●

...ಕೈ ಇಲ್ಲದ ಕಳೇಬರ ವಾಹನ"

...ನ್ನೆ ಒಂದು ಪುಸ್ತಕದಲ್ಲಿ ಡಾ. ಎಚ್. ನರಸಿಂಹಯ್ಯನವರ ಒಂದು ಚಿಕ್ಕ ಲೇಖನ ನೋಡಿದೆ. ... ಅವರು ಬೆಂಗಳೂರು ನಗರಸಭೆಯ ಸದಸ್ಯನೊಬ್ಬನೊಂದಿಗೆ ಮಾತಾಡುತ್ತ ಬೆಂಗಳೂರಿಗೆ ಎರಡು ...ಗಳ ಬಗ್ಗೆ ಹೇಳುತ್ತಾರೆ. ಅವುಗಳಲ್ಲಿ ಒಂದು ಬೆಂಗಳೂರಿನ ರಸ್ತೆಗಳು ಕೆಟ್ಟುಹೋಗಿದ್ದು ತುರ್ತಾಗಿ ...ಾಗಬೇಕಾಗಿರುವುದು. ನರಸಿಂಹಯ್ಯನವರು ಸಾಮಾನ್ಯವಾಗಿ ಆಟೋರಿಕ್ಷಾಗಳಲ್ಲಿ ಓಡಾಡುವುದರಿಂದ ...ರು ರಸ್ತೆಗಳಲ್ಲಿ ಆ ರಿಕ್ಷಾಗಳು ಓಡುವಾಗ ತಮ್ಮ ಮೂಳೆಗಳೆಲ್ಲ ಮುರಿದುಹೋಗುವ ಭಯವನ್ನು ...ತಮಾಷೆಯಾಗಿ ಹೇಳಿಕೊಂಡಿದ್ದಾರೆ.

...ರು ಬೆಂಗಳೂರಿನ ಇನ್ನೊಂದು ಅವಶ್ಯಕತೆಯ ಬಗ್ಗೆ ಹೇಳುವುದನ್ನು ಅವರ ಮಾತಲ್ಲೇ ಕೇಳಿ:



...ನ್ನೊಂದು ಅಷ್ಟು ಕಷ್ಟದ ಕೆಲಸವಲ್ಲಪ್ಪ, ಅದೇನಪ್ಪ ನಿಮ್ಮ ಕಾರ್ಪೊರೇಷನ್ನಿನ ಶವಾಹನ ... ಒಳ್ಳೆ ಬಡಕಲು ಜಟಕಾ ಗಾಡಿ ಇದ್ದ ಹಾಗಿದೆ. ಈ ಗಾಡಿಗೆ ಪೈಂಟ್ ಮಾಡಿಸಿ ... ವರ್ಷಗಳು ಆಗಿದ್ದ ಹಾಗೆ ಕಾಣುತ್ತೆ, ಅದರ ಬಾಗಿಲಿಗೆ ಚಿಲಕ ಕೂಡ ಇಲ್ಲ. ... ಮುಚ್ಚಲು ಒಂದು ಹಗ್ಗ ಇದೆ. ಅದರಲ್ಲಿದ್ದವರು ತಪ್ಪಿಸಿಕೊಂಡು ಹೋಗುವುದಿಲ್ಲಾ ...ಮಗೆ ಧೈರ್ಯ. ಅದಕ್ಕಾಗಿಯೇ ಸರಿಯಾದ ಭದ್ರತಾ ವ್ಯವಸ್ಥೆ ಮಾಡಿಲ್ಲ. ವಾಹನಕ್ಕೆ ... ಇಲ್ಲ, ಒಳಗೆ ಮಲಗಿದ್ದವನಿಗೆ ಅದಕ್ಕಿಂತ ಹೆಚ್ಚು ಕಳೆ ಇದ್ದ ಹಾಗೆ ಕಾಣುತ್ತದೆ. ...ಎರಡು ಮೂರು ಸಲ ಕುಳಿತುಕೊಂಡು ಹೋಗಿದ್ದೀನಿ. ಇನ್ನೂ ಮಲಗಿಕೊಂಡು ... ಅನುಭವ ಆಗಿಲ್ಲ. ಆ ವಾಹನಗಳು ಇದೇ ಸ್ಥಿತಿಯಲ್ಲಿದ್ದರೆ ಅವುಗಳಲ್ಲಿ ಮಲಗಿಕೊಂಡು ...ದಕ್ಕೆ ಬೇಜಾರಾಗುತ್ತೆ, ನೀವು ಆ ವಾಹನಗಳನ್ನು ಹೆಚ್ಚು ಆಕರ್ಷಕವಾಗಿ ಮಾಡಬೇಕು. ...ನೋಡಿದ ತಕ್ಷಣ ಸಂತೋಷವಾಗಬೇಕು. ಒಳಗೆ ಮಲಗಿದ ಮೇಲಂತೂ ಏನೂ ...ವುದಿಲ್ಲ" ಅಂದೆ. ಅವರೆಲ್ಲಾ ಬಿದ್ದು ಬಿದ್ದು ನಗುತ್ತಿದ್ದರು.

...ಸದಸ್ಯ: "ಏನ್ ಸಾರ್, ನೀವು ಹೀಗೆ ಮಾತಾಡುತ್ತೀರಿ. ನೀವು ಯಾವಾಗಲೂ ...ಸೀರಿಯಸ್ ಆಗಿರ್ತೀರಿ ಅಂತ ತಿಳಿದುಕೊಂಡಿದ್ದೆ" ಎಂದು ಸತ್ಯನಾರಾಯಣ ಹೇಳಿದರು.

...ಇಲ್ಲಪ್ಪ, ನಾನು ಯಾವಾಗಲೂ ಹೀಗೇನೆ. ಸೀರಿಯಸ್ ವಿಷಯಗಳನ್ನು ತಮಾಷೆಯಾಗಿ ಹೇಳ್ತೀನೆ. ... ಅಷ್ಟೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ವಿಷಯ. ದಯವಿಟ್ಟು ವಿದ್ಯುತ್ ಚಿತಾಗಾರಗಳ ...ನ್ನು ಹೆಚ್ಚು ಮಾಡಿ. ಸುಡುವುದನ್ನು ಜನಪ್ರಿಯ ಆಗಿ ಮಾಡಬೇಕು. ಸುಡುವುದು ಎಲ್ಲಾ ... ಉತ್ತಮ. ಶವಗಳನ್ನು ಹೂಳುವ ಪದ್ಧತಿಯನ್ನು ಬಿಡಬೇಕು. ನಾನು ಶಾಸಕನಾಗಿದ್ದಾಗ ವಿಧಾನ ...ಲ್ಲಿ ಇದೇ ವಿಷಯ ಪ್ರಸ್ತಾಪ ಮಾಡಿದ್ದೆ" ಅಂದೆ.

ನ. ಸದಸ್ಯ: "ಒಂದೊಂದು ಚಿತಾಗಾರಕ್ಕೂ ತುಂಬಾ ಹಣ ಬೇಕಾಗುತ್ತದೆ. ಈಗ ಬೆಂಗಳೂರಿನಲ್ಲಿ ಸದ್ಯಕ್ಕೆ ನಾಲ್ಕಿವೆ" ಎಂದರು.

ನ: "ನಾಲ್ಕು ಇದ್ದರೂ ಅವುಗಳಲ್ಲಿ ಒಂದಲ್ಲ ಒಂದು ಆಗಾಗ ಕೆಟ್ಟುಹೋಗುತ್ತಲೇ ಇರುತ್ತವೆ. 'ರಿಪೇರಿಗಾಗಿ ವಿದ್ಯುತ್ ಚಿತಾಗಾರವನ್ನು ಮುಚ್ಚಲಾಗಿದೆ. ಸಾರ್ವಜನಿಕರು ಸಹಕರಿಸಬೇಕು' ಎಂಬ ಪ್ರಕಟಣೆಯನ್ನು ಪತ್ರಿಕೆಗಳಲ್ಲಿ ಓದುತ್ತಲೇ ಇರುತ್ತೇವೆ. ಸಾರ್ವಜನಿಕರು ಹೇಗೆ ಸಹಕರಿಸುವುದು, ಎಷ್ಟು ಅಂತ ಸಹಕರಿಸುವುದು. ಸಹನೆಗೆ ಮಿತಿ ಇಲ್ಲವೇ" ಅಂತ ನಗುತ್ತಾ ಹೇಳಿ "ನೀವು ಎಲ್ಲಿಯತನಕ ವಾಹನವನ್ನು ಆಕರ್ಷಕವಾಗಿ ಮಾಡುವುದಿಲ್ಲವೋ ಅಲ್ಲಿಯತನಕ ಅದರಲ್ಲಿ ನಾನು ಹೋಗುವುದಿಲ್ಲ" ಎಂದು ಹೇಳುತ್ತಾ ಗಾಡಿಯಿಂದ ಇಳಿದೆ.

ನರಸಿಂಹಯ್ಯನವಂಥವರು ಕೂಡ ಎಷ್ಟು ಹೊಣೆಗೇಡಿಗಳಾಗಿ ಚಿಂತಿಸಬಹುದು ಎಂಬುದನ್ನು ಇದು ತೋರುತ್ತದೆ. ಭಾರತದ ಈಗಿನ ಜನಸಂಖ್ಯೆ ಎಪ್ಪತ್ತು ಕೋಟಿ ಎಂದು ಇಟ್ಟುಕೊಂಡರೂ ಈಗಿನ ಸಾವಿನ ಪ್ರಮಾಣ ನೋಡಿ. ಈಗ ಸಾವಿರಕ್ಕೆ ವರ್ಷಕ್ಕೆ **11.2** ಜನ ಸಾಯುತ್ತಿದ್ದಾರೆ. ಅಂದರೆ ವರ್ಷಕ್ಕೆ ಎಪ್ಪತ್ತೆಂಟೂವರೆ ಲಕ್ಷ ಜನ ಸಾಯುತ್ತಿದ್ದಾರೆ. ಇವರನ್ನು ಭಸ್ಮ ಮಾಡಲು ಒಂದೂವರೆ ಕೋಟಿ ಟನ್ ಸೌದೆ ಬೇಕಾಗುತ್ತದೆ; ಇದನ್ನು ವಿದ್ಯುಚ್ಛಕ್ತಿಗೆ ಪರಿವರ್ತಿಸಿದರೆ ಸಾವಿರಾರು ಮೆಗಾವ್ಯಾಟ್ ವಿದ್ಯುತ್ ಬೇಕಾಗುತ್ತದೆ. ಒಂದು ರಾಜ್ಯಕ್ಕೆ ಬೇಕಾಗುವ ಕರೆಂಟ್ ಅಥವಾ ಒಂದು ರಾಜ್ಯದಲ್ಲಿರುವ ಪೂರ್ತಿ ಅರಣ್ಯದ ಸೌದೆ ಈ ಸುಡುವ ಕೆಲಸಕ್ಕೆ ಬೇಕಾಗುತ್ತದೆ. ಇದನ್ನು ತಮಾಷೆಗೆ ಹೇಳುತ್ತಿಲ್ಲ, ನಮ್ಮ ಗಿಡಮರಗಳೆಲ್ಲ ನಾಶವಾಗುತ್ತಿರುವುದಕ್ಕೆ ಇದೂ ಒಂದು ಮುಖ್ಯ ಕಾರಣ.



ಆದ್ದರಿಂದ ಕಳೇಬರಗಳನ್ನು ಹೂಳುವುದು ಅತ್ಯಂತ ಸುಲಭವಾದ, ಏನೇನೂ ಖರ್ಚಿಲ್ಲದ ಕೆಲಸ. ಮಣ್ಣಿನಿಂದ ಬಂದ ದೇಹ ಮಣ್ಣಿಗೆ ಹೊರಟುಹೋಗುತ್ತದೆ; ಸಾವಿರಾರು ವರ್ಷಗಳಲ್ಲಿ ಮೂಳೆ, ಚರ್ಮಗಳೆಲ್ಲ ಮಣ್ಣಾಗುತ್ತವೆ. ಇದನ್ನು ನಾನೇ ಬಲ್ಲಂತ ಮುಸ್ಲಿಮರು, ಕ್ರಿಶ್ಚಿಯನ್ನರು, ಲಿಂಗಾಯತರು ಮಾಡುತ್ತಾರೆ. ಮೊದಲ ಎರಡು ಧರ್ಮಗಳಲ್ಲಿ ವಿಶೇಷ ಸ್ಮಶಾನಗಳಿರುವುದು, ಗೋರಿಗಳಿರುವುದು ನಿಜ; ಇದಕ್ಕೆ ನಗರಗಳಲ್ಲಿನ "ಅಮೂಲ್ಯ" ಜಾಗ ಬೇಕಾಗುವುದೂ ನಿಜ. ಆದರೆ ಅನೇಕ ಸ್ಮಶಾನಗಳನ್ನು ನಿವೇಶನಗಳನ್ನಾಗಿ ಮಾಡಿದ ಉದಾಹರಣೆಗಳಿವೆ; ಕ್ರಿಶ್ಚಿಯನ್ನರು, ಮುಸ್ಲಿಮರು ತಮ್ಮ ಸ್ಮಶಾನಗಳಲ್ಲಿ ಹಳೆಯ ಜಾಗದಲ್ಲಿ ಹೊಸತಾಗಿ ಹೂಳುವುದು ಉಂಟು. ಅಲ್ಲದೆ ಅವರನ್ನು ಗೋರಿ, ಸ್ಮಾರಕಕಲ್ಲು ಇಡದಿರಲು ಒಪ್ಪಿಸುವುದು ಕಷ್ಟವಾಗಲಿಕ್ಕಿಲ್ಲ, ಲಿಂಗಾಯತರಲ್ಲಿ ಈ ಗೋರಿಯ ಸಂಪ್ರದಾಯವೂ ಇಲ್ಲ. ಬಸವಕಲ್ಯಾಣಕ್ಕೆ ಹೋಗಿ ನೋಡಿದರೆ ಅಲ್ಲಿ ಶರಣರು ಎಲ್ಲಿ ಹೂಳಲ್ಪಟ್ಟಿದ್ದಾರೆ ಎಂಬ ಗುರುತೂ ಇಲ್ಲ.

ನರಸಿಂಹಯ್ಯನವರ ತರಹದವರು ವೈದಿಕ ಸಂಪ್ರದಾಯವನ್ನು ಅವ್ಯೆಚಾರಿಕವಾಗಿ ಒಪ್ಪಿಕೊಂಡಿರಬಹುದು.

–ಮಾರ್ಚ್ 1, 1992

ಸತ್ತವರು ತಂದ ಸಂಕಟ

ಆನೆ ಇದ್ದರೂ ಸಾವಿರ, ಸತ್ತರೂ ಸಾವಿರ ಎಂಬ ಮಾತಿದೆ. ಆದರೆ ಕೆಲವರಿರುತ್ತಾರೆ. ಇದ್ದಾಗ ಸಮಸ್ಯೆ ಸತ್ತಾಗ ದೊಡ್ಡ ಸಮಸ್ಯೆ ಆಗುತ್ತಾರೆ.

ಏನು ಈ ಸಮಸ್ಯೆ?


ಮೊದಲನೆಯದು: ಶವವನ್ನು ಯಾರು ಸಂಸ್ಕಾರ ಮಾಡಬೇಕು?

ಇನ್ಯಾರು? ತಂದೆಗೆ ಹಿರಿಯಮಗ, ತಾಯಿಗೆ ಕಿರಿಯಮಗ. ಇಲ್ಲಿ ಸಮಸ್ಯೆ ಎಲ್ಲಿಂದ ಬಂತು? ಆ ದೇವರೇ ಜಿಪಿಎ ಕೊಟ್ಟಿದ್ದಾನಲ್ಲ?

ಅವರು ಸತ್ತವರ ಬದುಕನ್ನೇ ಮೂರಾಬಟ್ಟೆ ಮಾಡಿದ್ದರೆ?

ಇದು ಸತ್ತವರ ಕರ್ಮಫಲ!

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಸ್ವರ್ಗಾರೋಹಣಕ್ಕೆ ಕಾರಣಕರ್ತರಾದ ಇವರಿಗೆ ಪ್ರತಿಫಲ ಬೇಡವೆ? ಅದೂ ಇದೆ. ಆಸ್ತಿಯಲ್ಲಿ ಅಧಿಕ ಪಾಲು!

ಸಾಲವೇ ಆಸ್ತಿಯಾಗಿದ್ದರೆ?

ಸ್ವರ್ಗಕ್ಕೇರಿಸುವ ಪುತ್ರರತ್ನಕ್ಕೆ ಹೆಚ್ಚಿನ ಭಾರ ಬೀಳಬಾರದು. ಎಲ್ಲರೂ ಅದಕ್ಕೆ ಸಮಭಾಗಿಗಳು!

ಮಕ್ಕಳೆ ಇಲ್ಲದಿದ್ದರೆ?

ಇದು ಇನ್ನೊಂದು ರೀತಿಯ ಸಮಸ್ಯೆಗೆ ದಾರಿಯಾಗುತ್ತದೆ. ದೀರ್ಘ ಕಾಲ ಅವರ ಸೇವೆ ಸಲ್ಲಿಸಿದವರಿರಬಹುದು. ಅವರಿಗೇ ಈ ಅರ್ಹತೆ ಸಲ್ಲಬೇಕು. ಆದರೆ ಹತ್ತಿರದ ಬಂಧುಗಳು ಅಂತ ಇರುತ್ತಾರಲ್ಲ, ಬದುಕಿದ್ದಾಗ ಅವರಿಗೆ ಹಾವು-ಕೀರ ಸ್ನೇಹವೇ ಇರಬಹುದು. ಆದರೆ ಬಂಧುತ್ವ ಎಂಬ ಹಕ್ಕು? ಅವರೇ ಅದನ್ನು ನಿರ್ವಹಿಸಬೇಕು. ಇಹ-ಪರಲೋಕ ಯಾವುದೇ ಪುಣ್ಯ ಪರರ ಪಾಲಾಗಬಾರದು!

ಇದನ್ನು ಹೇಗೋ ನಿಭಾಯಿಸಿದಿರಿ. ಧುತ್ತನೆ ಎದುರಾಗುತ್ತದೆ ಮತ್ತೊಂದು ಪ್ರಶ್ನೆ-ಶವಸಂಸ್ಕಾರ ಮಾಡುವುದು ಎಲ್ಲಿ?

ಇನ್ನೆಲ್ಲಿ? ಸ್ಮಶಾನದಲ್ಲಿ.

ಉತ್ತರ ಅಷ್ಟು ಸರಳ ಅಲ್ಲ. ಸಾವಿರಾರು ಹಳ್ಳಿಗಳಲ್ಲಿ ಸ್ಮಶಾನವೇ ಇರಲ್ಲ. ಇದ್ದರೂ ಪುಣ್ಯಾತ್ಮರನೇಕರು ಅದರ ಒತ್ತುವರಿ ಮಾಡಿಕೊಂಡಿರುತ್ತಾರೆ. ಆಗೇನು ಮಾಡಬೇಕು?

ಅವರ ಜಮೀನಿನಲ್ಲಿ ಸಂಸ್ಕಾರ ಮಾಡಲಿ.

ಇದು ಉಳ್ಳವರಿಗೆ ಅನ್ವಯಿಸುತ್ತೆ. ಕೋಟ್ಯಂತರ ಜನರಿಗೆ ಸ್ವಂತ ಭೂಮಿಯೇ ಇಲ್ಲವಲ್ಲ?

ಹೆಣ ಎತ್ತಿ ಎನ್ನುವುದು ಊರವರ ತಗಾದೆ. ಎತ್ತಿ ಎಲ್ಲಿಗೊಯ್ಯುವುದು ಎಂಬುದು ಮನೆಯವರ ಸಮಸ್ಯೆ.

ಇದು ಹಳ್ಳಿಯವರ ಗೋಳಾಯಿತು. ನಗರಗಳಲ್ಲಿ?

ಪ್ರಾಣ ಹೋಗಿರಬಹುದು. ಧರ್ಮ ಹೋಗಿರಲ್ಲ. ಆಯಾ ಧರ್ಮದವರು ನಿಗದಿತ ಸ್ಮಶಾನದಲ್ಲಿಯೇ ಸಂಸ್ಕಾರ ನಡೆಸಬೇಕು. ತನ್ನ ಧರ್ಮದವರನ್ನ ತನ್ನ ಬಳಿಗೆ ಕರೆದುಕೊಳ್ಳಲು ಎಂತಹ ಸಂದಿಗ್ಧತೆಯೂ ಉಂಟಾಗದಿರಲಿ ಎಂದು ಈ ವ್ಯವಸ್ಥೆ ಇರಬೇಕು. ದೇವಾನುದೇವತೆಗಳೆಲ್ಲ ಆಯಾ ಧರ್ಮದ ಸ್ಮಶಾನದ ಬಳಿಯೇ ಬೀಟ್ ಮಾಡುತ್ತಿದ್ದರೂ ಇರಬಹುದು!

ಇದೆಲ್ಲ ಶ್ರೀಸಾಮಾನ್ಯನ ವಿಷಯ ಆಯಿತು. ಜನಪ್ರಿಯ ವ್ಯಕ್ತಿಗಳಿಗೂ ಅನ್ವಯಿಸುವುದೆ?

ಮಹಾತ್ಮ ಗಾಂಧಿ ತೀರಿಕೊಂಡರು. ಇಡೀ ವಿಶ್ವವೇ ಕಣ್ಣೀರುಗರೆಯಿತು. ಅವರ ಶವಸಂಸ್ಕಾರದ ಸ್ಥಳ 'ರಾಜಘಾಟ್' ಆಯಿತು. ನವಿಲು ನೋಡಿ ಕೆಂಭೂತ ಪುಕ್ಕ ಕೆರೆದುಕೊಳ್ಳುವ ಕ್ರಿಯೆ ಪ್ರಾರಂಭ ಆಯಿತು. ಎಲ್ಲರಿಗೂ ಗಾಂಧಿ ಆಗಬೇಕು ಅನ್ನುವ ತೆವಲೋ ಅಥವಾ ಇವನ್ನ ಏನಾದರೂ ಮಾಡಿ ಸತ್ತ ಮೇಲಾದರೂ ಗಾಂಧಿ ತರಹ ಮಾಡಬೇಕು ಅನ್ನುವ ಚಟವೋ ತಿಳಿಯದು. ಜವಹರಲಾಲ್ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ ಇಂದಿರಾ ಗಾಂಧಿ, ರಾಜೀವ್ ಗಾಂಧಿ ಹೀಗೆ ಒಬ್ಬೊಬ್ಬರ ಶವಸಂಸ್ಕಾರಕ್ಕೂ ಒಂದೊಂದು ವನವೇ ಬೇಕಾಯ್ತು!

ಯಾಕೆ ಎಲ್ಲರಿಗೂ ಸಾರ್ವಜನಿಕ ಸ್ಥಳವನ್ನೇ ಶವಸಂಸ್ಕಾರಕ್ಕೆ ನೀಡಲಾಗುತ್ತೆ ಅವರಿಗೇನು ಸ್ವಂತ ಜಮೀನು ಇರಲಿಲ್ಲವೆ ಅಂದರೆ ಇದ್ದಿರಬಹುದು. ಆದರೆ ಸರ್ಕಾರಿ ಜಾಗದಲ್ಲಿ ಸಂಸ್ಕಾರ ಮಾಡಿದ್ರೆ ಅದೊಂದು ಇದು ಅಲ್ವಾ.....

ಇದು ದೆಹಲಿ ಸಮಾಚಾರ ಆಯ್ತು. ಇನ್ನು ಬೆಂಗಳೂರಿಗೆ ಬರೋಣವಂತೆ.

ಡಾ. ರಾಜ್‌ಕುಮಾರ್ ಮರಣ ಹೊಂದಿದರು. ಆಗ ಇದೇ ಪ್ರಶ್ನೆ ಎದುರಾಯಿತು- ಅವರ ಶವಸಂಸ್ಕಾರ ಎಲ್ಲಿ ನಡೆಯಬೇಕು?

ಅದು ಯುವ ಮುಖ್ಯಮಂತ್ರಿ ಕುಮಾರಸ್ವಾಮಿ ಜಮಾನ. ದೂರದರ್ಶಿತ್ವದ ವಿಫಲತೆಯ ಫಲವಾಗಿ ಆಡಳಿತ ನಿಷ್ಕ್ರಿಯಗೊಂಡಿತ್ತು. ದೊಂಬಿಗಳು ನಡೆಯುತ್ತಾ ನಾಗರಿಕರ ಆಕ್ರೋಶಕ್ಕೆ ಗುರಿಯಾಗಿತ್ತು ಸರ್ಕಾರ ಅನ್ನೋದು. ರಾಜ್‌ಕುಮಾರ್ ಅಭಿಮಾನಿಗಳ ಕೈಲಾದರೂ 'ಬೇಸ್ ಕುಮಾರಣ್ಣ' ಅನ್ನಿಸಿಕೊಳ್ಳಬೇಕು ಅಂತಾನೋ ಏನೋ 'ಕಂಠೀರವ ಸ್ಟುಡಿಯೋ ಆವರಣದಲ್ಲಿ ನಡೀಲಿ ರಾಜ್ ಶವಸಂಸ್ಕಾರ' ಎಂದು ಸಾರಿದರು. ಡಾ. ರಾಜ್‌ಕುಮಾರ್‌ಗೇನೂ ಸ್ವಂತ ಭೂಮಿ ಇರ್ಲಿಲ್ಲ ಅಂತಲ್ಲ. ಸಾರ್ವಜನಿಕ ಸ್ಮಶಾನದಲ್ಲಿ ಸಂಸ್ಕಾರ ಮಾಡೋಲ್ಲ ಅಂತಾನೂ ಯಾರೂ ಹೇಳದಂಗಿಲ್ಲ. ಸರ್ಕಾರದ ಜಮೀನಿನಲ್ಲಿ ಮಾಡಿದರೆ ಅದೊಂದು ಇದು ಅಂತಾವ ಅಷ್ಟೆ.

ಕುಮಾರಣ್ಣನ ಕಾಲ ಮುಗೀತು. ಯಡ್ಯೂರಪ್ಪ ಜಮಾನ ಬಂತು. ಆಗ ರಾಜ್‌ಕುಮಾರ್ ಮರಣ ಹೊಂದಿದರೆ ಈಗ ವಿಷ್ಣುವರ್ಧನ್ ಸರದಿ. ಅಯ್ಯೋ ಹಿಂಗಾಗೋಯ್ತಲ್ಲ ಎಂದು ಟಿವಿಗಳಲ್ಲಿ ಭಕ್ತರು, ಅಲ್ಲದವರು ಸೊಗಸಾಗಿ ತಮ್ಮ ಅಭಿನಯ ಚಾತುರ್ಯವನ್ನು ತೋರಿಸುವುದಕ್ಕಿಂತ ಮಿಗಿಲಾದ ಅಭಿನಯವನ್ನ ಯಡ್ಯೂರಪ್ಪನವರು ಮಾಡಲೇ ಬೇಕಾಯ್ತು. ಮತ್ತೆ ಎದುರಾಯಿತು ಪ್ರಶ್ನೆ-ಅವರ ಶವಸಂಸ್ಕಾರ



ಎಲ್ಲಿ?

ಅಂಬರೀಷ್ ಮುಂದಾಳತ್ವ ವಹಿಸಿದರು. ಅವರು ಬಲೇ ತಲೆ ಕೆಡಿಸಿಕೊಂಡಿರಬೇಕು. ಅಳೆದೂ ಸುರಿದು ವಿಷ್ಣು-ಭಾರತಿ ಪ್ರೇಮಾಂಕುರ ಆದ ಅಭಿಮಾನ್ ಸ್ಟುಡಿಯೋನೇ ಪ್ರಶಸ್ತವಾದ ಸ್ಥಳ ಎಂಬುದನ್ನು ನಿರ್ಧರಿಸಿದರು. ಷಹಜಹಾನ್ ಅಂಬೋನು ಮಮ್ತಾಜ್ ಎಂಬೋಳ ನೆನಪಿಗೆ ತಾಜ್‌ಮಹಲ್ ನಿರ್ಮಿಸಿದ ಹಾಗೆ ಇವರು ವಿಷ್ಣು-ಭಾರತಿ ಮಹಲ್ ಕಟ್ಟಿಸುತ್ತಾರೋ ಏನೋ ತಿಳಿದಿಲ್ಲ. ಅಂತೂ ಇಂತಹ ನಿರ್ಧಾರ ತಗೊಂಡರು. ಅದನ್ನು ಯಡ್ಯೂರಪ್ಪನವರ ಮುಂದೆ ಇಟ್ಟರು. ಅವರು ಮುಖ್ಯಮಂತ್ರಿ ಅಲ್ವಾ. ಇದು ಯಾರಿಗೆ ಸೇರಿದ ಜಮೀನು? ಅದರ ಮಾಲೀಕ ಒಪ್ಗೆ ನೀಡಿದ್ದಾರಾ ಅಂತೇನೂ ಕೇಳಬೇಕಾಗಿಲ್ಲ. ನಾವು ಆಡಿದ್ದೆ ಆಟ. ಮಾಡಿದ್ದೇ ಕಾನೂನು ಅನ್ನೋ ಜಾಯಮಾನ ದೋರು. 'ತಗಳಿ ಎರಡೆಕ್ರೆಯ' ಅಂದ್ರು. ಬರೀ ಶವಸಂಸ್ಕಾರ ಮಾಡಿದ್ರೆ ಆಯ್ತಾ ಅಂತ ಅಂಬಿ ಕೇಳಿರಬೇಕು. ಸತ್ತು ಹೋಗಿರುವಂತಹ ಮಠಗಳಿಗೂ ನೂರಾರು ಕೋಟಿ ರೂಪಾಯಿ ನೀಡಿರುವ ದಾನಶೂರ ನಾನು ಇದಕ್ಕಿಲ್ಲಾಂತೀನಾ ಅಂತಾವ 'ತಗಳ್ಳಿ ಹತ್ಕೋಟಿಯ, ಕಟ್ಸಿಸ್ಮಾರಕವಾ' ಅಂದ್ರು.

ಡಾ. ವಿಷ್ಣುವರ್ಧನ್ ಅಭಿಮಾನಿಗಳ ಹೊಟ್ಟೆ ತಣ್ಣಗಾಗಿರಬೇಕು!

ವಿಷ್ಣು ಆಯಿತು. ಹುಟ್ಟಿದವರು ಸಾಯಲೇಬೇಕು. ಭಾರತಿ ಇದಕ್ಕೆ ಹೊರತಲ್ಲ. ಆಗಲೂ ಇದೇ ಪ್ರಶ್ನೆ ಎದುರಾಗಬಹುದು. ಪಾಪ ಅವರ ಶವಸಂಸ್ಕಾರಾನ ಎಲ್ಲೊ ಮಾಡಿದರೆ ಆಗುತ್ತದೆಯೆ? ಹಾಗೇನಾದರೂ ಆದರೆ ವಿಷ್ಣು ಆತ್ಮವೊಂದು ಕಡೆ, ಭಾರತಿ ಆತ್ಮ ಒಂದು ಕಡೆ ಪರಿತಪಿಸೋಲ್ವೆ? ಅದಕ್ಕೇ ಅದೂ ಅಭಿಮಾನ ಸ್ಟುಡಿಯೋ ಆವರಣದಲ್ಲೇ ನಡೀಬೇಕು. ಆಗ ಮುಖ್ಯಮಂತ್ರಿಯಾಗಿರೋನು 'ತಗೋ ಎರಡೆಕ್ರೆಯ' ಅನ್ನಬೇಕು!

ಇಷ್ಟಕ್ಕೇ ನಿಲ್ಲಲ್ಲ. ಅಂಬರೀಷ್ ಸರದಿ ಬರುತ್ತೆ. ತನ್ನ ಪ್ರಾಣಸ್ನೇಹಿತನ್ನ ಬಿಟ್ಟು ಅಂಬಿ ಹೇಗಿದ್ದಾರು? ಅದೂಅಲ್ಲದೆ ವಿಷ್ಣು-ಭಾರತಿ ಮಹಲ್‌ಗೆ ತಳಹದಿ ಹಾಕ್ದೋರೆ ಇವರಲ್ವಾ. ಅವರಿಗೂ ಒಂದೆರಡು ಎಕರೆ ಕೊಡೋದು ಧರ್ಮಾನೆ ಸರಿ. ಆಮೇಲೆ ಅವರ ಧರ್ಮಪತ್ನಿ ಸುಮಲತಾಗೆ ಎರಡು ಎಕರೆ ಬೇಕಾಗ್ತದೆ. ಹಿಂಗೇ ನೀಡ್ತಾ ಹೋದ್ರೆ 'ಐದು ಕೊಡಿ ಹತ್ತು ಕೊಡಿ' ಅಂತ ಭಿಕ್ಷಾಟನೆ ಮಾಡಿ ಬಾಲಕೃಷ್ಣ ಅವರು ಕಟ್ಟಿಸಿದ ಅಭಿಮಾನ್ ಸ್ಟುಡಿಯೋ ಅನ್ನೋದು 'ಸಿನಿಮಾದೋರ ರುದ್ರಭೂಮಿ' ಆಗೇಬಿಡುತ್ತೇನೋ......!

ಪ್ರೀತಿ, ಅಭಿಮಾನ ಎಲ್ಲವೂ ಸರೀನೆ. ಸತ್ತವರ ಜ್ಞಾಪಕಾರ್ಥ ಸಾರ್ಥಕವಾದ ಕೆಲಸ ಮಾಡಬೇಕು ಅನ್ನುವುದೂ ಒಪ್ಪುವ ಮಾತೇ. ಆದರೆ ಸಾರ್ವಜನಿಕ ಹಣದಲ್ಲಿ ಇದೆಲ್ಲ ನಡೀಬೇಕು ಅಂತ ಪ್ರಭಾವ ಬೀರಿ ಹಣ ಪಡೆಯೋದು ಹಗಲು ದರೋಡೆ ಅನ್ನಿಸೋಲ್ವಾ....

ಯಾವುದೋ ಟ್ರಸ್ಟ್ ಹೆಸರಿನಲ್ಲಿ ಪ್ರಾರಂಭವಾಗುವ ಈ ಸ್ಮಾರಕಗಳು ಮುಂದೆ ಏನಾಗಬಹುದು? ಪೋಲಿ ಪಟಾಲಂಗಳ ಐಷಾರಾಮಿ ಜೀವನದ ಆಶ್ರಯ ತಾಣಾನಾ....

ವಿಷ್ಣು ಆಣೆಗೂ ನಾನು ಇನ್ನು ಮುಂದೆ ನಿಮ್ಮ ಪತ್ರಿಕೆ ಓದುವುದಿಲ್ಲ

'ಕಂಡಹಾಗೆ'ಯಲ್ಲಿ ಗೌರಿ ಲಂಕೇಶ್ ಅವರು ಬರೆದ 'ತಲೆಗೂದಲು ಮತ್ತು ಅದಿರು ಸಂಪತ್ತು' ಅದ್ಭುತವಾಗಿತ್ತು. ಗಂಭೀರವಾದ ವಿಚಾರಗಳನ್ನು ಆತ್ಮೀಯ ಧಾಟಿಯಲ್ಲಿ ಮತ್ತು ಸ್ಪಷ್ಟ ನಿಲುವಿನಲ್ಲಿ ಬರೆಯುವ ಅವರಿಗೆ ನನ್ನ ಅಭಿನಂದನೆ.

-ಕು.ಸ.ಮಧುಸೂದನ್, ರಂಗೇನಹಳ್ಳಿ

ಜನವರಿ 13ರ ಸಂಚಿಕೆಯಲ್ಲಿ ಮೂಡಿಬಂದಿರುವ ದಿ.ಅಶ್ವತ್ಥ್ ಹಾಗೂ ದಿ. ವಿಷ್ಣುವರ್ಧನ್‌ರವರನ್ನು ಕುರಿತಾದ ಲೇಖನಗಳು ನಿಜಕ್ಕೂ ಅಮೋಘವಾಗಿವೆ. ಎಲ್ಲಾ ದಿನಪತ್ರಿಕೆಗಳಲ್ಲಿ ಮತ್ತು ಟ್ಯಾಬ್ಲಾಯಿಡ್‌ಗಳಲ್ಲಿ ಇವರುಗಳ ಬಗ್ಗೆ 'ಬಣ್ಣದ ತಗಡಿನ ತುತ್ತೂರಿಯನ್ನು' ಊದುತ್ತಾ 'ಗಗ...ಗಗ...' ಸದ್ದನ್ನು ಮಾಡುತ್ತಿದ್ದಾಗ ತಮ್ಮ ಪತ್ರಿಕೆಯಲ್ಲಿ ಅತ್ಯಂತ ನಿಷ್ಠುರವಾದ ಮತ್ತು ಸವಿವರವಾದ ಲೇಖನ ಗಳನ್ನು ಪ್ರಕಟಿಸಿ ಸಂಗ್ರಹಯೋಗ್ಯ ಮಾಡಿದ್ದೀರಿ.

ಇದಲ್ಲದೇ ಚಿದ್ದಿಗಳೇ ಚಿದ್ದಿಗಳ ಚಿದ್ದಿಗಳನ್ನು ಬಿಚ್ಚುತ್ತಿರುವುದನ್ನು ತೋರುವ ಬೇಳೂರು ಸುದರ್ಶನ ಅವರ ಲೇಖನ ಮತ್ತು ಶಿವಸುಂದರ್‌ರವರ 'ಬಡತನ' ಕುರಿತಾದ ಲೇಖನಗಳು ಉತ್ತಮವಾಗಿವೆ. ತಮ್ಮ ಪತ್ರಿಕೆ ಹೀಗೆಯೇ ಮುಂದುವರೆಯಲಿ.

-ಡಾ. ತುಮಕೂರು ಚಂದ್ರಕಾಂತ, ಬೆಂಗಳೂರು

ದಿ.ಸಿ.ಅಶ್ವತ್ಥ್‌ರ ಬಗ್ಗೆ ಪತ್ರಿಕೆಯಲ್ಲಿ ಬಂದ ಲೇಖನದಲ್ಲಿ ನೀವು ಅವರ ಕಂಠವನ್ನು 'ಗಾರ್ದಭ' ಎಂದು ಕರೆದಿದ್ದೀರಿ. ಇದು ನನಗೆ ಇಷ್ಟವಾಗಲಿಲ್ಲ, ನಾನು ಅವರ ಹಾಡುಗಳನ್ನು ಇಷ್ಟಪಡುತ್ತೇನೆ. ನಾನೊಬ್ಬನೇ ಅಲ್ಲ ಅವರ ಸಂಗೀತವನ್ನು ಹಲವಾರು ಜನ ಇಷ್ಟಪಡುತ್ತಾರೆ.

ಮನಸ್ಸಿಗೆ ಬೇಸರವಾದಾಗ ಅವರ ಹಾಡುಗಳನ್ನು ಕೇಳಿದರೆ ಎಷ್ಟೋ ಸಮಾಧಾನ ಆಗುತ್ತದೆ. ನನ್ನಂತೆ ಹಲವಾರು ಜನ ಇದ್ದಾರೆ. ನಿಮ್ಮ ಲೇಖನ ನಮ್ಮಂಥವರಿಗೆ ಬೇಜಾರು ತಂದಿದೆ.

ನೀವು ಅವರು ಹಾಡಿದ್ದ 'ಕೆಂಚಾಲೋ' ಹಾಡಿನ ಬಗ್ಗೆ ಬರೆದಿದ್ದೀರಿ. ಆದರೆ ಅವರು ಅದೊಂದೇ ಅಲ್ಲದೆ ಬೇರೆ ಒಳ್ಳೆಯ ಹಾಡುಗಳನ್ನೂ ಹಾಡಿದ್ದಾರೆ. ಉದಾಹರಣೆಗೆ 'ಮಾತಾಡ್ ಮಾತಾಡು ಮಲ್ಲಿಗೆ' ಚಿತ್ರದ ಹಾಡು.

ನೀವು ಏನೇ ಹೇಳಿದರೂ ನಮಗೆ ಅವರ ಕಂಠವೇ ಇಷ್ಟ.

- ರಾಜಶೇಖರ, ಈಮೇಲ್ ಮೂಲಕ

ವಿಷ್ಣು ಅವರ ಅಭಿಮಾನಿಯಾದ ನನಗೆ ಅವರ ಕುರಿತಂತೆ ನಿಮ್ಮ ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನ ನೋಡಿ ತುಂಬಾ ಬೇಸರವಾಯಿತು. ಎಲ್ಲರಂತೆ ಅವರೂ ಓರ್ವ ಮನುಷ್ಯರಾಗಿದ್ದು ಅವರಲ್ಲೂ ಹಲವು ದೋಷಗಳಿದ್ದವು (ರಾಜ್‌ರಲ್ಲಿ ಯಾವ ದೋಷಗಳೂ ಇರಲಿಲ್ಲವೇ?). ಹಾಗಿದ್ದೂ ನೀವು ಅವುಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದೀರಿ. ಅವರು ನಿಧನ ಹೊಂದಿರುವಾಗ ಅದನ್ನು ತಾವು ನಿರ್ಲಕ್ಷಿಸಿ ಕನ್ನಡ ಚಿತ್ರರಂಗಕ್ಕೆ ವಿಷ್ಣು ಅವರು ನೀಡಿದ ಕೊಡುಗೆಯ ಬಗ್ಗೆ ಬರೆಯಬಹುದಿತ್ತು, ಹಾಗೆ ಮಾಡದಿದ್ದ ನೀವು ಸದಾಶಿವನಗರದ ಕ್ಯಾಂಪಿಗೆ ಹತ್ತಿರವಾಗಲು ಪ್ರಯತ್ನಿಸುತ್ತಿದ್ದೀರಾ ಅನ್ನಿಸುತ್ತಿದೆ. ನನಗೆ ಎಷ್ಟು ಬೇಸರವಾಗಿದೆಯೆಂದರೆ, ವಿಷ್ಣು ಆಣೆಗೂ ನಾನು ಇನ್ನು ಮುಂದೆ ಎಂದೆಂದೂ ನಿಮ್ಮ ಪತ್ರಿಕೆಯನ್ನು ಖರೀದಿಸಿ ಓದುವುದಿಲ್ಲ.

- ವೀರಭದ್ರ, ಈ ಮೇಲ್ ಮೂಲಕ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆಕಳಿಸಬಹುದು)

ಹೊಗಳಿಕೆ ತೆಗಳಿಕೆ


ಮುಖ್ಯಮಂತ್ರಿ ಯಡ್ಯೂರಪ್ಪನವರಿಗೆ ಹಲವು ಪ್ರಶ್ನೆಗಳು:

- ಪ್ರತಿದಿನ ನೀವು ಮಠಾಧಿಪತಿಗಳ ಆಶೀರ್ವಾದ, ಪಾದಕಾಣಿಕೆ, ಹೋಮ, ಯಾಗ, ತುಲಾಭಾರ ಮಾಡಿಸಿಯೂ, ಯಾವುದೋ ಒಂದು ದೋಷ ನಿಮ್ಮನ್ನ ಕಾಡುತ್ತಿದೆಯಲ್ಲ, ಯಾಕೆ?
- ಈಗೀಗ ನೀವು ತಪ್ಪು ಮಾಡುವ ವಾರಸುದಾರರಾಗಿದ್ದೀರಲ್ಲ, ಯಾಕೆ?
- ನೀವು ನೀಡಿದ ಯಾವ ಭರವಸೆಗಳೂ ಸಾಕಾರಗೊಂಡಿಲ್ಲ. ಯಾಕೆಂದರೆ ಅವನ್ನು ಸಾಕಾರಗೊಳಿಸಲು ಬೇಕಿರುವ ಹಂಬಲವಾಗಲಿ, ಬದ್ಧತೆಯಾಗಲಿ. ಕ್ರಿಯಾಶೀಲತೆಯಾಗಲಿ. ಛಲವಾಗಲಿ ನಿಮ್ಮಲ್ಲಿಲ್ಲ, ಆದ್ದರಿಂದ ಅವನ್ನೆಲ್ಲ ಟೊಳ್ಳು ಭರವಸೆಗಳೆಂದು ಭಾವಿಸಬಾರದೇಕೆ?
- ನಿಮ್ಮ ರಾಜನೀತಿ ನಿಧಾನವಾಗಿ ಸಮಾಜಘಾತುಕ ಶಕ್ತಿಗಳ ಕೈವಶವಾಗುತ್ತಿದೆಯಲ್ಲ, ಯಾಕೆ?
- ಸಂವಿಧಾನಾತ್ಮಕ ನೀತಿಯಲ್ಲಿ ಸಮಾಜಘಾತುಕ ಶಕ್ತಿಗಳ ಕೈಗಳಿಗೆ ಅಧಿಕಾರ ಸಿಗುವುದು ನ್ಯಾಯಸಮ್ಮತವಾಗಲಿ, ಜನಸಮ್ಮತವಾಗಲೀ ಖಂಡಿತಾ ಅಲ್ಲ, ಅಷ್ಟೇ ಅಲ್ಲ ಸಮಾಜಘಾತುಕ ಆಡಳಿತನೀತಿ ಯಾವತ್ತೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾದದ್ದು. ರಾಜಕೀಯದಲ್ಲಿ ಪಳಗಿದ ನಿಮಗೆ ಇದು ಅರ್ಥವಾಗಿಲ್ಲ ಯಾಕೆ?
- ಇತ್ತೀಚೆಗೆ ವಿಷ್ಣುವರ್ಧನ್ ತೀರಿಕೊಂಡರು. ಅವರು ಒಬ್ಬ ಮೇರು ಕಲಾವಿದ. ವೈಯಕ್ತಿಕವಾಗಿಯೂ ಅವರು ಒಳ್ಳೆಯವರೇ. ಅವರ ಬಗ್ಗೆ ನಮಗೂ ಅಭಿಮಾನ, ಗೌರವ ಇದೆ. ಆದರೆ ವಿಷ್ಣುವರ್ಧನ್ ಅವರ ಸ್ಮಾರಕಕ್ಕೆ 10 ಕೋಟಿ ದೇಣಿಗೆ ನೀಡುವುದಾಗಿಯೂ, ಎರಡು ಎಕರೆ ಜಮೀನನ್ನು ದಾನ ಕೊಡುವುದಾಗಿಯೂ ನೀವು ಘೋಷಿಸಿಬಿಟ್ಟಿರಲ್ಲ? ಈ ಹಣ ಎಲ್ಲಿಂದ ಬರುತ್ತೆ? ಅದು ನಿಮ್ಮ ಸ್ವಂತ ಗಳಿಕೆಯದ್ದೋ? ಅಲ್ಲಾ ಅದು ಜನರ ಹನಿಹನಿ ತೆರಿಗೆಯದ್ದೋ?
- ಇನ್ನು ನಾಡಿನಾದ್ಯಂತ ನಡೆಯುವ ಸಮ್ಮೇಳನಗಳಿಗೆ, ಸಾರ್ವಜನಿಕ ಸಮಾರಂಭಗಳಿಗೆ, ಮಠಮಾನ್ಯಗಳಿಗೆ ಕೋಟಿ ಕೋಟಿ ಹಣವನ್ನು ಪ್ರಸಾದದ ರೀತಿ ಹಂಚುತ್ತಿದ್ದೀರಲ್ಲ? ಈ ಹಣವೆಲ್ಲ ಯಾವ ಮೂಲದಿಂದ ಬಂದದ್ದು ಎಂಬುದನ್ನು ಯೋಚಿಸಿದ್ದೀರಾ? ಅಥವಾ ಹೇಳಬಲ್ಲಿರಾ?
- ನೆರೆ ಸಂತ್ರಸ್ತರ ನರಳಾಟಕ್ಕೆ ಪರಿಹಾರ ನೀಡಲು ನಿಮ್ಮಲ್ಲಿ ಹಣವಿಲ್ಲ, ರೈತರು ತಮ್ಮ ಅವಶ್ಯ ಬೇಡಿಕೆಯಾದ ಬೀಜ ಮತ್ತು ಗೊಬ್ಬರ ಕೇಳಿದರೆ ಅದನ್ನೂ ಕೊಡಲು ನಿಮ್ಮಿಂದ ಸಾಧ್ಯವಿಲ್ಲ, ಅದಕ್ಕೆ ರೈತರ ಮೇಲೆ ಲಾಠಿ ಪ್ರಯೋಗ ಮಾಡಿಸುತ್ತೀರಿ. ಇತ್ತೀಚೆಗೆ ಅವರ ಕೈಗಳಿಗೆ ಕೋಳವನ್ನೂ ಹಾಕಿಸಿದ್ದೀರಿ. ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವಾಗ ರೈತರ ಸಂಕೇತವಾದ ಹಸಿರುಶಾಲನ್ನು ಹೊದ್ದಿದ್ದ ನಿಮ್ಮಿಂದ ಇಂತಹ ಮರ್ಯಾದೆ ಪಡೆದ ರೈತಾಪಿ ನಿಜಕ್ಕೂ ಕೃತಜ್ಞರಾಗಿರಬೇಕಲ್ಲವೇ?
- ಇದೆಲ್ಲ ಸಾಲದೆಂಬಂತೆ, ಓರ್ವ ಮಹಾನ್ ಕೊಳಕು ಮನುಷ್ಯ ಸ್ತ್ರೀ ಪೀಡಕನಾದ ರೇಣುಕಾಚಾರ್ಯನನ್ನು ತಮ್ಮ ಮಂತ್ರಿ ಮಂಡಲಕ್ಕೆ ಸೇರಿಸಿಕೊಂಡಿದ್ದೀರಿ. ಆತನಲ್ಲಿ ಯಾವ ಯೋಗ್ಯತೆಯನ್ನು ಕಂಡು ಅವನಿಗೆ ನಿಮ್ಮ ಈ ಉಂಬಳಿ ಎಂದು ಹೇಳುವಿರಾ?

-ಕೆ.ಜೆ.ಶೆಟ್ಟಿ ಕದಂದಲೆ, ದ.ಕ.

ಸರ್ಕಾರ, ಸ್ಟುಡಿಯೋ, ಸಮಾಧಿ!


ಕುಮಾರಸ್ವಾಮಿ ಸರ್ಕಾರ ಕಂಠೀರವ ಸ್ಟುಡಿಯೋದ ಒಂದು ಭಾಗವನ್ನು ರಾಜ್‌ಕುಮಾರ್ ಸಮಾಧಿಗೆ ಬಿಟ್ಟುಕೊಟ್ಟಿತ್ತು. ಈಗ ಮುಖ್ಯಮಂತ್ರಿ ಯಡ್ಡಿ ನೇತೃತ್ವದ ಚೆಡ್ಡಿ ಸರ್ಕಾರ ಅಭಿಮಾನ್ ಸ್ಟುಡಿಯೋವನ್ನು ವಿಷ್ಣು ಸಮಾಧಿಯಾಗಿ ಪರಿವರ್ತಿಸಿದೆ. ಅಲ್ಲಿಗೆ ಎರಡು ಸ್ಟುಡಿಯೋಗಳು ಗಾಂಧಿನಗರದ ಜನರ ಕೈಯಿಂದ ತಪ್ಪಿ ಹೋದಂತಾಗಿದೆ.




ಅದಕ್ಕಾಗಿಯೋ ಏನೋ, ಯಡಿಯೂರಪ್ಪ ಮೊನ್ನೆ ಎರಡು ಫಿಲ್ಮ್‌ಸಿಟಿ ಆರಂಭಿಸುವ ಮಾತನ್ನು ವಿಷ್ಣು ಶ್ರದ್ಧಾಂಜಲಿ ಸಭೆಯಲ್ಲಿ ಘೋಷಿಸಿದ್ದಾರೆ. ಆದರೆ ಯಡ್ಡಿಯ ಮಾತು ಅತ್ಯಂತ ಹಾಸ್ಯಾಸ್ಪದವಾಗಿದೆ. ಯಾಕೆಂದರೆ ಒಂದು ಕಡೆ, ಇದ್ದ ಬದ್ದ ಸ್ಟುಡಿಯೋಗಳನ್ನು ಸಮಾಧಿಗಲಾಗಿ ಪರಿವರ್ತಿಸುತ್ತಿರುವ ಸರ್ಕಾರ ಇನ್ನೊಂದು ಕಡೆ, ಹೊಸ ಸ್ಟುಡಿಯೋದ ಸ್ಥಾಪನೆ ಬಗ್ಗೆ ಮಾತಾಡುತ್ತಿದೆ. ಈ ಮಾತು ಕೇಳಿ ನಗಬೇಕೋ? ಅಥವಾ ಅಳಬೇಕೋ? ಎಂದು ಗೊತ್ತಾಗಲಿಲ್ಲ.

ಅದೇನೇ ಇರಲಿ, ಫಿಲ್ಮ್‌ಸಿಟಿ ಸ್ಥಾಪನೆಯನ್ನು ಎಲ್ಲರೂ ಸ್ವಾಗತಿಸುತ್ತಾರೆ. ಆದರೆ ಎರಡು ಮಹಾನ್ ಕಲಾವಿದರ ಹೆಣ ಬೀಳುವ ಮೊದಲು ರಾಜ್ಯ ಸರ್ಕಾರಕ್ಕೆ ಫಿಲ್ಮ್‌ಸಿಟಿ ಸ್ಥಾಪಿಸಬೇಕೆಂಬ ವಿಷಯ ಗೊತ್ತಿರಲಿಲ್ಲವೇ? ಅದಕ್ಕಾಗಿ ಈ ಇಬ್ಬರು ಮಹಾನ್ ನಟರ ಹೆಣ ಬೀಳುವತನಕ ಸರ್ಕಾರ ಕಾಯಬೇಕಿತ್ತೆ ಎಂಬುದೇ ಪ್ರಶ್ನೆ.

ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್ ಕಳೆದ ಹಲವಾರು ವರ್ಷಗಳಿಂದ ಅನೇಕ ಬಾರಿ ಬೇರೆ ಬೇರೆ ಮುಖ್ಯಮಂತ್ರಿಗಳ ಬಳಿ ಫಿಲ್ಮ್‌ಸಿಟಿ ನಿರ್ಮಾಣದ ಬಗ್ಗೆ ಮನವಿ ಮಾಡಿದ್ದುಂಟು. ಆದರೆ ಅವರ ಮನವಿ ಬಗ್ಗೆ ಈಗಿನ ಮುಖ್ಯಮಂತ್ರಿ ಯಡ್ಡಿಯ ಸಮೇತ ಯಾವುದೇ ಮುಖ್ಯಮಂತ್ರಿಗಳು ಅಂತಹ ಉತ್ಸಾಹ ತೋರಿಸಿದ್ದೇ ಇಲ್ಲ. ಈ ಕಾರಣಕ್ಕಾಗಿಯೇ ಈಗ ಇವರಿಬ್ಬರ ನಿಧನಾನಂತರ ಚಿತ್ರನಗರಿಯ ನಿರ್ಮಾಣದ ಘೋಷಣೆ ಹಾಸ್ಯಾಸ್ಪದ ಘೋಷಣೆಯಂತೆ ಕಾಣಿಸುತ್ತಿದೆ. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಮಾತ್ರ ಇದಕ್ಕೊಂದು ಅಪವಾದ. ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಹೆಸರಘಟ್ಟದ ಬಳಿ ಸುಮಾರು ಮುನ್ನೂರೈವತ್ತು ಎಕರೆ ಜಮೀನನ್ನು ಫಿಲ್ಮ್‌ಸಿಟಿ ನಿರ್ಮಾಣಕ್ಕಾಗಿ ಕಾಯ್ದಿಟ್ಟಿದ್ದರು. ಅದರಲ್ಲಿ ಒಂದು ಚಿಕ್ಕ ಪಾಲನ್ನು ತಮ್ಮ ಆಪ್ತೆ ಪ್ರೊತಿಮಾ ಬೇಡಿಗೆ ನೀಡಿದ್ದರು. ಇನ್ನೊಂದಿಷ್ಟು ಭಾಗದಲ್ಲಿ ಆದರ್ಶ ಫಿಲ್ಮ್ ಇನ್ಸ್‌ಸ್ಟಿಟ್ಯೂಟ್ ತಲೆಯೆತ್ತಿದ್ದು ಬಿಟ್ಟರೆ ಉಳಿದಂತೆ ಸುಮಾರು ...) ವರ್ಷಗಳಿಂದ ಆ ಜಮೀನು ಹಾಗೆಯೇ ಹಾಳು ಬಿದ್ದಿದೆ.



ಈ ಮಧ್ಯೆ ಕನಸುಗಾರ ರವಿಚಂದ್ರನ್ "ಆ ಜಾಗವನ್ನು ನನಗೆ ನೀಡಿ, ನಾನು ಸ್ಟುಡಿಯೋ ಕಟ್ಟುತ್ತೇನೆ" ಎಂದು ತಮ್ಮ ಕನಸಿನ ಸ್ಟುಡಿಯೋದ ಮಾಸ್ಟರ್‌ಪ್ಲಾನ್ ಸಮೇತ ಸರ್ಕಾರವನ್ನು ಸಂಪರ್ಕಿಸಿದರು. ಅದೇ ಸಮಯದಲ್ಲಿ ಹಂಸಲೇಖ, ರಾಜೇಂದ್ರಸಿಂಗ್ ಬಾಬು ಮತ್ತಿತರರೂ "ನಾವು ಸ್ಟುಡಿಯೋ ಕಟ್ಟುತ್ತೇವೆ" ಎಂದು ಮನವಿ ಸಲ್ಲಿಸಿದ್ದರು. ಆದರೆ ಯಾವ ಸರ್ಕಾರ ಕೂಡಾ ಇವರ ಮನವಿಗೆ ಸ್ಪಂದಿಸಲೇ ಇಲ್ಲ ಎಂಬುದು ಅತ್ಯಂತ ಕಹಿಸತ್ಯ.



ರಾಜ್-ವಿಷ್ಣು ಸೇರಿದಂತೆ ಇವರೆಲ್ಲರ ಫೈಲ್‌ಗಳು ಧೂಳು ತಿನ್ನುತ್ತಾ ಮಲಗಿರುವ ಸಂದರ್ಭದಲ್ಲಿ ಯಡ್ಡಿ ಸರ್ಕಾರ ಕನ್ನಡ ಚಿತ್ರರಂಗ ಕಂಡ ಇಬ್ಬರು ಮಹಾನ್ ಕಲಾವಿದರ ಹೆಸರಿನಲ್ಲಿ ಈಗ ಚಿತ್ರನಗರಿ ನಿರ್ಮಾಣ ಮಾಡುತ್ತೇನೆಂದಿರುವುದು ವ್ಯಂಗ್ಯದ ಪರಮಾವಧಿಯಲ್ಲದೆ ಮತ್ತಿನ್ನೇನು?

ರಾಜ್ ಮತ್ತು ವಿಷ್ಣುರಂತಹ ಪ್ರಭಾವಿ ನಟರು ಬದುಕಿದ್ದಾಗ ಅವರ ಮನವಿಗೆ ಕ್ಯಾರೇ ಅನ್ನದ ಸರ್ಕಾರ ಈಗ ಅವರ ಸಮಾಧಿಯ ಮೇಲೆ ಮಾಯಾನಗರ ಕಟ್ಟುತ್ತೇನೆ ಎನ್ನುತ್ತಿರುವುದು ರಾಜಕಾರಣಿಗಳ ಕಂತ್ರಿ ಬುದ್ಧಿಯನ್ನು ತೋರಿಸುತ್ತದೆ. ಆಧುನಿಕ ಕರ್ನಾಟಕದ ಇತಿಹಾಸದಲ್ಲಿ ನೆಟ್ಟಗೆ ಒಂದೇ ಒಂದು ಸ್ಟುಡಿಯೋವನ್ನೂ ಕಟ್ಟಲಾಗದ ನಮ್ಮ ಘನ ಸರ್ಕಾರ ಈಗ ಒಂದೇ ಬಾರಿಗೆ ಎರಡು ಸ್ಟುಡಿಯೋಗಳ ನಿರ್ಮಾಣದ ಘೋಷಣೆ ಮಾಡಿರುವುದು ವಾಸ್ತವಿಕತೆಗೆ ದೂರವಿರುವ ಸಂಗತಿಯೆಂದೇ ಹೇಳಬೇಕು. ಹಾಗೆ ನೋಡಿದರೆ ಈಗ ಸ್ಟುಡಿಯೋಗಳ ಕಲ್ಪನೆಯೇ ಬದಲಾಗಿದೆ. ಅಂತಹ ಬದಲಾವಣೆಗೆ ಕನ್ನಡ ಚಿತ್ರರಂಗ ಕೂಡಾ ಸ್ಪಂದಿಸಿದೆ.

ಉದಾಹರಣೆಗೆ ಈಗ ಬಹುತೇಕ ನಿರ್ದೇಶಕರು ಹಾಡುಗಳ ಚಿತ್ರೀಕರಣಕ್ಕಾಗಿ ವಿದೇಶಗಳಿಗೆ ಹೋಗುವುದು ಮಾಮೂಲಿಯಾಗಿದೆ. ಅಷ್ಟೇ ಅಲ್ಲ ಸ್ಟುಡಿಯೋದಲ್ಲಿ ಚಿತ್ರೀಕರಣ ಮಾಡುವ ಬದಲಿಗೆ ರೆಸಾರ್ಟ್‌ಗಳಲ್ಲಿ, ಮನೆಗಳಲ್ಲಿ ಶೂಟಿಂಗ್ ಮಾಡುವ ಪರಂಪರೆ ಆರಂಭವಾಗಿದೆ. ಈಗಿರುವ ಅತ್ಯಾಧುನಿಕ ಕ್ಯಾಮರಾಗಳು, ತಂತ್ರಜ್ಞಾನಗಳು ಹೇಗಿವೆಯೆಂದರೆ ಯಾವುದೇ ಪ್ರದೇಶದಲ್ಲಿ ಶೂಟಿಂಗ್ ಮಾಡಿದರೂ ಅದಕ್ಕೆ ಹಿನ್ನೆಲೆಯಾಗಿ ಪ್ರಪಂಚದ ಯಾವುದೇ ಭಾಗದ ದೃಶ್ಯಗಳನ್ನು ಜೋಡಿಸಬಹುದಾಗಿದೆ. ಇಂತಹ ಆಧುನಿಕ ತಂತ್ರಜ್ಞಾನದ ಈ ಕಾಲಘಟ್ಟದಲ್ಲಿ ಸ್ಟುಡಿಯೋಗಳು ಆದರ ಮಹತ್ವ ಮತ್ತು ಅಗತ್ಯತೆಯನ್ನು ಕಳೆದುಕೊಂಡಿವೆ.

ಹೀಗಾಗಿ ಈಗ ಬೇಕಾಗಿರುವುದು ಸ್ಟುಡಿಯೋಗಳಲ್ಲ, ಆಧುನಿಕ ತಂತ್ರಜ್ಞಾನಗಳನ್ನು ಒದಗಿಸುವಂತಹ ಲ್ಯಾಬ್‌ಗಳು. ಯಡ್ಡಿ ಸರ್ಕಾರ ಇಂತಹ ಮೂಲಭೂತ ಸೌಕರ್ಯ, ತಂತ್ರಜ್ಞಾನದ ಅನುಕೂಲತೆಗಳನ್ನು ನೀಡುವ ಬಗ್ಗೆ ತಲೆಕೆಡಿಸಿಕೊಳ್ಳಬೇಕೆ ವಿನಃ ಫಿಲ್ಮ್‌ಸಿಟಿಯ ಬಗೆ ಅಲ್ಲ. ಇನ್ನೊಂದು ವಿಶೇಷವೆಂದರೆ ಎರಡು ಫಿಲ್ಮ್‌ಸಿಟಿಯನ್ನು ನಿರ್ಮಾಣ ಮಾಡುವ ಐಡಿಯಾವನ್ನು ಈ ಸರ್ಕಾರಕ್ಕೆ ಯಾರು, ಯಾಕೆ ಕೊಟ್ಟರು? ಎಂಬುದೇ ಅರ್ಥವಾಗುತ್ತಿಲ್ಲ. ವಿಷ್ಣು ಅಭಿಮಾನಿಗಳನ್ನು ಸಂತೈಸಲು ಮೈಸೂರಿನಲ್ಲಿ, ರಾಜ್ ಅಭಿಮಾನಿಗಳನ್ನು ಸಂತೃಪ್ತಿ ಪಡಿಸಲು ಬೆಂಗಳೂರಿನಲ್ಲಿ... ಎಂಬ ಸೂತ್ರಕ್ಕೆ ಈ ಸರ್ಕಾರ ಗಂಟುಬಿದ್ದಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಅದರ ಬದಲಿಗೆ ಒಂದೇ ಒಂದು ಅತ್ಯಾಧುನಿಕ ಸ್ಟುಡಿಯೋವನ್ನು ನಿರ್ಮಾಣ ಮಾಡಬಹುದಿತ್ತು, ಅಗತ್ಯವಿದ್ದಲ್ಲಿ ಅದಕ್ಕೆ ಇವರಿಬ್ಬರ ಹೆಸರನ್ನೂ ಇಡಬಹುದಿತ್ತು. ಅದನ್ನು ಮಾಡುವುದನ್ನು ಬಿಟ್ಟು ಕಳ್ಳೇಪುರಿ ಹಂಚಿದಂತೆ ಒಬ್ಬೊಬ್ಬರ ಹೆಸರಿಗೆ ಒಂದೊಂದರಂತೆ ಫಿಲ್ಮ್‌ಸಿಟಿ ಮಾಡಲು ಹೊರಟಿರುವುದು ಎಷ್ಟು ಸರಿ?

ನಿಜ, ರಾಜ್ ಮತ್ತು ವಿಷ್ಣು ನಿಧನದಿಂದಾಗಿ ಕನ್ನಡ ಚಿತ್ರರಂಗದಲ್ಲಿ ಒಂದು ಶೂನ್ಯ ಆವರಿಸಿದೆ. ಇಂತಹ ಮಹಾನ್ ನಟರ ಪ್ರತಿಭೆ, ನಟನಾ ಕೌಶಲ್ಯ ಮತ್ತು ಮಾನವೀಯತೆಗುಣಗಳನ್ನು ಮುಂದಿನ ಜನಾಂಗಕ್ಕೆ ಪರಿಚಯಿಸುವಂತಹ, ಆ ಮೂಲಕ ಆ ಇಬ್ಬರು ನಟರುಗಳನ್ನು ಅಜರಾಮರವಾಗಿಸುವ ಕಾರ್ಯವನ್ನು ಸರ್ಕಾರ ಮತ್ತು ಚೇಂಬರ್ ಮಾಡಬೇಕಾಗಿದೆ. ಅದನ್ನು ಬಿಟ್ಟು ಚಿತ್ರನಗರಿ ಸ್ಥಾಪಿಸಿ ಅದಕ್ಕೆ ಅವರ ಹೆಸರನ್ನಿಟ್ಟಾಕ್ಷಣ ಯಾರಿಗೂ ಏನೂ ಪ್ರಯೋಜನವಿಲ್ಲ ಎಂಬ ಕಟುಸತ್ಯವನ್ನು ನಮ್ಮ ರಾಜಕಾರಣಿಗಳು ಅರಿಯಬೇಕಾಗಿದೆ.

● ಸದಾಶಿವ ಶೆಣೈ

ಸಮಾಧಿಯ ಸಂಗ್ರಾಮ!

ಅಭಿಮಾನ್ ಸ್ಟುಡಿಯೋವನ್ನು ವಿಷ್ಣು ಸಮಾಧಿಯನ್ನಾಗಿ ಮಾಡುವಲ್ಲಿ ಮಹತ್ತರ ಪಾತ್ರ ನಿರ್ವಹಿಸಿದವರು ಯಾರು? ಈ ಬಗ್ಗೆ ವಿಷ್ಣು ಅಭಿಮಾನಿಗಳಲ್ಲಿ ಒಂದು ಚರ್ಚೆ ಆರಂಭವಾಗಿದೆ.



ಎಲ್ಲರಿಗೂ ಗೊತ್ತಿರುವಂತೆ ವಿಷ್ಣುವಿನ ಆಪ್ತಮಿತ್ರ ಅಂಬರೀಶ್ ತಮ್ಮ ಗೆಳೆಯನ ಅಂತಿಮ ಯಾತ್ರೆ ಬಗ್ಗೆ ಮುತುವರ್ಜಿ ವಹಿಸಿದರು. ಆದರೆ ಅಭಿಮಾನ್ ಸ್ಟುಡಿಯೋ ಆಯ್ಕೆಯಲ್ಲಿ ಬೇರೆ ಬೇರೆಯವರ ಹೆಸರುಗಳು ಕೇಳಿಬರುತ್ತಿವೆ. ರಾಜಕೀಯ ವಲಯದಲ್ಲಿ ಕೇಳಿಬರುತ್ತಿರುವ ಪ್ರಮುಖ ಹೆಸರು ಸಾರಿಗೆ ಸಚಿವ ಆರ್. ಅಶೋಕ್ ಅವರದ್ದು. ಕೆಂಗೇರಿಯಲ್ಲಿರುವ ಅಭಿಮಾನ್ ಸ್ಟುಡಿಯೋ ಅಶೋಕ್ ಅವರ ಉತ್ತರಹಳ್ಳಿ ಕ್ಷೇತ್ರದ ಆಜುಬಾಜಿನಲ್ಲಿರುವುದು ಇದಕ್ಕೆ ಒಂದು ಕಾರಣ. ಅಷ್ಟೇ ಅಲ್ಲದೆ, ಮಾಜಿ ಸಚಿವೆ ಶೋಭಾ ಕರಂದ್ಲಾಜೆ ಕೂಡಾ ಈ ಬಗ್ಗೆ ಮುತುವರ್ಜಿ ವಹಿಸುತ್ತಾ "ನನ್ನ ಅಸೆಂಬ್ಲಿ ಕ್ಷೇತ್ರದಲ್ಲಿರುವ ವಿಷ್ಣು ಸಮಾಧಿಯ ಕೆಲಸ ಮುಂದಿನ ತಿಥಿಯೊಳಗೆ ಆರಂಭವಾಗುವಂತೆ ನೋಡಿಕೊಳ್ಳುತ್ತೇನೆ" ಎಂದು ವಿಷ್ಣು ಅಭಿಮಾನಿಗಳಿಗೆ ಭರವಸೆ ನೀಡಿದ್ದಾರೆ. ಆ ಮೂಲಕ ಇದರಲ್ಲಿ ತಮ್ಮ ಪಾತ್ರವೂ ಇದೆ ಎಂಬಂತೆ ಪೋಸು ಕೊಟ್ಟಿದ್ದಾರೆ.

ಆದರೆ ವಾಸ್ತವ ವಿಷಯವೇ ಬೇರೆ. ವಿಷ್ಣು ಸಮಾಧಿಯನ್ನು ಬನಶಂಕರಿಯ ಸ್ಮಶಾನದಿಂದ ಬೇರೆಡೆಗೆ ಸ್ಥಳಾಂತರಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸಿದವರು ಕುಮಾರಸ್ವಾಮಿ ಮತ್ತು ದೇವೇಗೌಡರು. ಬೆಳಗ್ಗೆ ವಿಷ್ಣು ಮನೆಗೆ ಸಾಂತ್ವನದ ಭೇಟಿ ನೀಡಿದ ನಂತರ ಪದ್ಮನಾಭನಗರದ ಮನೆಯಲ್ಲಿ ಅಪ್ಪ-ಮಗ ಇಬ್ಬರೂ ಟಿವಿ ನೋಡುತ್ತಾ ಕುಳಿತಾಗ ಫ್ಲಾಷ್ ನ್ಯೂಸ್ ಒಂದು ಕಾಣಿಸಿತು. 'ವಿಷ್ಣು ಅಂತಿಮ ಸಂಸ್ಕಾರವನ್ನು ಬನಶಂಕರಿಯ ಚಿತಾಗಾರದಲ್ಲಿ ನಡೆಸಲಾಗುವುದು' ಎಂದು. ಇದನ್ನು ನೋಡಿದಾಕ್ಷಣ ದೇವೇಗೌಡರು ತನ್ನ ಎಂದಿನ ಹಾಸ್ಯಮಿಶ್ರಿತ ಭಾಷೆಯಲ್ಲಿ "ಏನಪ್ಪಾ... ನಿನ್ನ ಸಿನಿಮಾದ ಹೀರೋ ಅಂತಿಯಾ... ಆದರೆ ಆತನ ಅಂತ್ಯಸಂಸ್ಕಾರವನ್ನು ಬನಶಂಕರಿಯಲ್ಲಿ ಮಾಡುತ್ತಿದ್ದಾರಲ್ಲ? ಬೇರೆ ಎಲ್ಲೂ ವಿಶೇಷವಾದ ಜಾಗ ಸಿಗಲಿಲ್ಲವೆ?"? ಎಂದು ಕುಟುಕಿದರು.



ಆ ತಕ್ಷಣ ಎಚ್ಚರಗೊಂಡ ಕುಮಾರಸ್ವಾಮಿ ಮುಖ್ಯ ಕಾರ್ಯದರ್ಶಿಯವರಿಗೆ ಫೋನಾಯಿಸಿ "ಅವರಿಗೆ ವಿಶೇಷವಾದ ಜಾಗವನ್ನು ನಮೂದಿಸಿ, ಅಂತ್ಯಕ್ರಿಯೆಯ ಗೌರವ ತೋರಿಸಿ, ಇಲ್ಲದಿದ್ದರೆ ಅಭಿಮಾನಿಗಳು ಗಲಭೆ ಮಾಡಬಹುದು" ಎಂದು ಹೇಳಿದರು. ಆ ಕೂಡಲೇ ಅದಕ್ಕೊಪ್ಪಿದ ಮುಖ್ಯ ಕಾರ್ಯದರ್ಶಿ "ನೀವೊಂದು ಮಾತನ್ನು ಸಿಎಂ ಸಾಹೇಬರಿಗೆ ಹೇಳಿ" ಎಂದು ಸೂಚಿಸಿದರು. ಆಗ ತಮ್ಮ ರಾಜಕೀಯ ದ್ವೇಷ ಮತ್ತು ವೈರತ್ವವನ್ನು ಮರೆತು ಕುಮಾರಸ್ವಾಮಿಯವರು ಯಡಿಯೂರಪ್ಪನವರಿಗೆ ಫೋನ್ ಮಾಡಿ ನೈಜ ಸ್ಥಿತಿಯನ್ನು ವಿವರಿಸಿದರು. ಕುಮಾರಸ್ವಾಮಿ ಮಾತಿಗೆ ಆ ಕೂಡಲೇ ಯಡಿಯೂರಪ್ಪ ಒಪ್ಪಿಕೊಂಡರು ಎಂಬುದು ಬೇರೆ ಮಾತು.

ಈ ಮಧ್ಯೆ ಅಂಬರೀಶ್ ಮತ್ತು ರಾಕ್‌ಲೈನ್ ವೆಂಕಟೇಶ್‌ಗೂ ಫೋನಾಯಿಸಿದ ಕುಮಾರಣ್ಣ ಈ ವಿಷಯದಲ್ಲಿ ಮುತುವರ್ಜಿ ವಹಿಸುವಂತೆ ಸೂಚಿಸಿದರು. ಒಮ್ಮೆ ಕುಮಾರಣ್ಣನ ಫೋನ್ ಬಂದನಂತರ ಕೆಂಗೇರಿಯಲ್ಲಿರುವ ಅಭಿಮಾನ್ ಸ್ಟುಡಿಯೋ ಜಾಗವನ್ನು ಗುರುತಿಸಿದ್ದು, ಅದರ ಮಾಲೀಕ ಬಾಲಣ್ಣನವರ ಮಗ ಗಣೇಶನನ್ನು ಒಪ್ಪಿಸಿದ್ದು ಹಾಗೆಯೇ ಸರ್ಕಾರದ ಲೆವೆಲ್‌ನಲ್ಲಿ ಈ ಕಾರ್ಯವನ್ನು ವೇಗವಾಗಿ ನಿರ್ವಹಿಸಿದ ಕೀರ್ತಿಯೆಲ್ಲಾ ನೂರಕ್ಕೆ ನೂರು ಅಂಬರೀಶ್‌ಗೆ ಸಲ್ಲಬೇಕು. ಆದರೆ ಈಗ ಆರ್.ಅಶೋಕ್, ಶೋಭ ಕರಂದ್ಲಾಜೆ ವಿಷ್ಣು ಸಮಾಧಿಯ ಹೆಸರಿನಲ್ಲಿ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ಸೆಕ್ಯುಲರ್ ವಿಷ್ಣು!

ವಿಷ್ಣುವರ್ಧನ್ ಬ್ರಾಹ್ಮಣರಾದರೂ ತಮ್ಮ ದಿನನಿತ್ಯದ ಚಟುವಟಿಕೆಯಲ್ಲಿ ಜಾತ್ಯತೀತ ವ್ಯಕ್ತಿಯಾಗಿದ್ದರು. ಹಾಗಂತ ರಾಜಕಾರಣಿಗಳಂತೆ ಇವರೇನೂ ತಮ್ಮ ಜಾತ್ಯತೀತ ನಿಲುವು ಮತ್ತು ಬದ್ಧತೆಯನ್ನು ಎಲ್ಲೂ ಪ್ರದರ್ಶಿಸಲಿಲ್ಲ. ಅವರನ್ನು ಅತ್ಯಂತ ಹತ್ತಿರದಿಂದ ಬಲ್ಲವರಿಗಷ್ಟೇ ಅವರು ಜಾತಿಯನ್ನು ಮೀರಿ ನಿಂತ ವ್ಯಕ್ತಿ ಎಂಬುದು ತಿಳಿದಿತ್ತು.

ಮೊನ್ನೆ ಅವರ ಅಂತಿಮ ಸಂಸ್ಕಾರದ ದಿನದಂದು ಕೂಡ ಅದು ಮತ್ತೊಮ್ಮೆ ಸಾಬೀತಾಯಿತು. ಅವರ ಪಾರ್ಥೀವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಿದವರು ಅವರ ಸಹೋದರ ರವಿ ಅಲ್ಲ; ಬದಲಿಗೆ ಕಳೆದ ಮೂವತ್ತಾರು ವರ್ಷಗಳಿಂದ ವಿಷ್ಣು ಕಾರುಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ ರಾಧಾಕೃಷ್ಣ. ಈತ ಮಲೆಯಾಳಿ. ಹಾಗೆಯೇ ಚಿತೆಮೇಲೆ ಮಡಿಕೆಹೊತ್ತು ಸುತ್ತುಹಾಕಿದ್ದು ಅವರ ಅಡುಗೆ ಭಟ್ಟ ಶ್ರೀಧರ. ಈತ ಕಳೆದ ಮೂರು ದಶಕಗಳಿಂದ ವಿಷ್ಣುಗೆ ಊಟ ಬಡಿಸಿದ ವ್ಯಕ್ತಿ.

ಹಿಂದೊಮ್ಮೆ ಇವರ ಆಪ್ತಸಹಾಯಕ ಮತ್ತು ಮೇಕಪ್ ಅಸಿಸ್ಟೆಂಟಾಗಿ ಒಬ್ಬ ಮುಸ್ಲಿಂ ಹುಡುಗನಿದ್ದ. ಆತನ ಹೆಸರು ಖಾನ್. ತೀರಾ ಇತ್ತೀಚೆಗಷ್ಟೇ ಆತ ಸ್ವತಂತ್ರ ನಿರ್ಮಾಪಕನಾದ. ಇವರ ಮನೆಯ ಕಾವಲುಗಾರ ನೇಪಾಳದವನು. ಹಾಗೆಯೇ ತಮಿಳು, ತೆಲುಗು ಮತ್ತು ಇತರ ಭಾಷೆಯ ಕೆಲಸಗಾರರನ್ನು ಕೂಡ ವಿಷ್ಣು ಆಯಕಟ್ಟಿನ ಜಾಗಗಳಲ್ಲಿ ನೇಮಿಸಿದ್ದರು. ಇಂತಹ ಸೌಹಾರ್ದ ತಂಡದ ಬಗ್ಗೆ ಯಾರಾದರು ಪ್ರಸ್ತಾಪಿಸಿದರೆ "ನನ್ನ ಮನೆ ಮಿನಿ ಇಂಡಿಯಾ ಇದ್ದಂತೆ" ಎಂದು ವಿಷ್ಣು ಹೆಮ್ಮೆಯಿಂದ ಉತ್ತರಿಸುತ್ತಿದ್ದರು. ತಮ್ಮ ತಂಡದ ಸದಸ್ಯರ ಹಬ್ಬ-ಹರಿದಿನಗಳು ಬಂದಾಗ ಸ್ವತಃ ವಿಷ್ಣು ಮುಂದೆ ನಿಂತು ತಮ್ಮ ಮನೆಯಲ್ಲೇ ಅವರೊಂದಿಗೆ ತಾನೂ ಹಬ್ಬ ಆಚರಿಸುತ್ತಿದ್ದರು. ಹೀಗಾಗಿ ವಿಷ್ಣು ಮನೆಯಲ್ಲಿ ಸಂಕ್ರಾಂತಿ, ಗಣೇಶ ಹಬ್ಬ, ರಂಜಾನ್, ಕ್ರಿಸ್‌ಮಸ್.... ಇವೆಲ್ಲವನ್ನು ಆಚರಿಸಲಾಗುತ್ತಿತ್ತು.

ಜಾತ್ಯತೀತತೆಯ ಹೆಸರಿನಲ್ಲಿ ಬೊಗಳೆಬಿಡುವ ರಾಜಕಾರಣಿಗಳಿಗಿಂತ ವಿಷ್ಣು ಎಷ್ಟು ಪ್ರಾಕ್ಟಿಕಲ್ ಆಗಿದ್ದರು ಅಲ್ಲವೇ?

ಶಿಶಿರ ಸೂರ್ಯ

ಹೀರೋ ಆಗುವ ಎಲ್ಲ ಅರ್ಹತೆಯನ್ನೂ ಉಳ್ಳ ನಟನೊಬ್ಬ ಕನ್ನಡ ಚಿತ್ರರಂಗಕ್ಕೆ ದಕ್ಕಿದ್ದಾನೆ.

ಆತ ಯಶಸ್ ಸೂರ್ಯ.

'ಶಿಶಿರ' ಚಿತ್ರದ ನಾಯಕನಟ ಯಶಸ್ ಸೂರ್ಯನ ಬಗ್ಗೆ ಎಲ್ಲ ಕಡೆಗಳಿಂದಲೂ ಒಳ್ಳೆ ಮಾತುಗಳು ಕೇಳಿಬರುತ್ತಿವೆ. "ಇತ್ತೀಚೆಗೆ ಬರುತ್ತಿರುವ ಸಿನಿಮಾಗಳೂ, ಅದರಲ್ಲಿನ ಹೊಸಹೊಸ ನಾಯಕರುಗಳೂ... ಅಬ್ಬಬ್ಬ" ಎಂದು ಮುಖ ಹಿಂಡುತ್ತಿದ್ದವರ ಮುಂದೆ ಈ ಯುವಕ ಸೂರ್ಯನಂತೆ ಹೊಳೆಯುತ್ತಿದ್ದಾನೆ.

ನೋಡಲು ಮುದ್ದು ಮುದ್ದಾಗಿರುವ ಯಶಸ್ ಮೊದಲ ಬಾರಿಗೆ ನಾಯಕನಟನಾಗಿ ನಟಿಸಿದ್ದು 'ಯುಗಯುಗಗಳೆ ಸಾಗಲಿ' ಎಂಬ ಚಿತ್ರದಲ್ಲಿ, ... ರವಿಚಂದ್ರನ್ ಶಿಷ್ಯ ಎಂದು ಹೇಳಿಕೊಳ್ಳುವ ಶಶಾಂಕ್ ರಾಜ್ ... ಈ ಚಿತ್ರ ಬಿಡುಗಡೆಯಾದಾಗ ಯಶಸ್‌ನ ನಟನೆಯ ಬಗ್ಗೆ ... ಮಾತುಗಳು ಕೇಳಿಬಂದಿದ್ದವು. ಆದರೆ ಸಿನಿಮಾ ಮಾತ್ರ ಬಹುಬೇಗ ... ಅಂತ್ಯಗೊಂಡಿತ್ತು, ನಂತರ ಈ ಹುಡುಗ ಗೋಲ್ಡನ್ ಸ್ಟಾರ್ ... ಜೊತೆ 'ಸಂಗಮ'ದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡರೂ 'ಸಂಗಮ' ಸೋತಿದ್ದರಿಂದ ಈತನ ಪ್ರತಿಭೆಗೆ ಅಲ್ಲೂ ಬೆಲೆ ಸಿಗಲಿಲ್ಲ.

ಹಾಗೆ ನೋಡಿದರೆ ಯಶಸ್ ಏಕಾಏಕಿ ಚಿತ್ರರಂಗಕ್ಕೆ ನಾಯಕನಟನಾಗಿ ಎಂಟ್ರಿ ನೀಡಿದವನಲ್ಲ. 'ಓ ಗುಲಾಬಿಯೇ' ಮತ್ತು 'ಸೈನೇಡ್' ಚಿತ್ರಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಈತ ನಟಿಸಿದ್ದ. ರಿಚರ್ಡ್ ಕ್ಯಾಸ್ಟಲಿನೋ ಅವರ 'ಬದಿ' ಎಂಬ ತುಳು ಚಿತ್ರದಲ್ಲೂ ಯಶಸ್ ಪಾತ್ರ ನಿರ್ವಹಿಸಿದ್ದ. 'ಮೊಗ್ಗಿನ ಮನಸು' ಚಿತ್ರದ ನಾಯಕನಟನ ಪಾತ್ರಕ್ಕೆ ಮೊದಲು ಆಯ್ಕೆಯಾಗಿದ್ದು ಇದೇ ಯಶಸ್. ಆದರೆ ಚಿತ್ರೀಕರಣ ಆರಂಭವಾಗಬೇಕು ಎನ್ನುವಷ್ಟರಲ್ಲಿ ಕೆಲವು ವೈಯಕ್ತಿಕ ಕಾರಣಗಳಿಗಾಗಿ ಸ್ವತಃ ಯಶಸ್ 'ಮೊಗ್ಗಿ'ನಿಂದ ಹೊರಬಂದಿದ್ದ. ಸಿಕ್ಕ ಅವಕಾಶವನ್ನು ಬಿಡಲೇಬೇಕಾದ ಸಂದರ್ಭದಲ್ಲೂ ಆ ಪಾತ್ರ ತನ್ನ ಗೆಳೆಯ ಯಶ್‌ಗೆ ಪ್ರಾಪ್ತವಾಗುವಂತೆ ಈತ ನೋಡಿಕೊಂಡಿದ್ದ.



ಸಾಮಾನ್ಯ ಕುಟುಂಬದಿಂದ ಬಂದಿರುವ ಯಶಸ್‌ನ ತಂದೆ ರಾಮಲಿಂಗಯ್ಯ ಕೆಇಬಿಯ ನಿವೃತ್ತ ನೌಕರ. ಮಗ ಸಿನಿಮಾ ಸಹವಾಸಕ್ಕೆ ಬಿದ್ದಿರುವುದರ ಬಗ್ಗೆ ಅವರಿಗೆ ಅಸಮಾಧಾನ. ಆದರೆ ಮಗನ ಬಯಕೆಗಳಿಗೆ ಬೆನ್ನೆಲುಬಾಗಿ ನಿಂತಿರುವುದು ಆತನ ತಾಯಿ ರೂಪಾ. ಇನ್ನೊಂದು ಇಂಟರೆಸ್ಟಿಂಗ್ ವಿಚಾರವೆಂದರೆ ತಮ್ಮ ಮಗ ಹೀರೋ ಆಗಿರುವುದು ಯಶಸ್‌ನ ತಂದೆ ತಾಯಿಗೆ ಗೊತ್ತಾಗಿದ್ದೇ ಮಗನ ಫೋಟೋಗಳು ಮತ್ತು ಜಾಹಿರಾತುಗಳು ಗೋಡೆಮೇಲೆ ಕಂಡ ನಂತರವಂತೆ!

ಗಾಂಧಿನಗರದಲ್ಲಿ ಅವಕಾಶ ಸಿಗುವುದೇ ದೊಡ್ಡದು ಎಂಬಂತಿರುವಾಗ ಸಂಭಾವನೆ ಮಾತು ಬಹಳ ದೂರ. ಹೀಗಿರುವಾಗ ಸಿಕ್ಕ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುವ ಯಶಸ್ ತನ್ನ ನಿತ್ಯದ ಖರ್ಚಿಗೆ ತನ್ನ ಸ್ನೇಹಿತರ ಬಳಿ ಅಷ್ಟೋ ಇಷ್ಟೋ ಸಾಲ ಮಾಡಿಕೊಂಡು ಮೆಂಟೇನು ಮಾಡಿಕೊಳ್ಳುತ್ತಾನೆ.

ಇಷ್ಟೆಲ್ಲಾ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿರುವ ಯಶಸ್ ಇಂದು ಚಿತ್ರರಂಗದಲ್ಲಿ ಗಟ್ಟಿಯಾಗಿ ನೆಲೆನಿಲ್ಲುವ ಎಲ್ಲ ಸಾಧ್ಯತೆಗಳೂ ಗೋಚರಿಸುತ್ತಿವೆ. ಚೆಲುವು, ಎತ್ತರ, ಎಲ್ಲ ರೀತಿಯ ಪಾತ್ರಕ್ಕೂ ಹೊಂದುವ ಮುಖಭಾವ, ನಟನಾ ಪ್ರತಿಭೆ ಇವೆಲ್ಲದಕ್ಕೂ ಮುಖ್ಯವಾಗಿ 'ಸಾಧಿಸಬೇಕು' ಎನ್ನುವ ವಿಹ್ವಲ ಬಯಕೆ ಯಶಸ್‌ನ ವ್ಯಕ್ತಿತ್ವದಲ್ಲಿ ಅಡಕಗೊಂಡಿದೆ.

ಇನ್ನು ಸಾಧನೆಯ ಹಾದಿಯಲ್ಲಿ ಪಾದ ಬೆಳೆಸುವುದಷ್ಟೇ ಬಾಕಿ....

● ಅರುಣ್

Regd.No.KA/RNP/BGS/2036/2008-10 Posted at : Basavanagudi, B'lore-4.
R B P LANKESH, Kannada Weekly Price Rs. 12/- 20-01-2010 RNI No.



ಹೆಣ್ಣುಮಕ್ಕಳ ಬಗ್ಗೆ ಲವಲೇಶವೂ ಗೌರವವಿಲ್ಲದ ಶ್ರೀವತ್ಸ, ಹುಚ್ಚಾಟಗಳನ್ನೇ ಬದುಕು ಎಂದುಕೊಂಡಿರುವ ಸುಷ್ಮಾ ಸದ್ಯ ಮದುವೆಯ ಪ್ರಸ್ತಾಪದೊಂದಿಗೆ ಬೀಗುತ್ತಿದ್ದಾರೆ. ಒಂದು ವೇಳೆ ಈ ಸುದ್ದಿ ಪ್ರಕಟಗೊಳ್ಳುವ ಹೊತ್ತಿಗೇ ಇಬ್ಬರೂ ದೊಡ್ಡ ಕದನದೊಂದಿಗೆ ಮಾಧ್ಯಮದವರ ಮುಂದೆ ನಿಂತು ಡರ್ರೂ... ಬರ್ರೂ... ಎನ್ನದೇ ಇದ್ದರೆ, ಅದೇ ಎಲ್ಲರ ಪುಣ್ಯ!

ತಿರುಪೆ ಡೈರೆಕ್ಟರ್ ತಿಕ್ಕಲು ನಟಿ ಡೆಡ್ಲೀ ಲವ್ವು!

ಆನೆಯೊಂದು ಮಂಗನನ್ನು ಅಪ್ಪಿಕೊಂಡಂತಿರುವ ಈ ಫೋಟೋಗಳು ಯಾವುದೋ ಕಾಮಿಡಿ ಶೋನದ್ದೋ ಅಥವಾ ಸಿನಿಮಾ ಸ್ಟಿಲ್ಲೋ ಅಲ್ಲ.

ಇವು ನಿರ್ದೇಶಕ ರವಿ (ಸ್ತ್ರೀವಸ್ತ್ರ) ಶ್ರೀವತ್ಸ ಮತ್ತು ನಟಿ ಸುಷ್ಮಾ ಎಂಬ ಭಾವಿ ಪತಿ-ಪತ್ನಿಯರ ಆತ್ಮೀಯ ಫೋಟೋಗಳು. ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರರಂಗ ಕಂಡ ಘನಘೋರ ನಿರ್ದೇಶಕ ರವಿ ಶ್ರೀವತ್ಸ ಮತ್ತು ತನ್ನ ತಿಕ್ಕಲುತನಗಳಿಂದಲೇ ಫೇಮಸ್ ಆಗಿರುವ ಸುಷ್ಮಾ ಎಂಬ ನಟಿ ಮದುವೆ ಯಾಗಲು ತೀರ್ಮಾನಿಸಿದ್ದಾರೆ.



ಸದಾ ಒಂದಿಲ್ಲೊಂದು ತರ್ಲೆ ಮಾಡುತ್ತಾ ವಿವಾದಗಳನ್ನೇ ಹೊದ್ದು ಮಲಗುವ ಈ ಇಬ್ಬರೂ ಧುತ್ತನೆ ಎದ್ದು ಬಂದು 'ನಾವಿಬ್ಬರೂ ಮದುವೆ ಆಗ್ತೀವಿ' ಅನ್ನುತ್ತಿರೋದು ಚಿತ್ರರಂಗದ ಎಲ್ಲರನ್ನೂ ದಿಗ್ಭ್ರಾಂತಿಗೊಳಿಸಿದೆ.

ಡೆಡ್ಲಿ ಲವ್!

ಇತ್ತೀಚೆಗೆ ನಟನೆಯಿಂದ ದೂರ ಸರಿದಿರುವ ಸುಷ್ಮಾ ಇದ್ದಕ್ಕಿದ್ದಂತೆ ರವಿ ಶ್ರೀವತ್ಸನ 'ಡೆಡ್ಲಿ ಸೋಮ ಭಾಗ-2' ಚಿತ್ರದ ಸಹಾಯಕ ನಿರ್ದೇಶಕಿಯಾಗಿ ಹೊಸ ಅವತಾರವೆತ್ತಿ ಬಂದಿದ್ದಾಳೆ. ಆ ಸಿನಿಮಾದ ಶೂಟಿಂಗು ಆರಂಭವಾಗುವುದಕ್ಕೆ ಮುನ್ನವೇ - ಅಂದರೆ, ಸ್ಕ್ರಿಪ್ಟ್ ಲೆವೆಲ್‌ನಲ್ಲೇ - ಇವರಿಬ್ಬರ ಲವ್ ಪ್ರಾರಂಭವಾಗಿಬಿಟ್ಟಿದೆ. ಚಿತ್ರರಂಗದಲ್ಲಿ ತೊಡಗಿಸಿಕೊಂಡಿರುವವರು ಒಬ್ಬರನ್ನೊಬ್ಬರು ಪ್ರೀತಿಸಿ ಮದುವೆಯಾಗುವುದು ಹೊಸದೇನೂ ಅಲ್ಲ, ಆದರೆ, ಈಗ ಲವ್ವು, ಡವ್ವು, ಮ್ಯಾರೇಜು ಎಂದೆಲ್ಲ ಹೂಂಕರಿಸುತ್ತಿರುವ ಇಬ್ಬರೂ ಅರಾಜಕ ವ್ಯಕ್ತಿತ್ವವನ್ನೇ ಮೈಗೂಡಿಸಿಕೊಂಡಿರುವುದರಿಂದ ಇದು ವಿಶೇಷ 'ಲವ್ ಸ್ಟೋರಿ' ಆಗಿದೆ.

ತಿಕ್ಕಲು ಹೆಣ್ಣು

"ರವಿ ಶ್ರೀವತ್ಸನನ್ನು ಮದುವೆಯಾಗುತ್ತೇನೆ" ಎಂದು ಹೊರಟಿರುವ ಸುಷ್ಮಾಳಿಗೆ ಇದು ಮೊದಲನೇ ಸಂಬಂಧವೇನೂ ಅಲ್ಲ. ಸುಮಾರು ಹನ್ನೆರಡು ವರ್ಷಗಳ ಹಿಂದೆ ಎಸ್.ಎಸ್. ಶಂಕರ್ ನಿರ್ದೇಶಿಸಿದ್ದ 'ಉಲ್ಟಾ ಪಲ್ಟಾ' ಸಿನಿಮಾದಲ್ಲಿ ಈಕೆಯೇ ನಾಯಕಿಯಾಗಿದ್ದಳು. ಆ ಸಂದರ್ಭದಲ್ಲೇ ಅದೇ ಚಿತ್ರದ ಛಾಯಾಗ್ರಾಹಕ ಅಶೋಕ್ ಕಶ್ಯಪ್‌ರನ್ನೇ ಪ್ರೀತಿಸಿ ಮದುವೆಯಾಗಿದ್ದಳು. ಆದರೆ ಮದುವೆಯಾದ ನಂತರ ತನ್ನ ಗಂಡನ ಬಗ್ಗೆ ಸುಷ್ಮಾ ತುಂಬಾ ಪೊಸೆಸಿವ್ ಆಗಿದ್ದರಿಂದ ಅವರ ದಾಂಪತ್ಯ ಜೀವನದ ಆರಂಭದಲ್ಲೇ ಬಿರುಕುಗಳು ಮೂಡಿದ್ದವು.

ಬೆಳಗ್ಗೆ ಎದ್ದು ಕಶ್ಯಪ್ ಚಿತ್ರೀಕರಣಕ್ಕೂ ಹೋಗದಂತೆ ಸುಷ್ಮಾ ಪೀಡಿಸುತ್ತಿದ್ದಳು. ಹಾಗೊಮ್ಮೆ ಆಕೆಯ ಮಾತನ್ನು ಮೀರಿ ಆತ ಶೂಟಿಂಗ್‌ಗೆ ಹೋದರೆ, ಆತನ ಹಿಂದೆಯೇ ಈಕೆಯೂ ಶೂಟಿಂಗ್ ಸ್ಪಾಟ್‌ಗೆ ಹೋಗಿ ರಂಪ ಮಾಡಿಬಿಡುತ್ತಿದ್ದಳು. ಹೀಗೆ ಒಮ್ಮೆ ಚಿತ್ರೀಕರಣ ನಡೆಯುತ್ತಿದ್ದ ಸೆಟ್‌ಗೆ ಹೋಗಿ ತನ್ನ ಕೈಗೆ ಬ್ಲೇಡು ತಾಕಿಸಿಕೊಂಡು ನರ ಕತ್ತರಿಸಿಕೊಂಡು, ರಕ್ತ ಸುರಿಸಿ ಭಯಾನಕ ದೃಶ್ಯವನ್ನೇ ಕ್ರಿಯೇಟ್ ಮಾಡಿದ್ದಳು ಸುಷ್ಮಾ.

ಅಶೋಕ್ ಕಶ್ಯಪ್‌ರಂಥ ಕ್ರಿಯಾಶೀಲ ವ್ಯಕ್ತಿ ಸುಷ್ಮಾಳನ್ನು ಕಟ್ಟಿಕೊಂಡು ಹೆಣಗಲಾರದೆ ಮದುವೆಯಾದ ಒಂದೂವರೆ ತಿಂಗಳಿಗೇ ಆಕೆಗೆ ಡೈವೋರ್ಸ್ ನೀಡಿ ಹೊರಬಂದಿದ್ದರು. ನಂತರ ಕಥೆಗಾರ್ತಿ ರೇಖಾರಾಣಿಯನ್ನು ಮದುವೆಯಾದರು. ಆದರೆ ಸುಷ್ಮಾಳ ತಿಕ್ಕಲುತನಗಳು ಮಾತ್ರ ಮತ್ತೂ ಮುಂದುವರೆಯುತ್ತಾ ಹೋದವು.

ಗುಬ್ಬಿ ವೀರಣ್ಣನವರ ಕಲಾವಿದ ಕುಟುಂಬದವಳಾದ ಸುಷ್ಮಾ ರಂಗಭೂಮಿ ನಟಿ ಮತ್ತು ಗಾಯಕಿ ಬಿ. ಜಯಶ್ರೀಯವರು ಸ್ವಂತ ಮಗಳು. ಆದರೆ ಜಯಶ್ರೀ ಅವರ ವ್ಯಕ್ತಿತ್ವಕ್ಕೂ ಸುಷ್ಮಾಳ ಬೆಳೆದುನಿಂತ ಪರಿಗೂ ಭಾನು-ಭೂಮಿಯಷ್ಟು ವ್ಯತ್ಯಾಸ.



ಕೆಲ ವರ್ಷಗಳ ಹಿಂದೆ 'ಪಾಪ ಪಾಂಡು' ಸೀರಿಯಲ್‌ನಲ್ಲಿ ನಟಿಸುತ್ತಿದ್ದ ಚಿದಾನಂದ ಎಂಬ ನಟನ ಜೀವನದಲ್ಲೂ ಗದ್ದಲವೆದ್ದಾಗ ಅದರಲ್ಲೂ ಸುಷ್ಮಾಳ ಪಾತ್ರವಿತ್ತು. ಹಾಗೆಯೇ ಆತ ನಟಿಸಬೇಕಿದ್ದ ಭಾ.ಮಾ.ಹರೀಶ್ ನಿರ್ಮಿಸಲಿದ್ದ 'ಅಯ್ಯೋ ಪಾಂಡು' ಎಂಬ ಚಿತ್ರದಲ್ಲಿ ಸುಷ್ಮಾ ಹಿರೋಯಿನ್ ಆಗಿದ್ದು ಅದು ಕೂಡ ಹಲವಾರು ರಗಳೆಗಳಲ್ಲೇ ಅರ್ಧಕ್ಕೆ ನಿಂತಿತ್ತು.

ಆಗ ತಾನು ಗೋವಾದಲ್ಲಿ ನೆಲೆಸಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದ ಸುಷ್ಮಾ ಇತ್ತೀಚೆಗೆ ಇದ್ದಕ್ಕಿದ್ದಂತೆ ಮಾಧ್ಯಮದವರ ಮುಂದೆ ನಿಂತಿದ್ದೂ ಒಂದು ತಲೆಹರಟೆ ಕೇಸಿನೊಂದಿಗೇ. 'ಶಾದಿ ಡಾಟ್ ಕಾಮ್' ಎಂಬ ಮದುವೆ ವೆಬ್‌ಸೈಟಿನ ಮೂಲಕ ಸುನಿಲ್ ರಾವ್ ಎಂಬ ಸಾಫ್ಟ್‌ವೇರ್ ಹುಡುಗನನ್ನು ಪರಿಚಯ ಮಾಡಿಕೊಂಡಿದ್ದ ಸುಷ್ಮಾ ಆತ ಈಗ ತನ್ನನ್ನು ಮದುವೆಯಾಗದೆ ವಂಚಿಸಿದ್ದಾನೆ ಎಂದು ಕಣ್ಣೀರಿಟ್ಟಿದ್ದಳೂ. ಸುನಿಲ್ ರಾವ್ ವಿರುದ್ಧ ಎಚ್.ಎ.ಎಲ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿ, ಟೀವಿ ಚಾನೆಲ್‌ಗಳ ಮುಂದೆ ಕುಳಿತು ಆತನ ಮತ್ತು ತನ್ನ ಮಾನವನ್ನೂ ಹರಾಜು ಹಾಕಿದ್ದಳು ಈ ತಿಕ್ಕಲು ಹುಡುಗಿ.



ಎರಡು ವಾರಕ್ಕೆ ಹಿಂದಷ್ಟೇ ಮತ್ತೊಬ್ಬ ಡುಬಾಕೋರ್ ನಿರ್ದೇಶಕ ಓಂ ಪ್ರಕಾಶ್ ರಾವ್ ಜೊತೆಗೂ ಈಕೆ ಮಾರಾಮಾರಿ ನಡೆಸಿದ್ದಳು. ಅದೂ ಯಾವ ವಿಚಾರಕ್ಕೆ ಗೊತ್ತೆ? 'ಎಕೆ 56' ಚಿತ್ರದಲ್ಲಿನ ದೃಶ್ಯವೊಂದಕ್ಕಾಗಿ ಈಕೆ ಒಳ ಉಡುಪು ಧರಿಸುವ ಬಗ್ಗೆ...!

ಹೀಗೆ ಬರೀ ಕಿರಿಕ್ಕು, ತಾಪತ್ರಯಗಳನ್ನು ಮೈಮೇಲೆಳೆದುಕೊಂಡು ತಿರುಗುವ ಸುಷ್ಮಾ ಅಶಿಸ್ತು, ಆಭಾಸಗಳ ಮೂರ್ತರೂಪ. ವೈಯಕ್ತಿಕ ಜೀವನದಲ್ಲೂ ಒಂದಿಷ್ಟು ಹಿಡಿತ ಹೊಂದಿಲ್ಲದ ಸುಷ್ಮಾ ಯಾವ ಗಳಿಗೆಯಲ್ಲಿ, ಯಾವ ಅವತಾರದಲ್ಲಿ, ಯಾರೊಂದಿಗೆ ಕಾಣಸುತ್ತಾಳೆ ಎಂಬುದನ್ನು ಯಾರಿಂದಲೂ ಊಹಿಸಲು ಸಾಧ್ಯವಿಲ್ಲ.

ಶ್ರೀವತ್ಸ ಪುರಾಣಂ

ಹೋಗ್ಲಿ, ಈಕೆ ಈಗ ಮದುವೆಯಾಗಲು ಹೊರಟಿರುವ ಶ್ರೀವತ್ಸನಾದರೂ ಸಭ್ಯಸ್ಥನಾ ಎಂದು ಹಿಂತಿರುಗಿ ನೋಡಿದರೆ ಕಾಣಸಿಗುವುದು ಬರೀ ಈತನ ಅಸಡಾ ಬಸಡಾ ಕೃತ್ಯಗಳೇ. ಒಮ್ಮೆ ನಟಿ ತಾರಾಳೊಂದಿಗೆ ಅಸಭ್ಯವಾಗಿ ವರ್ತಿಸಿ ಮಕಾಡೆ ಮಲಗಿಸಿಕೊಂಡಿದ್ದ ಶ್ರೀವತ್ಸ, ಮತ್ತೊಮ್ಮೆ ನಟಿ ಶೃತಿಗೆ ನಡುರಾತ್ರಿಯಲ್ಲಿ ಫೋನು ಮಾಡಿ 'ನೈಟ್ ಕಾಲ್‌ಶೀಟ್ ಕೊಡ್ತೀಯಾ?' ಎಂದು ಕೇಳಿ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡಿದ್ದ. ಮತ್ತೊಮ್ಮೆ ತನ್ನನ್ನು ಟೀಕಿಸಿ ಬರೆದರು ಎನ್ನುವ ಕಾರಣಕ್ಕೇ ಹಿರಿಯ ಪತ್ರಕರ್ತರೊಬ್ಬರಿಗೆ ಫೋನು ಮಾಡಿ 'ತಲೆ ಎತ್ತಿಬಿಡ್ತೀನಿ' ಎಂದು ಹುಚ್ಚುನಾಯಿಯಂತೆ ಬೊಗಳಿದ್ದ. ಆಗ ಇಡೀ ಮಾಧ್ಯಮ ಬಳಗವೇ ಶ್ರೀವತ್ಸನ ವಿರುದ್ಧ ಧಿಕ್ಕಾರ ಕೂಗಿತ್ತು.

ಆರಂಭದ ದಿವಗಳಲ್ಲಿ ಒಂದಷ್ಟು ಸಿನಿಮಾಗಳಿಗೆ ಸಂಭಾಷಣೆ ಬರೆದುಕೊಂಡು ಸಣ್ಣಪುಟ್ಟ ಸೈಡ್ ರೋಲ್ ಮಾಡಿಕೊಂಡಿದ್ದ ಶ್ರೀವತ್ಸ ಒಳ್ಳೇ ಟೆಕ್ನಿಷಿಯನ್ ಎಂಬುದನ್ನು ತಳ್ಳಿಹಾಕುವಂತಿಲ್ಲ. ಸಿನಿಮಾದ ತಾಂತ್ರಿಕ ವಿಚಾರದಲ್ಲಿ ಒಂದಷ್ಟು ವಿದ್ಯೆಯಿರುವುದರಿಂದಲೇ ಈತನಿಗೆ ಸಿನಿಮಾ ನಿರ್ದೇಶನದ ಒಂದಷ್ಟು ಅವಕಾಶ ದೊರೆತಿದ್ದು. ಟೆಕ್ನಿಕಲ್ ವಿಚಾರ ಏನೇ ಗೊತ್ತಿದ್ದರೂ ಶ್ರೀವತ್ಸ ನಿರ್ದೇಶಿಸಿದ್ದೆಲ್ಲಾ ಮನೋ ವಿಕೃತಿಯ ಸಿನಿಮಾಗಳೇ. ಈತ ಮೊದಲು ನಿರ್ದೇಶಿಸಿದ್ದ 'ಡೆಡ್ಲಿ ಸೋಮ' ಚಿತ್ರ ರೌಡಿಯೊಬ್ಬನನ್ನು ವಿಜೃಂಭಿಸುವ, ಕೊಲೆಗಾರನೊಬ್ಬನನ್ನು ಸ್ವಾತಂತ್ರ್ಯ ಹೋರಾಟಗಾರನಂತೆ ಬಿಂಬಿಸುವ ಕಥೆಹೊಂದಿದ್ದರೂ ಒಂದಷ್ಟು ಕಮರ್ಷಿಯಲ್ ಎಲಿಮೆಂಟುಗಳಿದ್ದರಿಂದ ಸಿನಿಮಾ ಹಿಟ್ ಆಗಿತ್ತು.

ಆದರೆ ಇದೊಂದು ಚಿತ್ರದ ಯಶಸ್ಸು ಶ್ರೀವತ್ಸನ ತಲೆ ತಿರುಗಿಸಿಬಿಟ್ಟಿತ್ತು. ತಾನು ಏನೇ ಮಾಡಿದರೂ ಗೆಲ್ಲುತ್ತೇನೆ ಎನ್ನುವ ಭ್ರಮೆಯಲ್ಲಿ 'ಬ್ಲೂ ಫಿಲಂ' ಅನ್ನು ಹೋಲುವ 'ಗಂಡಹೆಂಡತಿ' ಎಂಬ ಸಿನಿಮಾ ಮಾಡಿ ಇಡೀ ಸಿನಿಮಾ ಲೋಕವನ್ನೇ ಬೆಚ್ಚಿಬೀಳಿಸಿದ್ದ ಶ್ರೀವತ್ಸ. ಆಮೇಲೆ 'ಈ ರಾಜೀವ್' ಸಿನಿಮಾವನ್ನು ಮಾಡಿ ಅದರ ನಿರ್ಮಾಪಕ ಶೋಭಾ ರಾಜಣ್ಣನನ್ನು ಸಾಲಕ್ಕೆ ದೂಡಿದ್ದ, 'ಮಾದೇಶ' ಎನ್ನುವ ಘನಘೋರ ಸಿನಿಮಾವನ್ನು ನಿರ್ದೇಶಿಸಿ ಶಿವರಾಜ್ ಕುಮಾರರ ಅಷ್ಟೂ ವರ್ಚಸ್ಸನ್ನು ಒಮ್ಮೆಲೇ ನುಂಗಿ ನೀರು ಕುಡಿದಿದ್ದ.

ಹೆಣ್ಣುಮಕ್ಕಳ ಬಗ್ಗೆ ಲವಲೇಶವೂ ಗೌರವವಿಲ್ಲದ ಶ್ರೀವತ್ಸ, ಹುಚ್ಚಾಟಗಳನ್ನೇ ಬದುಕು ಎಂದುಕೊಂಡಿರುವ ಸುಷ್ಮಾ ಸದ್ಯ ಮದುವೆಯ ಪ್ರಸ್ತಾಪದೊಂದಿಗೆ ಬೀಗುತ್ತಿದ್ದಾರೆ. ಒಂದು ವೇಳೆ ಈ ಸುದ್ದಿ ಪ್ರಕಟಗೊಳ್ಳುವ ಹೊತ್ತಿಗೇ ಇಬ್ಬರೂ ದೊಡ್ಡ ಕದನದೊಂದಿಗೆ ಮಾಧ್ಯಮದವರ ಮುಂದೆ ನಿಂತು ಡರ್ರೂ... ಬರ್ರೂ... ಎನ್ನದೇ ಇದ್ದರೆ, ಆದೇ ಎಲ್ಲರ ಪುಣ್ಯ!

● ಅರುಣ್ ಕುಮಾರ್.ಜಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar...